A.—Sri G. B. SHANKAR RAO (Parliamentary Secretary to Minister for Public Works).—

(*a*) On account of change of dam site from Narayanapur to Siddapur and in order to create an independent Division for the construction of the distributaries under T.B.P. High Level Canal of priority basis.

(*b*) Almatti, Munirabad, Bellary, Yermarus, Sindhanur, Davanagere, Manoli, etc., in the Irrigation Projects Zone.

(*c*) Rs, 7,56,883.

(*d*) It is proposed to shift one of the Division under upper Krishna Project Circle to Narayanapur in order to utilise the buildings available there.

CALLING ATTENTION TO A MATTER OF URGENT PUBLIC IMPORTANCE.

re: **Fast by the students of the Maharaja's High School, Mysore**

Sri K. S. SURYANARAYANA RAO (Mysore City).—Sir, I wish to call the attention of the Minister for Education to the incident that took place in the Maharaja's High School, Mysore, resultant from the orders of the Government asking them to leave the School as they have failed in one or two subjects.

†Sri S. R. KANTHI (Minister for Education).—In Government Order No. ED 38 SEI 64 dated 11th June 1964, Government issued certain instructions with a view to check the indiscipline among students. One of them is :—

> "If the student fails in more than three subjects he loses freeship and scholarship for the second term. This may however be restored if the student passes in subject—subjects in the subsequent test. In respect of those who do not enjoy in either freeship or scholarship, they may be warned that if they do not show adequate progress in the tests of the two terms they may have to be issued with transfer certificate as last resort."

The Head Master of the concerned High School has implemented the above order in the interest of discipline and the academic progress of the students. The students have restored to strike against that order. Government feel that the said order will have to be enforced in spite of the strike with the sole intention of putting down the indiscipline among the students. All High Schools in the State have implemented the Government Order dated 11th June 1964 in respect of failures and recovered the fees.

---

†Indicates that the remarks or speeches have not been revised by the member concerned

The students of Maharaja's High School have given up the fast three days ago. The members of the Mysore Legislature have naturally exhibited anxiety for the standard of education going down in the State. Since these measures are meant to raise the standard of education, Hon'ble members will appreciate the measures taken by Government.

Also since Government have sanctioned free Secondary Education from 1966-67, the enforcement of such disciplinary measures is quite essential.

Business of the House.

Mr. SPEAKER.—Everybody seems to be busy till we assemble here. I have been appealing to the members to coordinate. Why not they do that ?

Sri S. SHIVAPPA (Shravanabelagola).—Sir, if you agree and if the leader of the House agrees.....

Mr. SPEAKER.—I have no objection.

Sri S. SHIVAPPA.—Sir, we have got two days for "Industries Demand" and we can take one hour from that.

Mr. SPEAKER.—I want the member to understand the difficulty of co-ordinating the work. I was trying to co-ordinate it myself. The result was dissatisfaction. I do not want dissatisfaction on my account. Let them adjust amongst themselves and utilise the time fully. I am prepared to sit for one hour more. It is difficult to satisfy everybody. Everybody thinks that he is the only person to be heard.

Sri S. SHIVAPPA.—On our side, we will give the agreed list.

Mr. SPEAKER.—If everybody takes more time, naturally the last person is not able to find time. If the leader of opposition wants, he may again meet. What shall I do ? I will suggest that another 30 minutes or 45 minutes for this Demand, but this excess time taken will go out of the Industries demand. I have got two names from the Congress side and names from the Opposition side.

Sri S. NIJALINGAPPA (Chief Minister).—We are agreeable, provided we finish the Industries Demand on the next working day.

Mr. SPEAKER.—I will give one hour more for this on the condition that we will co-operate and see that the Industries Demand is finished on the next working day.

I call upon the Hon'ble member Sri Channabyregowda to speak for ten minutes.

† ಶ್ರೀ ಬಿ. ಚನ್ನಬೈರೇಗೌಡ (ಹೊಸಕೋಟೆ).—ಮಾನ್ಯ ಅಧ್ಯಕ್ಷರೇ, ನಾವು ಆಹಾರ ಪದಾರ್ಥಗಳ ಸ್ವಾವಲಂಬನೆಯ ಬಗ್ಗೆ ಈಗಾಗಲೇ ಮೂರನೇ ಪಂಚ ವಾರ್ಷಿಕಯೋಜನೆಯನ್ನು ಕಳೆದು, ನಾಲ್ಕನೆ ಪಂಚವಾರ್ಷಿಕ ಯೋಜನೆ ಪ್ರಾರಂಭ ಮಾಡಲು ಬರುತ್ತಿದ್ದರೂ ಮೇಜರ್ ಹಾಗೂ ಮೈನರ್ ಇರಿಗೇಷನ್ನು ಪ್ರಾಜೆಕ್ಟುಗಳನ್ನು ಮಾಡಲು ನುಮಾರು ಎಂಟು ಕೋಟಿಯಷ್ಟು ಖರ್ಚು ಮಾಡಿದರೂ ಕೂಡ ಆಹಾರ ಬೆಳೆಯುವವನ ಪರಿಸ್ಥಿತಿ ಉತ್ತಮವಾಗಲಿಲ್ಲ. ಈ ಪರಿಸ್ಥಿತಿಯನ್ನು ನುಧಾರಿಸಲಿಕ್ಕೆ ಆಗದೆ ಕಳೆದ 18 ವರ್ಷಗಳಿಂದ ಇರುವ ಕಾಂಗ್ರೆಸ್ ನರಕಾರದಲ್ಲಿ ಆಹಾರ

(ಶ್ರೀ ಬಿ. ಚನ್ನಬೈರೇಗೌಡ)

ಸಿಗದಂತಹ ಸಂದಿಗ್ಧ ಪರಿಸ್ಥಿತಿ ಬಂದಿದೆ. ನಮ್ಮ ದೇಶದಲ್ಲಿ ಪೂರ್ವ ಕಾಲದಿಂದಲೂ ಆಹಾರ ಪದಾರ್ಥಗಳು ಕಡಿಮೆ ಇದೆ ಎಂದು ನಾವು ಪರದೇಶಗಳಿಂದ ಆಹಾರಪದಾರ್ಥಗಳನ್ನು ತರಿಸಿ ಕೊಳ್ಳುತ್ತಿದ್ದೇವೆ ಎನ್ನುವ ವಿಷಯ ಗೊತ್ತು. ಗೊತ್ತಿದ್ದ ವಿಷಯವಾಗಿದ್ದರೂ ಕೂಡ ಪಂಚವಾರ್ಷಿಕ ಯೋಜನೆಗಳಲ್ಲಿ ಸುಮಾರು ಎಂಟುಸಾವಿರ ಕೋಟಿಯಷ್ಟು ವೆಚ್ಚ ಮಾಡಿ ಆಹಾರದ ವಿಷಯದಲ್ಲಿ ಹದಿನೆಂಟು ವರ್ಷಗಳಿಂದ ಇರುವ ಕ್ರಾಂಗ್ರೆಸ್ಸು ಆಡಳಿತದಲ್ಲಿ ಒಂದು ವರ್ಷವಾದರೂ ಸುಧಾರಿಸಿ ಕ್ಯಾಗದಂತಹ ಪರಿಸ್ಥಿತಿಗೆ ನಾವು ಬಂದಿದ್ದೇವೆ. ಭಾರತದಲ್ಲಿ ನೂರಕ್ಕೆ ನಲವತ್ತರಷ್ಟು ಭೂಮಿ ಯನ್ನು ಸಾಗುವಳಿ ಮಾಡಲಕ್ಕೆ ಸಾಧ್ಯವಿದೆ. ಆದರೆ ಇಲ್ಲ ಉಪಯೋಗ ಮಾಡುತ್ತಿರುವುದು ಕೇವಲ ಶೇಕಡಾ 18 ರಷ್ಟು ಮಾತ್ರ. ಜಪಾನ್ ದೇಶದಲ್ಲಿ ನೋಡಿದರೆ ಶೇಕಡಾ 16 ರಷ್ಟು ಯೂಟಿಲೈಸೇಷನ್ ಅಲ್ಲಿ ಇದ್ದರೂ ಅವರಿಗೆ ಆಹಾರದ ವಿಷಯದಲ್ಲಿ ಸ್ವಾವಲಂಬನೆ ಸಿಕ್ಕಿದೆ. ನಮ್ಮಲ್ಲಿ ಶೇಕಡಾ ನಲವತ್ತರಷ್ಟು ಭೂಮಿಯನ್ನು ಸಾಗುವಳಿ ಮಾಡಲು ಅವಕಾಶವಿದ್ದರೂ ಶೇಕಡ ಹದಿನೆಂಟರಷ್ಟು ಮಾತ್ರ ಉಪಯೋಗಿಸಿಕೊಂಡಿರುವುದರಿಂದ ನಮ್ಮ ದೇಶದಲ್ಲಿ ಆಹಾರದ ಬಗ್ಗೆ ಸ್ವಾವಲಂಬನೆ ಪಡೆಯಲು ಆಗಲಿಲ್ಲ ಎಂದು ಕಾಂಗ್ರೆಸ್ ಸರಕಾರಕ್ಕೆ ಇಲ್ಲ ಮನವಿಮಾಡಿಕೊಳ್ಳಬೇಕಾಗಿದೆ.

ಇನ್ನು ಆಹಾರದ ಹಂಚಿಕೆ ಬಗ್ಗೆ ಹೇಳುವುದಾದರೆ ಸುಮಾರು ಶೇಕಡಾ 80 ರಷ್ಟು ಕಂಟ್ರೋಲ್ ರೇಟು ಎಂದು ಮಾಡಿದ್ದರೂ ಅದಕ್ಕಿಂತ ಶೇಕಡಾ ಇಪ್ಪತ್ತರಷ್ಟು ಹೆಚ್ಚು ಬೆಲೆಯಲ್ಲಿ ಓಪನ್ ಮಾರ್ಕೆಟ್ಟಿನಲ್ಲಿ ಪದಾರ್ಥಗಳು ಸಿಗುತ್ತಿದೆ. ಗ್ರಾಮಾಂತರಗಳಲ್ಲಿ ಶೇಕಡಾ ತೊಂಬತ್ತರಷ್ಟು ಓಪನ್ ಮಾರ್ಕೆಟ್ಟಿನ ರೇಟುಗಳಾಗಿರುತ್ತದೆ. ಅಲ್ಲದೆ ಯಾವುದಾದರೂ ಆಹಾರ ಪದಾರ್ಥಗಳು ತಾಲ್ಲೂಕು ಗಳಿಗೆ ಹೋಗುವಾಗ ಕಂಟ್ರೋಲು ರೇಟುಗಳಲ್ಲಿ ಮಾರಬೇಕೆಂದು ಇದೆ. ಗ್ರಾಮಾಂತರಗಳಲ್ಲಿ ಜನ ಗಳಲ್ಲ ದವಸಗಳಿಲ್ಲದೇ ಇರುವುದರಿಂದ ಅವರನ್ನೂ ಕಾಡಿಗಾಣಿಸಿ ಮಧ್ಯದಲ್ಲಿರುವವರು ಆಹಾರ ಪದಾರ್ಥಗಳನ್ನು ಹೆಚ್ಚು ಬೆಲೆಗೆ ಮಾರಿ ಜನಗಳಿಗೆ ತೊಂದರೆಯಾಗುತ್ತಿದೆ. ಡಿಪೋಗಳಿಗಾಗಿ ಎಂದು ಕೊಡುವ ದವಸಗಳು ದಾರಿಯಲ್ಲೇ ಬ್ಲಾಕು ಮಾರ್ಕೆಟ್ಟಾಗಿ ಹೊರಟು ಹೋಗುತ್ತವೆ. ಇದನ್ನು ಇಲಾಖೆಯವರು ಸರಿಯಾಗಿ ಹಿಡಿಯಬೇಕು. ಇದರಿಂದಾಗಿ ಹಳ್ಳಿಗಾಡಿನ ಜನಕ್ಕೆ ಬಹಳ ತೊಂದರೆ ಯಾಗುತ್ತಿದೆ. ಪಟ್ಟಣಗಳಲ್ಲಿರುವವರು ಪೊದಲಂದಲೂ ಪಟ್ಟಣಗಳಲ್ಲೇ ವಾಸ ಮಾಡಿಕೊಂಡು ದವಸವನ್ನು ಕೊಂಡುಕೊಂಡು ಉಪಯೋಗಿಸುತ್ತಿದ್ದವರು. ಅವರು ಬೆಳೆಯುವುದಕ್ಕೆ ಹೋಗುತ್ತಿರ ಲಲ್ಲ. ಇಲ್ಲೆ ಕಂಟ್ರೋಲು ರೇಟು ಕೆ. ಜಿ. ಗೆ 80 ಪೈಸೆ ಎಂದು ಇದ್ದರೂ ಕೂಡ ಓಪನ್ ಮಾರ್ಕೆಟ್ಟಿ ನಲ್ಲಿ ರೂಪಾಯಿ 1-50 ಪೈಸೆಯಂತೆ ಮಾರುತ್ತಿದ್ದಾರೆ. ಹಳ್ಳಿಗಾಡಿನ ಜನಗಳು ಇಷ್ಟು ಹೆಚ್ಚು ಬೆಲೆ ಕೊಟ್ಟು ಕೊಳ್ಳಲು ಅವರಲ್ಲಿ ಶಕ್ತಿ ಇರುವುದಿಲ್ಲ. ಆದುದರಿಂದ ಸರಕಾರದವರು ಹಳ್ಳಿಗಾಡಿನ ಜನರ ಕಡೆಗೆ ಸ್ವಲ್ಪ ಗಮನ ನೀಡಿ ಸಹಾಯ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮಲ್ಲಿ ಸುಮಾರು ಹತ್ತು ವರ್ಷಕ್ಕೆ ಒಂದು ಸಾರಿ ಅಥವಾ ಇಪ್ಪತ್ತು ವರ್ಷಕ್ಕೊಂದು ಸಾರಿ ಬರಗಾಲ ಎಂದು ಬರುತ್ತಿತ್ತು. ಆಗ ಸರಕಾರದವರೇ ಗಂಜಿ ಕೇಂದ್ರಗಳನ್ನು ಏರ್ಪಾಡಿಸಿ ಜನಕ್ಕೆ ಗಂಜಿ ಹಂಚುತ್ತಿದ್ದರು. ಆಗ ಪೂರ್ಣಯ್ಯನವರ ಚತ್ರ ಎಂದು ಏನು ಹೇಳುತ್ತೇವೋ ಅಲ್ಲ ಗಂಜಿ ಕೇಂದ್ರಗಳನ್ನು ತೆರೆದು ಜನಕ್ಕೆ ಗಂಜಿ ಹಂಚುತ್ತಿದ್ದರು. ಛತ್ರಗಳನ್ನು ಕಟ್ಟಿಸಿರುತ್ತಿದ್ದರು. ಈ ವರ್ಷ ವಿಶೇಷವಾಗಿ ಬೆಂಗಳೂರು ಹಾಗೂ ಕೋಲಾರ ಜಿಲ್ಲೆಯ ಕೆಲವು ಭಾಗಗಳಲ್ಲಿ ಕ್ಷಾಮ ಹಾಗೂ ಬರಗಾಲ ವಿಶೇಷನಾಗಿರುವುದರಿಂದ ಇಲ್ಲ ಗಂಜಿ ಕೇಂದ್ರಗಳ ಸರಕಾರ ತೆರೆಯುವ ಏರ್ಪಾಡು ಮಾಡಬೇಕು. ಇಂತಹ ಗಂಜಿ ಕೇಂದ್ರಗಳನ್ನು ಮಾಡುವಾಗ ಒಂದು ಸಾವಿರ ಜನ ಬಡ ಬಡಬಗ್ಗರಿಗೆ ಅನುಕೂಲವಾಗುವಂತೆ ಗಂಜಿ ಕೇಂದ್ರಗಳನ್ನು ತೆರೆಯಬೇಕು. ಇನ್ನು ನಾಲ್ಕು ತಿಂಗಳ ಕಾಲ ಈ ರೀತಿ ಗಂಜಿ ಕೇಂದ್ರಗಳನ್ನು ಮಾಡಿದರೆ ಅನುಕೂಲವಾಗುತ್ತದೆ ಮತ್ತು ಇದರ ಖರ್ಚನ್ನೂ ಸರಕಾರವೇ ವಹಿಸಿಕೊಂಡು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದಕ್ಕೆ ಸರಬರಾಜನ್ನು ಮುಂದೆ ಹೇಗೆ ಬೇಕಾದರೂ ಮಾಡಬಹುದು ಗಂಜಿ ಕೇಂದ್ರಗಳು ಮಾಡಿದರೆ ಸ್ವಲ್ಪ ಮಟ್ಟಿಗೆ ಬಡಬಗ್ಗರು ಬದುಕುವುದಕ್ಕೆ ಅವಕಾಶವಾಗುತ್ತದೆ.

ನಿನ್ನೆಯ ದಿವಸ ಇಲ್ಲ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಮಾನ್ಯ ಆಹಾರ ಮಂತ್ರಿಗಳು ಯಾರೂ ಆಹಾರವಿಲ್ಲದೆ ಸತ್ತಿಲ್ಲ ಎಂದು ಇಲ್ಲಿ ಹೇಳಿಬಿಟ್ಟರು. ನಿಜವಾಗಿರುವ ಸಂಗತಿಗಳನ್ನು ಒಪ್ಪಿ ಕೊಳ್ಳುವುದರಲ್ಲಿ ನಿಮಗೇನಾಗುತ್ತಿತ್ತು? ಸತ್ಯವಾಗಿರುವ ಸಂಗತಿಗಳನ್ನು ಮರೆಮಾಚುವುದು ಸರಿ ಯಲ್ಲ. ಸತ್ಯವಾದ ಅಂಶಗಳನ್ನು ಸರಕಾರ ಸಾರ್ವಜನಿಕರ ಮುಂದೆ ಇಡುವಾಗ ಅದರ ಅಂಕೆ ಸಂಖ್ಯೆಗಳನ್ನು ಇಲ್ಲ ಕೊಟ್ಟಿದ್ದಾರೆ. ಇದರಲ್ಲ ನಿಜವಾದ ಅಂಶಗಳನ್ನು ತಿಳಿಸಿದರೆ ಜನರೂ ಕೂಡ ಸಹಾಯ ಮಾಡುತ್ತಾರೆ ಮತ್ತು ಒಳ್ಳೆಯ ಸಲಹೆಗಳನ್ನೂ ಕೊಡುತ್ತಾರೆ. ಆದುದರಿಂದ ಇಲ್ಲ

ಉತ್ತರ ಕೊಡುವಾಗ ಯಾರೂ ನತ್ತಿಲ್ಲ ಎಂದು ಹೇಳುವುದು ಸರಿಯಲ್ಲ. ನಿಜವಾದ ನಂಗತಿಗಳು ಬಂದರೆ ಜನಕ್ಕೂ ತಿಳಿಯುತ್ತದೆ. ಸಾವಿರಾರು ಮಂದಿ ನತ್ತಿದ್ದಾರೆ. ಎಂದು ನಮಗೆ ತಿಳಿದು ಬಂದಿದೆ. ಇದರ ಬಗ್ಗೆ ಸರಕಾರ ಗಮನ ಕೊಡಬೇಕು.

ಇನ್ನು ರಾಗಿಯನ್ನು ಹೊರಗಡೆಯಿಂದ ಪಲ್ಲ ಒಂದಕ್ಕೆ 55 ರೂಪಾಯಿನಿಂದ ತಂದು ಮಧ್ಯದಲ್ಲಿರುವವರಿಗೆ 22 ರೂಪಾಯಿಗಳಷ್ಟು ಕೊಟ್ಟು ಫಲ್ಲ ಒಂದಕ್ಕೆ 85 ರೂಪಾಯಿಗಳಂತೆ ಮಾರಿದರೆ ಇದರಿಂದ ಬಡ ಜನಕ್ಕೆ ಸಹಾಯ ಮಾಡಿದಂತೆ ಆಗುತ್ತದೆಯೇ ? ಇಷ್ಟು ಹೆಚ್ಚು ಪರ್ಸೆಂಟೇಜು ರಾಭ ಇಟ್ಟುಕೊಂಡು ಮಾರುವುದು ಸರಿಯಲ್ಲ. ನಾನು ದಾವಣಗರೆ, ವಿಜಾಪುರ ಬಿದರ್ ಈ ಬಾಗಗಳಿಂದ ಜೋಳ ರಾಗಿ ಇವುಗಳನ್ನು ನಮ್ಮ ಮ್ಯುನಿಸಿಪರ್ ಡಿಪೋವಿಗಾಗಿ ತರಿಸುತ್ತಿದ್ದೇನೆ. ಇದರಲ್ಲಿ ನಮಗೆ ಖರ್ಚು ಸುಮಾರು ಮೂರು ಮೂರೂವರೆ ರೂಪಾಯಿಗಳಿಗಿಂತ ಹೆಚ್ಚು ಬರುವುದಿಲ್ಲ ಮತ್ತು ನಾವು ನೋ ಪ್ರಾಫಿಟ್ ನೋ ಲಾಸ್ ಬೇಸಿಸ್ ಮೇಲೆ ಮಾರಾಟ ಮಾಡುತ್ತಿದ್ದೇವೆ. ಸರಕಾರದವರೇ ಇಲ್ಲ 22 ರೂಪಾಯಿಗಳಷ್ಟು ಅಂತರ ಇಟ್ಟು ಇಂತಹ ಬ್ಯಾಂಕುಗಳಿಗೆ ಹಾಗೂ ಇತರ ಸೊಸೈಟಿಗಳಿಗಾಗಿ ಖರ್ಚು ಎಂದು ಮಾಡಿ ಇರುವ ಬೆಲೆಯ ಅರ್ಧದಷ್ಟು ಹೆಚ್ಚು ಮಾಡಿದರೆ ಅದರಿಂದ ಬಡ ಜನರಿಗೆ ಸಹಾಯ ಮಾಡಿದಂತಾಗುತ್ತದೆಯೇ ? ಇದರಿಂದ ಮಧ್ಯವರ್ತಿ ದಳ್ಳಾಳಿಗಳಿಗೆ ಹಾಗೂ ಅವರ ಏಜಂಟರುಗಳಿಗೆ ಅನುಕೂಲವಾಗುತ್ತದೆ. ಇವರುಗಳು ಬ್ಲಾಕ್ ಮಾರ್ಕೆಟ್ಟು ಮಾಡಿಕೊಂಡು ಬೇಕಾದಷ್ಟು ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾರೆ. ಆದ್ದರಿಂದ ನಾನು ಸಲಹೆ ಮಾಡುವುದು ಇಷ್ಟೆ ಎಲ್ಲಿಂದ ನೀವು ದವಸ ತರಬೇಕೆಂದು ಇದ್ದಿರೋ ಅಲ್ಲಿಂದ ಸುಮಾರು ಒಂದು ಸಾವಿರ ಮೂಟೆ ಆಥವಾ ಐದು ಸಾವಿರ ಮೂಟೆಗಳಷ್ಟು ದವಸವನ್ನು ನೇರವಾಗಿ ಆಯಾ ತಾಲ್ಲೂಕುಗಳಲ್ಲಿರುವ ಸೊಸೈಟಿಗಳಿಗೆ ಅಥವ ಡಿಪೋಗಳಿಗೆ ಹಂಚಿ ಮಧ್ಯದಲ್ಲಿರುವ ಏಜೆಂಟರುಗಳಿಗೆ ಅವಕಾಶ ಕೊಡಬಾರದು ಇದರಿಂದ ಕಮ್ಮಿ ಬೆಲೆಯಲ್ಲಿ ಜನಕ್ಕೆ ದವಸಗಳನ್ನು ಮಾರಲು ಅನುಕೂಲವಾಗುತ್ತದೆ. ಈಗ ಹಾಗೆ ಮಾಡದೆ ಸ್ಪೇಟು ಮಾರ್ಕೆಟಿಂಗ್ ಸೊಸೈಟಿಗಾಗಿ ಹಾಗೂ ಇನ್ನಿತರ ಬ್ಯಾಂಕುಗಳವರಿಗಾಗಿ ಎಂದು ಮಾಡುತ್ತಿರುವುದರಿಂದ ಸುಮ್ಮನೆ 22 ರೂಪಾಯಿಗಳಷ್ಟು ಹೆಚ್ಚು ಖರ್ಚು ಬರುತ್ತದೆ. ಮಧ್ಯವರ್ತಿಗಳು ಮತ್ತು ಅವರ ಏಜಂಟರು ಸೊಗಸಾಗಿ ರಾಭಪಡೆಯುತ್ತಿದ್ದಾರೆ. ಆದುದರಿಂದ ಹೆಚ್ಚು ರಾಭ ಇದದೆ ಒಂದೇ ಮಟ್ಟದಲ್ಲಿ ಮಾರಲು ಅನುಕೂಲವಾಗುವಂತೆ ತಕ್ಕ ವ್ಯವಸ್ಥೆ ಮಾಡುವುದು ಉತ್ತಮ ಸೊಸೈಟಿಗಳವರಿಗೆ ಹಂಚುವ ಆಹಾರ ದವಸಗಳು ಸರಿಯಾಗಿ ವಿತರಣೆಯಾಗುತ್ತಿದೆಯೇ ಎನ್ನುವುದರ ಕಡೆಗೆ ಸರಿಯಾದ ನಿಗಾ ಇಡುತ್ತಿಲ್ಲ. ತಾಲ್ಲೂಕಾ ಮಾರ್ಕೆಟಿಂಗ್ ಸೊಸೈಟಿಗಳಲ್ಲಿ ನರಿಯಾಗಿ ಹಂಚಿಕೆಯಾಗುತ್ತದೆಯೇ ಇಲ್ಲವೇ ಎನ್ನುವುದನ್ನು ನರಿಯಾಗಿ ಪರಿಶೀಲನೆ ಮಾಡಲು ಇಲ್ಲರುವ ಎನ್. ಇ. ಇಸ್. ಅಧಿಕಾರಿಗಳೇ ಅಗಲೇ ಇತರ ಅಧಿಕಾರಿಗಳೇ ಆಗಲಿ ಅವರ್ಲರುವ ಎರಡು ಮೂರು ಕ್ಷೇತ್ರಗಳಲ್ಲಿ ಬರುವ ದವಸದ ಹಂಚುವಿಕೆ ಬಗ್ಗೆ ನಿಗಾ ವಹಿಸುವಂತೆ ವ್ಯವಸ್ಥೆ ಮಾಡಬೇಕು ಇದಕ್ಕೆ ತಕ್ಕ ಯೋಜನೆಯನ್ನು ತಯಾರು ಮಾಡಿದರೆ ಸಾರ್ವಜನಿಕರಲ್ಲೂ ಕೂಡ ಒಂದು ವಿಧವಾದ ಅನುಕೂಲ ಸಿಗುತ್ತದೆ.

ಇನ್ನು ಸ್ಯೇರ್ಸಿಟಿ ಕಂಡಿಷನ್ ಬಗ್ಗೆ ಹೇಳುವುದಾದರೆ, ಜನಗಳಿಗೆ ಅಭಾವದ ಕಾಲದಲ್ಲಿ ಇರಾಖೆಯವರು ಅಲ್ಲಲ್ಲಿ ರಕ್ತಗಳನ್ನು ಮಾಡಲು ಹಾಗೂ ಬಾವಿಗಳನ್ನು ತೋಡುವ ಕೆಲಸ ಕೊಡುತ್ತಿದ್ದಾರೆ. ಅಲ್ಲದೆ ಕೆಲವು ಕಡೆಗಳಲ್ಲಿ ಬಾವಿ ತೋಡಿ ಸಾಗುವಳಿ ಮಾಡಲು ' ನರಕಾರದಿಂದ ಸಾಲದ ಮೇಲೆ ಸುಮಾರು ನೂರು ಸಾವಿರದಷ್ಟು ಹಣವನ್ನು ಕೇಳುತ್ತಿದ್ದಾರೆ. ಈ ಸಾಲಗಳನ್ನು ಪಡೆದು ಬಾವಿಗಳನ್ನು ತೋಡಿಸಿ ಹೆಚ್ಚು ದವಸ ಬೆಳೆಯುವೆಕೆಂದು ಕೇಳಿದರೂ ನರಕಾರ ಅವರಿಗೆ ಹಣ ಕೊಡುತ್ತಿಲ್ಲ. ರೈತರು ಅವರ ಆಸ್ತಿಪಾಸ್ತಿಗಳನ್ನು ಒತ್ತೆ ಇಡುತ್ತೇವೆಂದು ನರಕಾರಕ್ಕೆ ಹೇಳಿದರೂ ಇನ್ನೂ ಕೊಟ್ಟಿಲ್ಲ. ಇದಕ್ಕೆ ಬಡ್ಡಿಯನ್ನು ಬೇಕಾದರೂ ಕೊಟ್ಟು ಸಾಲಗಳನ್ನು ಪಡೆಯಲು ಅವರು ಕಾತುರರಾಗಿದ್ದಾರೆ. ಹೀಗೆ ಒಂದೊಂದು ತಾಲ್ಲೂಕಿಗೂ ಇಷ್ಟು ಸಾಲ ಎಂದು ನಿಗದಿ ಮಾಡಿ ನರಕಾರ ಸಹಾಯ ಮಾಡಿದರೆ ಎಷ್ಟೋ ಜನರಿಗೆ ಅನುಕೂಲವಾಗುತ್ತದೆ. ಇದರಿಂದ ಆಹಾರದ ಅಭಾವವನ್ನೂ ನೀಗಲು ಅವಕಾಶವಾಗುತ್ತದೆ. ಇಷ್ಟು ಸಾಲ ಬೇಕೆಂದು ಕೇಳಿದರೆ ಸರ್ಕಾರವು ಅದನ್ನು ಕೊಡುವುದಕ್ಕೆ ಇರುವ ಕಷ್ಟವಾದರೂ ಏನು ಎನ್ನುವುದು ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಈಗ ರಾದರೂ ತಕ್ಕ ವ್ಯವಸ್ಥೆ ಮಾಡಬೇಕು. ಇಂತಹ ಬಾವಿಗಳನ್ನು ತೋಡಿದರೆ ಇರಿಗೇಷನ್ನು ಮಾಡಲು ಅವಕಾಶವಾಗುತ್ತದೆ ಇದನ್ನು ಖಂಡಿತ ಮಾಡಿಸಿಕೊಡಬೇಕು,

ಇನ್ನು ಸಹಕಾರ ಸಂಘಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುತ್ತಾ ಇದ್ದೀರಿ. ಸುಮಾರು ಏಳೆಂಟು ಗ್ರಾಮಗಳಿಗೆ ಸೇರಿದಂತೆ ಒಂದು ಸೊಸೈಟಿ ಇರುತ್ತದೆ. ಎಲ್ಲರೂ ಕೂಡ ಅಲ್ಲಗೇ ಬಂದು ಪದಾರ್ಥಗಳನ್ನು ತೆಗೆದುಕೊಂಡು ಹೋಗಬೇಕಾಗುತ್ತದೆ. ಆದ್ದರಿಂದ ಅಂತಹ ಕಡೆಗಳಲ್ಲಿ ಯಾರಾದರೂ ಪ್ರೈವೇಟು ಡೀಲರ್ಸ್ ಮಾರಾಟ ಮಾಡುವುದಕ್ಕೆ ಮುಂದೆ ಒಂದರೆ ಅಂತಹವರಿಗೆ ಲೈಸನ್ಸ್ ಕೊಟ್ಟರೆ ಮೂರು ಮೈಲಿ, ನಾಲ್ಕು ಮೈಲಿಗಳಿಂದ ಜನರು ಬರಬೇಕಾದ ಕಷ್ಟ ತಪ್ಪುತ್ತದೆ. ಈ ಒಂದು ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

†ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಹೋಲ್‌ಸೇಲ್ ಡೀಲರ್ಸ್‌ಗೆ ಲೈಸೆನ್ಸ್ ಕೊಟ್ಟಿರುವ ವಿಷಯದಲ್ಲಿ ಬಹಳ ದೂರುಗಳು ಇವೆ, ಅದಕ್ಕೆ ನರಿಯಾದ ವ್ಯವಸ್ಥೆ ಮಾಡಬೇಕು. ತಾವು ಎಷ್ಟೋ ಜನ ಡಿಸ್ಟ್ರಿಬ್ಯೂಟರ್ಸ್‌ನ್ನ ಮಾಡಿದ್ದೀರಿ. ಅವರು ಸೇಲ್ಸ್‌ಟ್ಯಾಕ್ಸ್, ಇನ್‌ಕಂ ಟ್ಯಾಕ್ಸ್ ಇವುಗಳನೆಲ್ಲಾ ಕೊಟ್ಟಿದ್ದಾರೆಯೇ ಇಲ್ಲವೇ ಎಂಬುದನ್ನೆಲ್ಲಾ ನೋಡಿ ನರಿಮಾಡುತ್ತೇವೆ ಎಂದು ಹಿಂದೆ ಹೇಳಿದ್ದೀರಿ. ಅದನ್ನು ಇದುವರೆಗೂ ಮಾಡಿಲ್ಲ, ಇದಕ್ಕೆ ಬಲವತ್ತರವಾದ ಕಾರಣವೇನು ? ಇದನ್ನು ದಯವಿಟ್ಟು ವಿಚಾರ ಮಾಡುತ್ತೀರಿ ಎಂದು ಹೇಳಿ ನಾನು ನಂಬಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಲೀಡರ್ ಅವರು ಮಾತನಾಡುವಾಗ ರಾಗಿ, ಜೋಳ ಎಲ್ಲಿಂದ ಬರುತ್ತದೆ. ಎಲ್ಲಿಂದ ತರಬೇಕು ಎಂದು ಕೇಳಿದರು. ನಾನಾದರೂ ಹೇಳುತ್ತೇನೆ, ಅವರು ದೇಶದ ಮುಖ್ಯ ಮಂತ್ರಿಗಳಾಗಿರುವುದರಿಂದ ರಾಗಿ ಎಲ್ಲಿ ಬೆಳೆಯುತ್ತಾರೆ ಎಂಬುದನ್ನು ಅವರೇ ನೋಡಲಿ ಮುಖ್ಯವಾಗಿ ಒರಿಸ್ಸಾ, ಮದರಾಸ್ ಮತ್ತು ಆಂಧ್ರದಲ್ಲಿ ಅದನ್ನು ಬೆಳೆಯುತ್ತಾರೆ. ಇಂಡಿಯಾ ದೇಶವೆಲ್ಲಾ ಒಂದು, ಇಂಡಿಯಾದೇಶದಲ್ಲಿ ನಾವು ಇದ್ದರೂ ಅದನ್ನು ಅವರು ನಮಗೆ ಕೊಡದೆ ರಾಗಿ ಕಳುಹಿಸುವುದಿಲ್ಲ ಅಂತ ಹೇಳಿ ಅದನ್ನು ಹಿಟ್ಟು ಮಾಡಿಸಿ ಕಳುಹಿಸುತ್ತಾ ಇದ್ದಾರೆ, ಅದನ್ನು ಬೆಂಗಳೂರಿಗೆ ತಂದು ಇಲ್ಲಿ ಮಾರುತ್ತಾ ಇದ್ದಾರೆ. ಬೇಕಾದರೆ ಅದನ್ನು ಸಾಬೀತು ಮಾಡುತ್ತೇನೆ. ಮದರಾಸ್, ಆಂಧ್ರ ಮತ್ತು ಒರಿಸ್ಸಾದಿಂದ ಅದನ್ನು ಆರಿಸುವುದಕ್ಕೆ ಹೆಚ್ಚಿನ ಅಧ್ಯತೆ ಕೊಡಬೇಕೆಂದು ಹೇಳುತ್ತೇನೆ. ಜೋಳ ಎಷ್ಟು ಬೇಕಾದರೂ ತರಬಹುದು, ಜೋಳ ಬೇಕಾದಷ್ಟು ಇದೆ ಎಂದು ಆಹಾರ ಮಂತ್ರಿಗಳು ಹೇಳುತ್ತಾರೆ. ಲೆವಿ ಪದ್ಧತಿ ಬಂದ ಮೇಲೆ ಏನಾಗಿದೆ ಎಂದರೆ ರೈತರಿಂದ ವಸೂಲು ಮಾಡುವುದಿಲ್ಲ, ಯಾರು ಕೊಂಡುಕೊಳ್ಳುತ್ತಾರೆಯೋ ಅವರಿಂದ 25 ಪರ್ಸೆಂಟ್ ಡಿಪೋಗೆ ಹೋಗಬೇಕೆಂದು ಹೇಳುತ್ತಾರೆ. ರೇಟ್ ಕಾಂಪೆನ್‌ಸೇಟ್ ಮಾಡುವಾಗ 85,90,105 ರೂಪಾಯಿಗಳವರೆಗೂ ರೇಟ್ ಬೀಳುತ್ತದೆ. ಇದನ್ನು ತಪ್ಪಿಸಬೇಕು.

ಆಹಾರದ ಧಾರಣೆ ಈಗ ಜಾಸ್ತಿಯಾಗಿರಬೇಕಾದರೆ ಇದಕ್ಕೆ ಕಾರಣ ಕೊಯಮತ್ತೂರಿನ ನೋಟುಗಳೇ ಆಗಿದೆ. ಒಂದೇ ಕಡೆ ಬಹಳ ದುಡ್ಡು ಶೇಖರಣೆಯಾಗಿ ಅಂತಹ ಜನ ಯಾವ ಪದಾರ್ಥಕ್ಕೆ ಎಷ್ಟು ಬೇಕಾದರೂ ಬೆಲೆ ಕೊಟ್ಟು, ಸ್ಟಾಕ್ ಮಾಡಿಕೊಂಡು ಬ್ಯಾಕ್ ಮಾರ್ಕೆಟ್‌ನಲ್ಲಿ ಮಾರಾಟ ಮಾಡುತ್ತಾ ಇದ್ದಾರೆ. ಇದು ಕೊಯಮತ್ತೂರಿನ ನೋಟಿನಿಂದ ನಡೆಯುತ್ತಾ ಇದೆ. ಪತ್ರಿಕೆಗಳಲ್ಲಿ ಯಾರೋ ಚಿಲ್ಲರೆ ಪಲ್ಲರೆಯವನ್ನು ಹಿಡಿದಿದ್ದಾರೆ ಎಂಬುದನ್ನು ಕೇಳುತ್ತೇವೆಯೇ ಹೊರತು ಕೇಸು ಏನಾಯಿತು ಎಂಬ ವಿಷಯ ಗೊತ್ತಾಗುತ್ತಾ ಇಲ್ಲ. ಇವತ್ತೂ ಕೂಡ ಕೊಟ್ಯಾಂತರ ರೂಪಾಯಿಗಳ ಕೊಯಮತ್ತೂರಿನ ನೋಟು ಚಲಾವಣೆಯಾಗುತ್ತಿದೆ. ಇದಕ್ಕೆ ತೀವ್ರ ಗಮನ ಕೊಟ್ಟು ಹಣ ಉಬ್ಬರವನ್ನು ಇಳಿಸುವುದಕ್ಕೆ ಮೊದಲನೆಯ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಕಡಲೆ ಬೇಳೆ ಇವತ್ತು ಬಹಳವಾಗಿ ದುರುಪಯೋಗವಾಗುತ್ತಾ ಇದೆ. ಇವತ್ತು ನಮ್ಮ ಜನಗಳು ಕಡಲೆ ಕಾಳು ಸಿಕ್ಕಿದರೂ ಕೂಡ ಅದನ್ನು ಬೇಯಿಸಿಕೊಂಡು ತಿನ್ನುವುದಕ್ಕೆ ಸಿದ್ಧವಾಗಿದ್ದಾರೆ. ಆದ್ದರಿಂದ ಅದನ್ನು ಬೇಳೆ ಮಾಡಿಸಬೇಡಿ, ಕಡಲೇ ಕಾಳನ್ನೇ ಕೊಡಿ ಎಂದು ನಾನು ಸಲಹೆ ಮಾಡುತ್ತೇನೆ.

ಸರ್ಕಾರದವರು ಈಗ ಆಹಾರ ದಿನಸಿಮೇಲೆ ಒಂದು ಕ್ವಿಂಟಾಲಿಗೆ 20 ರೂಪಾಯಿ ಖರ್ಚು ಬರುವಂತಹ ವ್ಯವಸ್ಥೆ ಮಾಡುತ್ತಾ ಇದ್ದೀರಿ. ಇದನ್ನು ನಿಲ್ಲಿಸುವುದಕ್ಕೆ ಸಾಧ್ಯವಿದೆ. ಹೋಲ್‌ಸೇಲ್ ಡಿಲರ್ಸ್‌ಗೆ ಇರತಕ್ಕ ಕಮಿಷನನ್ನು ಕಡಿಮೆ ಮಾಡಿದರೂ ಕೂಡ ಅದನ್ನು ತೆಗೆದುಕೊಂಡು ವ್ಯಾಪಾರ ಮಾಡತಕ್ಕ ಜನ ಬೇಕಾದಷ್ಟು ಜನ ಇದ್ದಾರೆ, ಆ ರೀತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ಬಿ. ಡಿ. ಜತ್ತಿ (ಆಹಾರ ಶಾಖೆಯ ನಚಿವರು).—ಎಷ್ಟು ಪರ್ಸೆಂಟ್ ಕೊಟ್ಟರೆ ಮಾಡಲಿಕ್ಕೆ ಸಿದ್ಧವಾಗಿದ್ದಾರೆ ಅಂತಹವರ ಹೆಸರು ಕೊಡಿ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಒಂದು ಪರ್ಸೆಂಟಿಗೂ ಕೂಡ ಮಾಡಲಿಕ್ಕೆ ಸಿದ್ಧವಾಗಿದ್ದಾರೆ, 7-8 ಹೆಸರುಗಳನ್ನು ಹೇಳುತ್ತೇನೆ, ಅದನ್ನು ಬೇಕಾದರೆ ಅವರು ವಿಚಾರ ಮಾಡಲಿ.

ಶ್ರೀ ಬಿ. ಡಿ. ಜತ್ತಿ.—ಹೆಸರು ಕೊಡಿ, ವಿಚಾರ ಮಾಡುತ್ತೇನೆ.

ಉಪಾಧ್ಯಕ್ಷರು.—ಈಗ ಆ ಹೆಸರುಗಳನ್ನು ಹೇಳುವುದು ಬೇಡಿ ಆಮೇಲೆ ಅವರಿಗೆ ಅದನ್ನು ಕಳುಹಿಸಿಕೊಡಿ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಆಹಾರ ಮಂತ್ರಿಗಳು ಆಹಾರ ಧಾನ್ಯವನ್ನು ಎಲ್ಲಿಂದ ತಂದು ಹಂಚುವುದು ಎಂಬುದನ್ನು ಯೋಚನೆ ಮಾಡುತ್ತಾ ಇದ್ದಾರೆಯೇ ಏನಾ ಜಾಸ್ತಿ ಉತ್ಪನ್ನ ಮಾಡುವುದಕ್ಕೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ವ್ಯವಸಾಯದ ಇರಾಖೆಯವರು, ನೀರಾವರಿ ಇರಾಖೆಯವರು ಎಲ್ಲರೂ ಕೂಡ ಸೇರಿ ಶ್ರಮಪಟ್ಟರೆ ಮಾತ್ರ ಹೆಚ್ಚು ಆಹಾರ ಧಾನ್ಯವನ್ನು ಬೆಳೆಸುವುದಕ್ಕೆ ಸಾಧ್ಯವೇ ಹೊರತು ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಇವತ್ತಿನ ದಿವಸ ಎಕ್ಸ್‌ಟ್ರಾ ಲ್ಯಾಂಡ್, ಮತ್ತು ಫಾರೆಸ್ಟ್ ಲ್ಯಾಂಡ್ ಅಂತ ಹೇಳಿ ಕೆಲವು ಜಮೀನನ್ನು ರಿಸರ್ವ್ ಮಾಡಿದ್ದೀರಿ. ಬೇಕಾದಷ್ಟು

ನೀರು ಇದ್ದರೂ ಸಹ ಅಲ್ಲಿ ವ್ಯವಸಾಯ ಮಾಡಲಕ್ಕೆ ಬರುವುದಿಲ್ಲ. ಅಂತಹ ಕಡೆ ವ್ಯವಸಾಯ ಮಾಡಲಕ್ಕೆ ಮೊದಲನೆಯ ಪ್ರಾಶಸ್ತ್ಯ ಕೊಡಬೇಕೇ ಏನಾ ಅದನ್ನು ಸುಮ್ಮನೆ ವೇಸ್ಟ್ ಲ್ಯಾಂಡ್ ಆಗಿ ಇಟ್ಟುಕೊಳ್ಳುವುದು ಸರಿಯಲ್ಲ ಎಂದು ಹೇಳುತ್ತೇನೆ. ಇದಕ್ಕೆ ಗಮನ ಕೊಡಬೇಕೆಂದು ನಲಹೆ ಮಾಡುತ್ತೇನೆ.

ಗಲಾಟೆ ಮಾಡದಿದ್ದರೆ ಏನೂ ಆಗುವುದಿಲ್ಲ. ಈಗ ಕೇರಳದಲ್ಲಿ ಒಬ್ಬ ಮನುಷ್ಯನಿಗೆ 120 ಗ್ರ್ಯಾಂವರಿಗೂ ಗೋಧಿ ಮತ್ತು 160 ಗ್ರ್ಯಾಂವರೆಗೂ ಅಕ್ಕಿಯನ್ನು ಕೊಡುತ್ತಾ ಇದ್ದಾರೆ. ಇಲ್ಲಿ ಹೋಟೇಲುಗಳಲ್ಲಿ ಅಕ್ಕಿ ಪದಾರ್ಥ ಮಾಡಬಾರದು ಎಂದು ಮಾಡಿದ್ದೀರಿ. ಮೈಸೂರು ದೇಶದ ಜನ ಎಷ್ಟು ಸಾಮ್ಯವಾಗಿ ವರ್ತಿಸಿದರೂ ಕೂಡ ಅಕ್ಕಿ ಕೊಡದಿದ್ದರೆ ನಿಮ್ಮ ಆಹಾರದ ಪರಿಸ್ಥಿತಿ ಎಷ್ಟು ಕಠಿಣವಾಗಿದೆ ಎಂಬುದನ್ನು ತಾವೇ ಯೋಚನೆ ಮಾಡಬೇಕು. ಒಂದು ಪಂಚಾಯ್ತಿಗೆ ಒಂದು ಕ್ವಿಂಟಾಲ್ ಅಕ್ಕಿ ಕೂಡ ಕೊಡವೇ ಇರತಕ್ಕ ಪರಿಸ್ಥಿತಿ ಇರುವಾಗ ಯಾವ ಮನುಷ್ಯ ಬೆಳೆಯುತ್ತಾನೋ ಅವನಿಗೆ ಆಹಾರ ಕೊಡತಕ್ಕ ವ್ಯವಸ್ಥೆ ಏನು ಮಾಡಿದ್ದೀರಿ ಎಂದು ಕೇಳುತ್ತಾ ಇದ್ದೇನೆ. ಆಂಧ್ರ ಮದರಾಸು ಪ್ರಾಂತ್ಯದಲ್ಲಿ ಇರಿಗೇಷನ್ ವೆರ್ಸ್ ಏಪರೀತವಾಗಿದೆ. ಮೈಸೂರು ನಂಸ್ಥಾನ ನೀರಾವರಿ ಬಾವಿ ಮತ್ತು ವಿದ್ಯುಚ್ಛಕ್ತಿ ಒದಗಿಸುವ ವಿಷಯದಲ್ಲಿ ಬಹಳ ಕೆಳಮಟ್ಟದಲ್ಲಿ ಇದೆ. ಹೀಗಿರುವಾಗ ನಮ್ಮ ಆಹಾರ ಪರಿಸ್ಥಿತಿ ಯಾವ ಕಾರಣದಿಂದಲೂ ಸುಧಾರಿಸುವುದಿಲ್ಲ ಎಂದು ನರ್ಕಾರದವರಿಗೆ ಒತ್ತಾಯವಾಗಿ ಹೇಳುತ್ತಾ ಇದ್ದೇನೆ. ಪರಿಹಾರ ಕಾಮಗಾರಿಗಳನ್ನು ಕೆಲವು ತಿಂಗಳುಗಳಿಂದ ಮಾಡಿಸುತ್ತಾ ಇದ್ದೀರಿ. ಕಾಂಟೂರ್ ಬಂಡಿಂಗ್ ವರ್ಕ್ಸ ಈ ಬೇಸಿಗೆಯಲ್ಲಿ ನಡೆಯುವುದಕ್ಕೆ ಸಾಧ್ಯವಿಲ್ಲ; ಕಾರಣ ಮಣ್ಣು ಬಹಳ ಗಟ್ಟಿಯಾಗಿ ಇರುತ್ತದೆ. ಆದ್ದರಿಂದ ತಾಲ್ಲೂಕುಗಳಲ್ಲಿ ಮತ್ತು ದೇಶಾದ್ಯಂತ ಎಲ್ಲ ಕ್ಷಾಮ ಇರುತ್ತದೆ ಅಂತಹ ಕಡೆಯಲ್ಲಿ ಕಾಂಟೂರು ಬಂಡಿಂಗ್ ಕೆಲಸ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಈಗ ತಾವು ನೋಡುವುದಾದರೆ ಇದನ್ನು ತಮಗೆ ಕಳುಹಿಸಿ ಕೊಡುತ್ತೇವೆ. ಇದು ನೋಡಿ, ಇದಕ್ಕೆ ಕಾತಾಳೆಗೆಡ್ಡೆ ಎಂದು ಹೇಳುತ್ತಾರೆ. ಅರಸೀಕೆರೆ, ತಿಪಟೂರು, ಜಾವಗರ್ ಈ ಪ್ರದೇಶಗಳಲ್ಲೆಲ್ಲಾ ಇನ್ನೇನೂ ಸಿಕ್ಕದೆ ಜನ ಇದನ್ನು ತಿನ್ನುತ್ತಾ ಇದ್ದಾರೆ. ಇದು ಎಷ್ಟು ಗಟ್ಟಿಯಾಗಿದೆ ತಾವೇ ನೋಡಿ, ಇದರಿಂದ ಜನರಮೇಲೆ ಏನು ಪರಿಣಾಮವಾಗುತ್ತದೆ ಎಂಬುದನ್ನು ತಾವು ವಿಚಾರ ಮಾಡಬೇಕು. ಬಿರಿರು ಅಕ್ಕಿ ತಿನ್ನುತ್ತಾರೆ ಎಂದು ತಾವು ಹೇಳಿದಿರಿ, ಬಿದಿರು ಅಕ್ಕಿಯನ್ನು ತಿನ್ನುತ್ತಾರೆ, ಏದಿ ಇಲ್ಲದೇ ತಿನ್ನುತ್ತಾರೆ, ಅದು ಬಹಳ ಉಷ್ಣ ಅದನ್ನು ತಿಂದರೆ ಭೇದಿ, ಆಮಶಂಕೆ ಇದೆಲ್ಲಾ ಶುರುವಾಗಿ ಜನ ನತ್ತು ಹೋಗುತ್ತಾರೆ. ಯಾರೂ ಕೂಡ ಸತ್ತಿಲ್ಲ ಎಂದು ತಾವು ಹೇಳುತ್ತೀರಿ. ಆಹಾರ ಇಲ್ಲದೇ ಇದ್ದರೆ ಒಂದು ದಿವಸ ಎಂಟು ದಿವಸದಲ್ಲಿ ಯಾರೂ ಸಾಯುವುದಿಲ್ಲ. ಆಹಾರ ಇಲ್ಲದೇ ಖಾಯಿಲೆಬಂದು ತೊಂದರೆಪಟ್ಟು ಸಾಯುತ್ತಾರೆಯೇ ಏನಾ ಆಹಾರ ಇಲ್ಲದೇ 8-10 ದಿವಸ ಇದ್ದರೂ ಕೂಡ ಯಾರೂ ಸಾಯುವುದಿಲ್ಲ.

10–00. A. M.

ಈ ದಿವಸ ಆಹಾರವಿಲ್ಲದೆ ಎಂಟು ದಿವಸಗಳಿಗೊಮ್ಮೆ ಊಟಮಾಡಿ ಅನೇಕ ರೋಗರುಜಿನಗಳಿಗೆ ತುತ್ತಾಗಿ ಆಸ್ಪತ್ರೆಗೆ ಸೇರಿ ಜನರು ಸಾಯುತ್ತಿದ್ದಾರೆ, ಇದು ಬಹಳ ಅನ್ಯಾಯ. ಮೆಜೆಸ್ಟಿಕ್ ಹತ್ತಿರ ವಿರುವ ಅಂಗಡಿಯಲ್ಲಿ ಕಲ್ಲುಮಣ್ಣು ವಿಪರೀತವಾಗಿ ಬೆರೆಸಿರುವ ಅಕ್ಕಿ ಮಾರಾಟಮಾಡುತ್ತಿದ್ದಾರೆ, ಅಧ್ಯಕ್ಷರಿಗೆ ಸ್ಯಾಂಪರ್ ಕಳುಹಿಸುತ್ತೇನೆ, ಅದನ್ನು ಬೇಕಾದರೆ ಸರಕಾರ ನೋಡಬಹುದು.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ).—ಸ್ವಾಮಿ, ನಾನೊಂದು ಕ್ರಿಯಾಲೋಪವನ್ನು ಸೂಚಿಸುತ್ತೇನೆ. ಜಾದುಗಾರರ ಹಾಗೆ ಈ ಸಭೆಯಲ್ಲಿ ಹೀಗೆ ಪ್ರದರ್ಶನಮಾಡುವುದು ಸರಿಯೆ ?

ಉಪಾಧ್ಯಕ್ಷರು.—ಇಲ್ಲಿ ಎಗ್ಜಿಬಿಟ್ ಮಾಡುವುದಕ್ಕೆ ಅವಕಾಶವಿಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಗಣೇಶ ಪ್ರಾವಿಷನ್ ಸ್ಟೋರ್ಸ್‌ನಲ್ಲಿ ಮಾರುತ್ತಿರುವ ಅಕ್ಕಿ ಹೀಗೆ ಕಲ್ಲುಮಣ್ಣಿನಿಂದ ತುಂಬಿದೆ. ಅನೇಕ ಸಾರಿ ಯಾವ ಡಿಪೋದಲ್ಲಿ ಹೀಗೆ ಮಾರುತ್ತಿದ್ದಾರೆಂಬುದನ್ನು ಹೇಳಬೇಕೆಂದು ತಿಳಿಸಿದ್ದರು. ಅದಕ್ಕಾಗಿ ಹೇಳಿದ್ದೇನೆ.

ಕೂಳುಕುತ್ತವೆ ಕುತ್ತ ಕೂಳು ಮೇಳವೆ ಮೇಳ,
ಕೂಳೊಂದು ಗಳಿಗೆ ತಡೆದಿಹರೆ ಪಾತರದ,
ಮೇಳ ಮುರಿದಂತೆ ಸರ್ವಜ್ಞ.

ಕಳಬೇಡ, ಕೊಲಬೇಡ, ಹುಸಿಯ ನುಡಿಯಲುಬೇಡ...ಎಂದು ಸರ್ವಜ್ಞ ಮೂರ್ತಿ ಹೇಳಿದ್ದಾನೆ. ಆದರೆ ಸರಕಾರದವರು ನೂರಕ್ಕೆ 99 ಭಾಗ ಸುಳ್ಳು ಹೇಳುತ್ತಾರೆ.

ಉಪಾಧ್ಯಕ್ಷರು.—'ಸುಳ್ಳು' ಎಂಬ ಪದ ಪಾರ್ಲಿಮೆಂಟರಿ ಪದವಲ್ಲ, ಅದನ್ನು ಮಾನ್ಯ ಸದಸ್ಯರು ವಾಪಸು ತೆಗೆದುಕೊಳ್ಳಬೇಕು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಹಾಗಾದರೆ ವಾಪಸು ತೆಗೆದುತೊಳ್ಳುತ್ತೇನೆ. ನತ್ಯಕ್ಕೆ ದೂರವಾದ ಉತ್ತರವನ್ನು ಹೇಳುವುದನ್ನು ಶಾಸನಸಭೆಯಲ್ಲಿ ಕಡಮೆಮಾಡಬೇಕು ನಾನು ಹೇಳುವುದರಲ್ಲಿ ತಪ್ಪಿದ್ದರೆ ಒಪ್ಪಿಕೊಳ್ಳುತ್ತೇನೆ.

ಬಿ. ಎಂ. ಡಿ. ಇಲಾಖೆಯಲ್ಲಿ ಆಗುವ ಅನ್ಯಾಯ ವಿಶೇಷವಾಗಿದೆ, ಈ ಇಲಾಖೆಯಲ್ಲಿ ಎಷ್ಟು ರಾಭ ಬರಬೇಕೋ ಅಷ್ಟು ಬರುತ್ತಿಲ್ಲ. ಇನ್‌ಫರ್ಮೇಷನ್ ಮತ್ತು ಪಬ್ಲಿಸಿಟಿ ಇಲಾಖೆಯವರು ಮಂತ್ರಿಗಳ ಪ್ರವಾಸ, ಅವರು ಮಾಡುವ ಅನಾವರಣ ಮಹೋತ್ಸವ ಮುಂತಾದುವುಗಳನ್ನು ಮಾತ್ರ ಪ್ರಚಾರಮಾಡುತ್ತಾರೆ ಬೆಳಿಗ್ಗೆ ಮತ್ತು ಸಾಯಂಕಾಲ calls of nature ವಿಚಾರ ಬಿಟ್ಟು ಉಳಿದ ವಿಚಾರ ಮಂತ್ರಿಗಳಿಗೆ ಸಂಬಂಧ ಪಟ್ಟಿರುವುದನ್ನೆಲ್ಲಾ ಪ್ರಚಾರಮಾಡಿ ಅವರ ಫೋಟೋಗಳನ್ನು ಪ್ರಕಟಿಸುತ್ತಾರೆ. ಇದಕ್ಕೆ ಸುಮಾರು 18 ಲಕ್ಷ ರೂಪಾಯಿಗಳನ್ನು ಖರ್ಚುಮಾಡುತ್ತಾರೆ, ಇದು ಅನ್ಯಾಯ. ಇದೇ ಹಣವನ್ನು ವ್ಯವಸಾಯದ ಉತ್ಪತ್ತಿ ಹೆಚ್ಚಿಸಲು ಖರ್ಚುಮಾಡಿ ಪಬ್ಲಿಸಿಟಿ ಇಲಾಖೆ ತೆಗೆಯುವುದು ಉತ್ತಮ. ಈ ಬಜೆಟ್ಟಿನಲ್ಲಿ ಇನ್‌ಫರ್ಮೇಷನ್ ಇಲಾಖೆಗೆ ಒದಗಿಸಿರುವ ಹಣವನ್ನು ಯಾವುದಾದರೂ ಒಳ್ಳೆಯ ನೀರಾವರಿ ಯೋಜನೆಗೆ ಅಥವ ಆಹಾರ ವ್ಯವಸ್ಥೆಗೆ ಉಪಯೋಗಿಸುವುದು ಒಳ್ಳೆಯದು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಈ ಬೇಡಿಕೆಗಳನ್ನು ನಾನು ಅನುಮೋದಿಸುತ್ತೇನೆ. ಸ್ವಾಮಿ, ಮಾನ್ಯ ಸದಸ್ಯರು ನಾನಾ ರೀತಿಯಲ್ಲಿ ಆಹಾರಧಾನ್ಯಗಳ ವಿಚಾರವನ್ನು ಪ್ರಸ್ತಾಪಮಾಡಿದ್ದಾರೆ. ಆಹಾರ ಮನುಷ್ಯನಿಗೆ ಮುಖ್ಯವಾಗಿ ಬೇಕಾಗಿರುವ ವಸ್ತು, ಮನುಷ್ಯನಿಗೆ ಒಂದು ಹೊತ್ತು ಆಹಾರವಿಲ್ಲದಿದ್ದರೆ ಸಾಮಾನ್ಯವಾಗಿ ಪ್ರಜ್ಞೆ ತಪ್ಪಿ ನಾನಾ ರೀತಿಯಲ್ಲಿ ಅತ ನಡೆದುಕೊಳ್ಳುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಇದಕ್ಕೆ ನಾವು ಎಷ್ಟರಮಟ್ಟಿಗೆ ಮಹತ್ವ ಕೊಡಬೇಕೆಂಬ ವಿಚಾರವು ನಮ್ಮ ಮುಂದೆ ಚರ್ಚೆಯಾಗುತ್ತಿದೆ. ಈ ಆಹಾರ ಸಮಸ್ಯೆ ಪರಿಹಾರವಾಗಬೇಕಾದರೆ ಹೆಚ್ಚಿನ ರೀತಿಯಲ್ಲಿ ಆಹಾರವನ್ನು ಬೆಳೆಸಲು ಪ್ರಯತ್ನಮಾಡಬೇಕು. ಎಲ್ಲಿಯವರೆಗೆ ಆಹಾರದ ಬೆಳೆವಣಿಗೆಗೆ ಕೃಷಿ ಯೋಜನೆಯಲ್ಲಿ ನಾವು ಒಂದು ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುವುದಿಲ್ಲವೋ ಅಲ್ಲಿಯವರೆಗೂ ಕೂಡ ಈ ಸಮಸ್ಯೆ ಬಗೆಹರಿಯುವುದಿಲ್ಲ. ಈ ದೆಶೆಯಿಂದ ಸಚಿವರು ಒಂದು ಕ್ರಾಂತಿಕಾರಕವಾದ ರೀತಿಯಲ್ಲಿ ಆಹಾರಧಾನ್ಯಗಳನ್ನು ಬೆಳೆಯುವುದಕ್ಕೆ ಪ್ರಯತ್ನಮಾಡಬೇಕು, ಎಲ್ಲೆಲ್ಲಿ ನೀರಾವರಿ ಪ್ರದೇಶ ವಿದೆಯೋ ಅಲ್ಲೆಲ್ಲಾ ರೈತರಿಗೆ ಬೇಕಾಗಿರುವ ಸಾಲಸೌಲತ್ತು ಒದಗಿಸಬೇಕು, ಹಾಗೆ ಮಾಡದಿದ್ದರೆ ಆಹಾರ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಎಲ್ಲಿಯವರೆಗೆ ಹೊರದೇಶಗಳಿಂದ ಆಹಾರ ಪದಾರ್ಥಗಳನ್ನು ತರಿಸುತ್ತೇವೋ, ಎಲ್ಲಿಯವರೆಗೆ ಇತರ ದೇಶಗಳನ್ನು ನಂಬಿ ಕೊಂಡಿರುತ್ತೇವೋ ಅಲ್ಲಿಯವರೆಗೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ನಮ್ಮ ಕಾಲ ಮೇಲೆ ನಾವು ನಿಲ್ಲುವವರೆಗೂ ಈ ಸಮಸ್ಯೆ ದಿನಬೆಳಗಾದರೆ ಇದ್ದೇಇರುತ್ತದೆ. ಈ ದೆಶೆಯಿಂದ ಆಹಾರ ಬೆಳೆವಣಿಗೆ ವಿಚಾರದಲ್ಲಿ ಸರಕಾರ ಬಹಳ ಹೆಚ್ಚಿನ ಮುತುವರ್ಜಿ ವಹಿಸಬೇಕು. ಇರುವ ಅನೇಕ ನ್ಯೂನತೆಗಳನ್ನು ತೊಡೆದುಹಾಕಬೇಕು. ಆಹಾರ ಪದಾರ್ಥಗಳು ದೈವ ಸಂಕಲ್ಪದಿಂದ ಬೆಳೆಯುವ ವಸ್ತುಗಳು. ಕಬ್ಬಿಣ, ಉಕ್ಕು ಮುಂತಾದುವುಗಳಾದರೆ ಅದುರನ್ನು ತೆಗೆದು ಕಾಸಿ ಉತ್ಪತ್ತಿಮಾಡಬಹುದು. ಅದೇ ಆಹಾರಧಾನ್ಯಗಳನ್ನು ಉತ್ಪತ್ತಿ ಮಾಡಬೇಕಾದರೆ ಮಳೆ ಬರಬೇಕು, ರೈತ ಚೆನ್ನಾಗಿ ಕೆಲಸಮಾಡಿ ಒಳ್ಳೆಯ ಬೀಜ ಬಿತ್ತಬೇಕು. ಆಹಾರದ ಬೆಳೆಗೆ ಅನೇಕ ರೀತಿಯ ರೋಗಗಳೂ ಕೂಡ ಬರುತ್ತವೆ. ಅವನ್ನು ಕೂಡ ತಡೆಗಟ್ಟಬೇಕು. ಬರೀ ಔಷಧಿ ಸ್ಪ್ರೇ ಮಾಡಿದರೆ ಸಾಲದು, ಸೊಳ್ಳೆಯ ಕಾಟವನ್ನು ತಪ್ಪಿಸಲು ಹೆರ್ತ್ ಇಲಾಖೆಯವರು ಗ್ರಾಮಗಳಿಗೆ ಹೋಗಿ ಮನೆಗಳಲ್ಲಿ ಡಿ. ಡಿ. ಟಿ. ಪ್ರಯೋಗಮಾಡುತ್ತಾರೆ. ಹಾಗೆ ಅದೇ ರೀತಿಯಲ್ಲಿ ಬೆಳೆ ವಿಚಾರದಲ್ಲೂ ಮಾಡಬೇಕು. ಈ ದಿವಸ ಅನೇಕ ರೋಗಗಳಿಂದ ಇಳುವರಿ ಬರುವುದೂ ಕೂಡ ಕಡಮೆಯಾಗಿದೆ. ಇದನ್ನು ತಡೆಗಟ್ಟಲು ಡಿ. ಡಿ. ಟಿ. ಶಾಖೆ ಇರುವಹಾಗೆ ಇದಕ್ಕೇ ಒಂದು ಪ್ರತ್ಯೇಕ ಶಾಖೆಯನ್ನು ನಿರ್ಮಾಣ ಮಾಡಬೇಕು. ಹಾಗೆ ಮಾಡದಿದ್ದರೆ ಅನೇಕ ರೋಗಗಳಿಂದ ಆಹಾರಧಾನ್ಯಗಳು ಹಾಳಾಗುವುವು ಎಂದು ಅನೇಕ ತಜ್ಞರು ಹೇಳಿದ್ದಾರೆ. ಇಲಿ ಹೆಗ್ಗಣಗಳು ಎಷ್ಟೋ ಆಹಾರವನ್ನು ಹಾಳುಮಾಡುತ್ತಿವೆ, ಇದಕ್ಕೆ ಅವಕಾಶವಿಲ್ಲದಂತೆ ಮಾಡಬೇಕು. ಸರಿಯಾದ ಪರಿಹಾರ ಇದಕ್ಕೆ ಕಂಡು ಹಿಡಿಯಲು ಮುತವರ್ಜಿ ವಹಿಸಬೇಕು.

ಇನ್ನು ಲೆವಿ ವಿಚಾರದಲ್ಲಿ ಹೇಳುತ್ತೇನೆ. ನೀರಾವರಿ ಇದ್ದಲ್ಲಿ ಲೆವಿ ಎತ್ತುವ ಬಗ್ಗೆ ಸರಕಾರ ಒಂದು ಕಾರ್ಯಕ್ರಮ ಇಟ್ಟುಕೊಂಡಿದೆ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ನಾಲ್ಕು ಲಕ್ಷ ಕ್ವಿಂಟಾಲ್ ಲೆವಿ ವಸೂಲ್ಮಾಡ ಬೇಕು ಎಂದು ಸರಕಾರ ನಿಗದಿ ಮಾಡಿದೆ. ಇದನ್ನು ಸರಿಯಾದ ಕಾಲಕ್ಕೆ ವಸೂಲ್ಮಾಡದೆ ಸರಕಾರದಿಂದ ತಡ ಮಾಡಲಾಗಿದೆ. ಅನೇಕ ಜನ ರೈತರು ಎರಡು ಮೂರು ತಿಂಗಳು ಕಾದು ನೋಡಿದ ಮೇಲೆ ಧಾನ್ಯ ಮಾರಾಟ ಮಾಡಿದ್ದಾರೆ. ಆಗ್ಗೆ ರೈತರಿಂದ ಧಾನ್ಯ ತೆಗೆದುಕೊಳ್ಳತಕ್ಕಂಥ

ಒಂದು ವ್ಯವಸ್ಥೆ ಇರಲಿಲ್ಲ. ತಮಗೆ ತೊಂದರೆ ಇರತಕ್ಕಂಥ ಕಾಲದಲ್ಲಿ ರೈತರು ಮಾರಾಟ ಮಾಡಿದ್ದಾರೆ. ಲೆವಿ ವಿಚಾರದಲ್ಲಿ ನಮ್ಮ ಜಿಲ್ಲೆಯಲ್ಲಿ ಎರಡು ಲಕ್ಷ ಕ್ವಿಂಟಾಲ್ ವಸೂಲಾಗಿರಬಹುದು ಎಂದು ನಾನು ತಿಳಿದುಕೊಂಡಿದ್ದೇನೆ. ಸಣ್ಣ ಸಣ್ಣ ಹಿಡುವಳಿ ರೈತರಿಗೆ ಈಗ ಲೆವಿ ಕೊಡುವುದು ತೊಂದರೆಯಾಗುತ್ತದೆ. ಆದುದರಿಂದ ಸರಕಾರಕ್ಕೆ ನಾನು ಒಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮಲ್ಲಿ ಇದುವರೆಗೆ ಎಷ್ಟು ಲೆವಿ ವಸೂಲಾಗಿದೆಯೋ ಆ ಮಟ್ಟಕ್ಕೆ ನಿಲ್ಲಿಸಬೇಕು. ಇನ್ನು ಮುಂದೆ ಕಡ್ಡಾಯವಾಗಿ ಸಾಮಾನ್ಯ ರೈತನಿಂದ ವಸೂಲ್ಮಾಡತಕ್ಕಂಥಾದ್ದನ್ನು ದಯಮಾಡಿ ನಿಲ್ಲಿಸ ಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಅನುಕೂಲವಿರತಕ್ಕಂಥ ಕುಳಗಳಿಂದ ಬೇಕಾದರೆ ವಸೂಲ್ಮಾಡ ಬಹುದು. ಬಹು ಭಾಗವಾಗಿರುವ ಸಣ್ಣ ಸಣ್ಣ ಹಿಡುವಳಿ ರೈತರಿಂದ ವಸೂಲಾಗುವುದನ್ನು ನಿಲ್ಲಿಸ ಬೇಕು. ಇಲ್ಲದಿದ್ದರೆ ನಮ್ಮ ಜಿಲ್ಲೆಯಲ್ಲ ಇದು ಗೊಂದಲಕ್ಕೆ ಕಾರಣವಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ.

ಇನ್ನು ಬೇಸಿಗೆ ಫಸಲು ಬೆಳೆಸತಕ್ಕಂಥಾದ್ದರ ಬಗ್ಗೆ ಒಂದು ಮಾತು ಹೇಳುತ್ತೇನೆ. ದೊಡ್ಡ ನೀರಾವರಿ ಸೌಕರ್ಯ ಇರುವಲ್ಲಿ ಈ ಕಾರ್ಯಕ್ರಮ ಹಾಕಿಕೊಳ್ಳಬಹು. ನಮ್ಮ ತಾಲ್ಲೂಕಿನಲ್ಲಿ 30 ಸಾವಿರ ಎಕರೆ ಭೂಮಿಯಲ್ಲಿ ರಾಗಿ, ಹೆಸರು ಸ್ವಲ್ಪ ಭತ್ತ ಹಾಕಿ ಈ ಫಸಲು ತೆಗೆಯುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದರ ಅನುಭವ ನನಗೆ ಇದೆ. ಬರೀ ಭಾಷಣ ಮಾಡಿದರೆ ಸಾಲದು. ಅಧಿಕಾರಿಗಳು ಹೋಗಿ ಬರೀ ಪ್ರಚಾರ ಮಾಡಿದರೆ ಬೇಸಿಗೆ ಫಸಲು ಆಗುವುದಿಲ್ಲ. ನಾನು ಇದನ್ನು ಅನುಭವದಿಂದ ಹೇಳುತ್ತೇನೆ. ಇದರ ಬಗ್ಗೆ ಅಧಿಕಾರಿಗಳು, ಖಾಸಗಿ ಜನರು, ಜವಾಬ್ದಾರಿಯುಳ್ಳ ಜನರು ಮನೆ ಮನೆಗೆ ಹೋಗಿ ರೈತನಿಗೆ ತಿಳಿಸಿಕೊಟ್ಟು ಅಲ್ಲಿ ನೀರಿನ ಸೌಕರ್ಯ ಇದೆಯೇ ಎನೇನು ಸವಲತ್ತು ಬೇಕು ಅದನ್ನು ಒದಗಿಸಿ ಕೊಟ್ಟರೆ ಫಸಲು ಆಗುತ್ತದೆ. ಬರೀ ಬಾಷಣದಿಂದ ಆಹಾರ ಧಾನ್ಯ ಸಿಕ್ಕುವುದಿಲ್ಲ.

ಸರ್ಕಾರ ಒಂದು ಆಜ್ಞೆ ಮಾಡಿದೆ ಎಂದು ಇನ್ನೊಂದು ವಿಚಾರ ಕೇಳಿದ್ದೇನೆ. ಬೇಸಿಗೆ ಫಸಲು ಭತ್ತ ಹಾಕಿರತಕ್ಕ ಫಸಲ ಮೇಲೆ ಲೆವಿ ಹಾಕುವ ವಿಚಾರ ಸರ್ಕಾರ ಮಾಡಿದೆ ಎಂದು ಕೇಳಿದ್ದೇನೆ. ಬೇಸಿಗೆ ಫಸಲು ಮೇಲೆ ಲೆವಿ ಸರ್ಕಾರ ಹಾಕದಾರದು. ಬೇಸಿಗೆ ಫಸಲು ಚೆನ್ನಾಗಿ ಬೆಳೆಯಬೇಕಾದರೆ, ವರ್ಷೇ ವರ್ಷೇ ಅವರು ಬೇಸಿಗೆ ಫಸಲು ಹಾಕಬೇಕಾದರೆ ಈಗ ಲೆವಿ ಹಾಕುವುದು ಸರಿಯಲ್ಲ. ಇದು ಅವರ ಮನಸ್ಸಿಗೆ ನೆಟ್ಟರೆ ಮುಂದೆ ಅವರು ಬೇಸಿಗೆ ಫಸಲು ಹಾಕುವುದಕ್ಕೆ ಮನಸ್ಸು ಮಾಡ ರಾರರು. ಆದುದರಿಂದ ಲೆವಿ ಹಾಕಬಾರದು. ಒಂದು ವೇಳೆ ಲೆವಿ ಹಾಕಿದ್ದರೆ ಅದನ್ನು ವಾಪಸ್ಸು ತೆಗೆದುಕೊಳ್ಳಬೇಕು ಎಂದು ನಾನು ಸರ್ಕಾರ್ಕ್ ಪ್ರಾರ್ಥಿಸುತ್ತೇನೆ.

ಇನ್ನೊಂದು ವಿಚಾರ. ಆಹಾರ ಧಾನ್ಯ ಸಮಸ್ಯೆ ಬಗೆಹರಿಸಬೇಕಾದರೆ ಸರ್ಕಾರ ಮುಖ್ಯವಾಗಿ ಯೋಚನೆ ಮಾಡಬೇಕಾದುದು ಅಂದರೆ ಇಂದು ಧಾನ್ಯಕ್ಕೆ ಸರಿಯಾದ ರೇಟು ಬರುತ್ತಾ ಇಲ್ಲ. ಒಂದು ಎಕರೆ ಫಸಲು ಬರುವುದಕ್ಕೆ ಎಷ್ಟು ಖರ್ಚಾಗುತ್ತದೆ ಅಷ್ಟು ಬೆಲೆ ಫಸಲಿಗೆ ಸರ್ಕಾರ ಕೊಡುತ್ತಿಲ್ಲ. ನಾನು ರೈತನಾಗಿರುವುದರಿಂದ ಇದನ್ನು ಹೇಳುತ್ತೇನೆ. ಇದರ ಪರಿಣಾಮ ಏನಾಗಿದೆ ಎಂದರೆ, ರೈತರು ಆಹಾರ ಧಾನ್ಯ ಬೆಳೆಯುವುದರ ಬದಲು ಬಾಗಾಯಿತ ಫಸಲು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆ. ಇದು ಈ ರೀತಿಯಾಗಬಾರದು. ಹೆಚ್ಚು ಆಹಾರ ಧಾನ್ಯ ಬೆಳೆಯುವಂತಾಗಬೇಕು. ಇದಾಗಬೇಕಾದರೆ ಮುಂದಿನ ವರ್ಷ ಆಹಾರ ಧಾನ್ಯಕ್ಕೆ ಒಂದು ಸರಿಯಾದ ರೇಟು ಕೊಡುವುದನ್ನು ಈಗಲೇ ನಿಗದಿ ಮಾಡಿ ರೈತನಿಗೆ ಅನುಕೂಲಮಾಡಿಕೊಡಬೇಕು. ಹಾಗೆ ಮಾಡಿದರೆ ಬಾಗಾಯಿತ ಕಲಸ ಮಾಡುವುದನ್ನು ಬಿಟ್ಟು ಆಹಾರ ಧಾನ್ಯ ಬೆಳೆಯುವುದಕ್ಕೆ ಅವನಿಗೆ ಅನುಕೂಲವಾಗುತ್ತದೆ. ಆದುದರಿಂದ ಮುಂದಿನ ವರ್ಷ ಫಸಲು ಮಾಡತಕ್ಕಂಥ ಆಹಾರ ಧಾನ್ಯಕ್ಕೆ ಈಗಲೇ ಒಂದು ಸರಿಯಾದ ರೇಟು ಫಿಕ್ಸ್ ಮಾಡಿ ಅದನ್ನು ಅನೌನ್ಸ್ ಮಾಡಬೇಕೆಂದು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸ್ವಾಮಿ, ಸಭೆಯ ಮುಂದೆ ಇರುವ ಬೇಡಿಕೆಗಳನ್ನು ವಿರೋಧಿಸುತ್ತಾ ಎರಡೆರಡು ವಿಷಯಗಳನ್ನು ಹೇಳಬಯಸುತ್ತೇನೆ. ದೇಶದ ಜನತೆಗೆ ಆಹಾರ ಒದಗಿಸುವುದು ಯಾವುದೇ ಒಂದು ನಾಗರೀಕ ಸರ್ಕಾರದ ಪ್ರಥಮ ಕರ್ತವ್ಯವಾಗಿದೆ. ಈ ದೃಷ್ಟಿಯಲ್ಲಿ ನಮ್ಮ ಇಂದಿನ ಸರ್ಕಾರ ಜನತೆಗೆ ಆಹಾರ ಎಷ್ಟು ಪ್ರಮಾಣದಲ್ಲಿ ಕೊಡಬೇಕೋ ಅಷ್ಟು ಪ್ರಮಾಣದಲ್ಲಿ ಕೊಡುತ್ತಾ ಇಲ್ಲ ಎಂದು ತಮಗೆ ವಿಷಾದದಿಂದ ತಿಳಿಸಬೇಕಾಗಿದೆ. ಆಹಾರ ಮಂತ್ರಿಗಳು ಕೊಟ್ಟಿರತಕ್ಕಂಥ ಅಂಕಿ ಅಂಶಗಳ ಪ್ರಕಾರ ಈ ವರ್ಷ 18-20 ಲಕ್ಷ ಟನ್ ಆಹಾರದ ಕೊರತೆ ಇದೆ. ಇದರಲ್ಲಿ ಒಂಬತ್ತು ಲಕ್ಷ ಟನ್ ಆಹಾರ ಕೇಂದ್ರ ಸರ್ಕಾರದಿಂದ ಪಡೆಯುವ ಭರವಸೆ ನಮ್ಮ ಸರ್ಕಾರ ಹೊಂದಿದೆ. ಬಾಕಿ ಉಳಿಯುವ 10 ಲಕ್ಷ ಟನ್ ಆಹಾರದ ಕೊರತೆಯನ್ನು ಹೇಗೆ ಪರಿಹರಿಸುತ್ತಾರೆ, ಬೇರೆ ಏನು ವ್ಯವಸ್ಥೆ ಮಾಡಿದ್ದಾರೆ ಎಂಬುದಕ್ಕೆ ಉತ್ತರ ಆಹಾರ ಮಂತ್ರಿಗಳು ಕೊಟ್ಟಿಲ್ಲ. ಶ್ರೀಮಾನ್ ಗೋಪಾಲ ಗೌಡರವರು ನೆನ್ನೆಯ ದಿವಸ ತಿಳಿಸಿದ ಹಾಗೆ ಆಹಾರ ಮಂತ್ರಿಗಳಾದ

(ಶ್ರೀ ಪಿ. ವೆಂಕಟಗಿರಿಯಪ್ಪ)

ಶ್ರೀ ಜತ್ತಿಯವರು ಬಹಳ ಚಮತ್ಕಾರವಾಗಿ ಉತ್ತರ ಕೊಡುತ್ತಾರೆ. ಇದರ ಬಗ್ಗೆ ಅವರು ಏನೇನು ಕಾರ್ಯಕ್ರಮ ಕೈಕೊಳ್ಳಬೇಕು ಅದನ್ನು ಕೈಕೊಳ್ಳುತ್ತಾ ಇಲ್ಲ ಎಂದು ಈ ದಿನ ತಿಳಿಸಬೇಕಾಗಿದೆ. ಅವರು ಕೋಲಾರಕ್ಕೆ ಬಂದಾಗ ಅಲ್ಲಿಯ ಪರಿಸ್ಥಿತಿ ಯಾವ ರೀತಿ ಇದೆ ಎಂಬುದನ್ನು ತಿಳಿದುಕೊಂಡಿದ್ದಾರೆ. ಆದುದರಿಂದ ಅಲ್ಲಿಯ ಪರಿಸ್ಥಿತಿಗೆ ಅನುಗುಣವಾಗಿ ಒಂದು ಸರಿಯಾದ ಏರ್ಪಾಡು ಮಾಡದಿದ್ದರೆ ಜನ ಸಾಯುವಂಥ ಪರಿಸ್ಥಿತಿ ಇದೆ ಎಂದು ತಿಳಿಸಬೇಕಾಗಿದೆ. ಆದುದರಿಂದ ಸರಿಯಾದ ಕಾರ್ಯಕ್ರಮ ತೆಗೆದುಕೊಳ್ಳುವ ಒಂದು ಭರವಸೆ ಕೊಡಬೇಕು. ಇತ್ತೀಚೆಗೆ ನಾನು ನಾಲ್ಕಾರು ಸಾರಿ ಮಂತ್ರಿಗಳನ್ನು ನೋಡಿ ಪರಿಸ್ಥಿತಿಯನ್ನು ತಿಳಿಸಿದ್ದರೂ ಕೂಡ, ಬೇಕಾದಷ್ಟು ಗೋಧಿ ಬಂದಿದೆ, ಗೋಧಿ ಸರಬರಾಜು ಮಾಡುತ್ತೇವೆ, ಗಾಬರಿ ಪಡಬೇಡಿ ಎಂದು ತಿಳಿಸುವುದರಲ್ಲಿಯೇ ಇದ್ದಾರೆ. ಇದುವರೆಗೆ ಗೋಧಿ ಸರಬರಾಜು ಮಾಡಿಲ್ಲ. ಗೋಧಿ ಕೊಟ್ಟಿಲ್ಲ. ಕೋಲಾರ ನಗರದಲ್ಲಿ ಬೀಡೀ ಕಾಮಗಾರರು, ಕೂಲಿ ಕೆಲಸ ಮಾಡುವವರು ನಾಲ್ಕೈದು ಸಾವಿರ ಜನ ಕೆಲಸಗಾರರು ಇದ್ದಾರೆ. ಅವರಿಗೆ ಒಂದು ಕಾರ್ಡ್ ಮೇಲೆ ಒಂದು ತಿಂಗಳಿಗೆ ಮೂರು ಕೇ. ಜಿ. ಗೋಧಿ ಕೊಡುತ್ತಿದ್ದಾರೆ. ಈಗ 2 ವಾರದಿಂದ ಒಂದು ಕೆ. ಜಿ. ಅಕ್ಕಿಯನ್ನು ಸಹ ಕೊಟ್ಟಿಲ್ಲ. ನೀವು ಹೇಳುತ್ತೀರಿ, ನಾವು ಎಲ್ಲಾ ಅರಾಟ್ ಮಾಡಿದ್ದೇವೆ, ನಿಮ್ಮ ಸೊಸೈಟಿಗಳವರು ಬಂದು ತೆಗೆದುಕೊಂಡು ಹೋಗಿಲ್ಲ ಎಂದು. ನಮಗೆ ಆಹಾರವನ್ನು ಒದಗಿಸುವ ಜವಾಬ್ದಾರಿಯನ್ನು ತೆಗೆದುಕೊಂಡಿರುವವರು ಅಧಿಕಾರಿಗಳು ಮತ್ತು ಸರ್ಕಾರದವರೇ ಹೊರತು, ಸೊಸೈಟಿಗಳವರು ಅಲ್ಲ ಎಂದು ಹೇಳುತ್ತೇನೆ.

ಶ್ರೀ ಡಿ. ದೇವರಾಜ್ ಅರಸ್ (ಕಾರ್ಮಿಕ ಶಾಖೆಯ ಮಂತ್ರಿಗಳು).—ತಾವು ಸೊಸೈಟಿಗಳಿಗೆ ಗೋಧಿ ಅಕ್ಕಿ ಕೊಟ್ಟಿಲ್ಲವೆಂದು ಹೇಳುತ್ತೀರಿ ಮಂತ್ರಿಗಳು ಜವಾಬ್ದಾರಿ ತೆಗೆದುಕೊಳ್ಳುತ್ತಾರೆಯೇ ಹೊರತು, ಸೊಸೈಟಿಗಳವರು ಬಂದು ತೆಗೆದುಕೊಂಡು ಹೋಗದಿದ್ದರೆ ಏನೂ ಮಾಡುವುದಕ್ಕಾಗುವುದಿಲ್ಲ. ತಾವು ಎಲ್ಲ ದುರುಪಯೋಗ ಆಗಿದೆ ಎಂದು ಹೇಳಿದರೆ ಒಳ್ಳೆಯದು.

ಶ್ರೀ ಪಿ. ವೆಂಕಟಗಿರಿಯಪ್ಪ.—ಸೊಸೈಟಿಯವರನ್ನು ಕೇಳಿದರೆ ಕ್ಯಾಷ್ ಕ್ರೆಡಿಟ್ ಆಗಿಲ್ಲ ಎಂದು ಹೇಳುತ್ತಾರೆ. ಡಿಸ್ಟ್ರಿಕ್ಟ್ ಬ್ಯಾಂಕ್ ಅವರನ್ನು ಕೇಳಿದರೆ ತಮಗೆ ಅಪೆಕ್ಸ್ ಬ್ಯಾಂಕ್‌ನಿಂದ ಹಣ ಕೊಟ್ಟಿಲ್ಲವೆಂದು ಹೇಳುತ್ತಾರೆ. ಸೊಸೈಟಿಗಳವರ ಹತ್ತಿರ ದುಡ್ಡಿಲ್ಲದೆ ಇದ್ದರೆ ವಿಶೇಷವಾದ ವ್ಯವಸ್ಥೆ ಮಾಡಿ ಹೆಚ್ಚು ಹಣವನ್ನು ಸರ್ಕಾರದವರು ಒದಗಿಸಬೇಕು. ಕೆಲವು ಸೊಸೈಟಿಯವರು ಆಹಾರವನ್ನು ಹಂಚುತ್ತೇವೆ ಎಂದು ಒಪ್ಪಿಕೊಂಡು ನಂತರ ಸರಿಯಾಗಿ ಹಂಚುತ್ತಿಲ್ಲ. ಈ ರೀತಿಯ ಸೊಸೈಟಿಗಳನ್ನು ತೆಗೆದುಹಾಕಿ ಅಲ್ಲಿಗೆ ಅಡ್ಮಿನಿಸ್ಟ್ರೇಟಿವ್ ಆಫೀಸರನ್ನು ನೇಮಿಸಿ.

ಶ್ರೀ ಡಿ. ದೇವರಾಜ ಅರಸ್.—ತಾವು ಹೇಳುವುದು ಸರಿ. ನಮ್ಮ ಜವಾಬ್ದಾರಿ ಇಲ್ಲವೆಂದು ಸರ್ಕಾರದವರು ಹೇಳುವುದಿಲ್ಲ. ಸೊಸೈಟಿಗಳವರು ಖಾಸಗಿ ವರ್ತಕರಿಗಿಂತ ಉತ್ತಮವಾಗಿ ಆಹಾರವನ್ನು ಹಂಚುತ್ತಾರೆ. ಅವರಿಗೆ ವಹಿಸಿ-ಎಂದು ತಾವುಗಳು ಒಪ್ಪಿಕೊಂಡಿದ್ದೀರಿ. ಅದರ ಪ್ರಕಾರ ನಾವು ಸೊಸೈಟಿಗಳಿಗೆ ಆಹಾರ ಧಾನ್ಯವನ್ನು ಕೊಡುತ್ತಿದ್ದೇವೆ. ಇದರ ಮೇಲೆ ಸೊಸೈಟಿಯಲ್ಲಿರುವ ಜನರು ಸರಿಯಾಗಿ ಕೆಲಸಮಾಡದೇ ಹೋದರೆ, ಅವರಲ್ಲಿ ಕರ್ತವ್ಯಲೋಪ ಇದ್ದರೆ ಸರ್ಕಾರದವರು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಸೊಸೈಟಿಗಳು ಸರ್ಕಾರದ ಏಜೆಂಟ್ ಆಗಿ ಕೆಲಸ ಮಾಡುತ್ತವೆ. ನೀವು ಸೊಸೈಟಿಗಳನ್ನು ತೋರಿಸುತ್ತೀರಿ, ಸೊಸೈಟಿಯವರು ಹಣಕಾಸಿನ ತೊಂದರೆಯಿಂದ ಆಹಾರವನ್ನು ತರಿಸಿಲ್ಲವೆಂದು ಹೇಳುತ್ತಾರೆ, ಡಿಸ್ಟ್ರಿಕ್ಟ್ ಬ್ಯಾಂಕ್‌ನವರು ಅಪೆಕ್ಸ್ ಬ್ಯಾಂಕ್‌ನಿಂದ ಹಣ ಬಂದಿಲ್ಲವೆಂದು ಹೇಳುತ್ತಾರೆ, ಇದು ಸರಿಯಲ್ಲ, ಆಹಾರ ಮಂತ್ರಿಗಳು, ಕಾರ್ಮಿಕ ಮಂತ್ರಿಗಳು, ರೆವಿನ್ಯೂ ಮಂತ್ರಿಗಳು ಎಲ್ಲರೂ ಸೇರಿ ಮಾತನಾಡಿಕೊಂಡು ಈ ಒಂದು ವ್ಯವಸ್ಥೆಯನ್ನು ಸರಿಯಾಗಿ ಮಾಡಬೇಕು. ಯಾವ ಸೊಸೈಟಿಗಳಲ್ಲಿ ಹಣವಿಲ್ಲವೋ ಅವಕ್ಕೆ ಹಣ ಮಾಡಬೇಕು.

ಶ್ರೀ ಬಿ. ಡಿ. ಜತ್ತಿ.—ತಾವು ಹೇಳುವುದು ಕೆಲವು ಸೊಸೈಟಿಗಳಿಗೆ ಅನ್ವಯಿಸುತ್ತದೆ. ಯಾವ ಸೊಸೈಟಿಗಳ ಹತ್ತಿರ ಹಣವಿಲ್ಲವೋ, ಯಾವ ಸೊಸೈಟಿಗಳವರಿಗೆ ಈ ಕೆಲಸವನ್ನು ಮಾಡುವ ಸಾಮರ್ಥ್ಯವಿಲ್ಲವೋ, ಅವುಗಳಿಗೆ ಆಹಾರ ಸರಬರಾಜನ್ನು ನಿಲ್ಲಿಸಿ, ಸರ್ಕಾರದವರೇ ನೇರವಾಗಿ ಹಂಚುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಈಗ ಯಾವ ರೀತಿಯ ದೂರುಗಳೂ ಇಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ಈಗ ಮುಖ್ಯವಾಗಿ ನಮ್ಮ ಆಹಾರ ಮಂತ್ರಿಗಳು ತಿಳಿಸಿರುವ ರೀತಿಯಲ್ಲಿ 18-20 ಲಕ್ಷ ಟನ್ ಆಹಾರದಲ್ಲಿ ಮತ್ತು ಕೇಂದ್ರ ಸರ್ಕಾರದಿಂದ ಬಂದಿರುವ 9 ಲಕ್ಷ ಟನ್ ಆಹಾರದಲ್ಲಿ ಎಷ್ಟು ಎಷ್ಟು ಭಾಗವನ್ನು ಯಾವ ಯಾವ ಜಿಲ್ಲೆಗೆ ಹಂಚಬೇಕು ಎಂದು ನಿರ್ದಿಷ್ಟವಾದ ಹೇಳಿಕೆಯನ್ನು ಸಭೆಯ ಮುಂದೆ ಇಟ್ಟಿಲ್ಲ. ನನ್ನ ಹೇಳಿಕೆ ಕೊಡವಾಗ 5 ಸಾವಿರ ಪ್ರಜಾಸಂಖ್ಯೆ

ಯಿರುವ ಪಟ್ಟಣಗಳಿಗೆ ಒಂದು ತಿಂಗಳಿಗೆ ತಲಾ 5 ಕೆ. ಜಿ. ಆಹಾರವನ್ನು ಒದಗಿಸುತ್ತೇವೆ ಎಂದು ಹೇಳಿದರು. ಬೇರೆ ಹಳ್ಳಿಗಳಿಗೆ ಎಷ್ಟು ಸಾಧ್ಯವಿದ್ದರೆ ಅಷ್ಟು ಆಹಾರವನ್ನು ಒದಗಿಸುತ್ತೇವೆ ಎಂದು ಹೇಳಿದರು. ನನಗೆ ಇದರ ತಾತ್ಪರ್ಯ ಹಿನ್ನೆಲೆ ಅರ್ಥವಾಗಲಿಲ್ಲ. 5 ಸಾವಿರ ಪ್ರಜಾಸಂಖ್ಯೆಗಿಂತ ಹೆಚ್ಚು ಜನರು ಇರುವ ಕಡೆಗಳಲ್ಲಿ ಮಾತ್ರ ಆಹಾರವನ್ನು ಒದಗಿಸುತ್ತೇವೆಂದು ಹೇಳುವುದು ಬಹಳ ತಪ್ಪು. ಏಕೆಂದರೆ ಸಣ್ಣ ಸಣ್ಣ ಹಳ್ಳಿಗಳಲ್ಲೂ ಆಹಾರದ ಕೊರತೆ ಇರುತ್ತದೆ. ಅಲ್ಲಿಯೂ ಸಹ ಕಾರ್ಮಿಕರು ಇರುತ್ತಾರೆಂದು ತಿಳಿಯಬೇಕು.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರು ಸರಿಯಾಗಿ ಓದಿಲ್ಲವೆಂದು ಕಾಣುತ್ತದೆ. 5 ಸಾವಿರ ದವರೆಗೆ ಜನಸಂಖ್ಯೆಯಿರುವ ಯಾವ ಹಳ್ಳಿಯೇ ಆಗಲಿ, ಯಾವ ಗ್ರಾಮವೇ ಆಗಲಿ, ಅಲ್ಲರುವವರಿಗೂ ಆಹಾರವನ್ನು ಕೊಡುತ್ತೇವೆ. ಅಂದರೆ ಅಲ್ಲಿರುವ ಆರ್ಟಿಜಾನ್‌ಗಳಿಗೆ, ಲೇಬರ್‌ಗಳಿಗೆ, ಸ್ಕೇರ್‌ಸಿಟಿ ಏರಿಯಾಗಳಲ್ಲಿ ಕೆಲಸ ಮಾಡುವವರಿಗೆ, ಭೂಮಿ ಇದ್ದು, ಕಡಿಮೆ ಬೆಳೆ ಬೆಳೆದಿದ್ದರೆ, ಆಹಾರ ಧಾನ್ಯವನ್ನು ಕೊಡುತ್ತೇವೆ. ಆದ್ದರಿಂದ ನೀವು ಹೇಳುವ ಪ್ರಶ್ನೆ ಬರುವುದಿಲ್ಲ.

ಶ್ರೀ ಪಿ. ವೆಂಕಟಗಿರಿಯಪ್ಪ.—ನಾನು ಮುಖ್ಯವಾಗಿ ಹೇಳುವುದೇನೆಂದರೆ, ಆಹಾರ ಮಂತ್ರಿ ಗಳು 3-4 ತಿಂಗಳಿಂದಲೂ ಬರೀ ಬಾಯಿ ಮಾತಿನಲ್ಲಿ ಹೇಳಿಕೊಂಡು ಬಂದಿದ್ದಾರೆಯೇ ಹೊರತು, ಅದರ ಪ್ರಕಾರ ಆಹಾರವನ್ನು ಹಂಚುತ್ತಿಲ್ಲ. ಮಾತನಾಡುವ ಕಾಲ ಮುಗಿದು ಹೋಗಿದೆ. ಮುಂದಿನ ಏಪ್ರಿಲ್, ಮೇ ತಿಂಗಳುಗಳಲ್ಲಿ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಗುವ ಸ್ಥಿತಿ ಬರುತ್ತದೆ. ಆದ್ದರಿಂದ ಆಹಾರ ಮಂತ್ರಿಗಳು ಮಾತಿನಲ್ಲಿ ಹೇಳಿಕೆಗಳನ್ನು ಕೊಡುವುದನ್ನು ನಿಲ್ಲಿಸಿ, ಅವರು ಭರವಸೆ ಕೊಟ್ಟ ಪ್ರಕಾರ ಸರಿಯಾಗಿ ಕಾರ್ಯ ನಿರ್ವಹಿಸಬೇಕು, ಬರೀ ಕೇಂದ್ರದ ನೆರವನ್ನು ಇಟ್ಟುಕೊಂಡರೆ ಸಾಲದು, ಆಂಧ್ರ, ಮದ್ರಾಸ್, ರಾಜ್ಯಗಳಿಗೆ ಹೋಗಿ ಇನ್ನೂ ಹೆಚ್ಚಿನ ಅಕ್ಕಿಯನ್ನು ಪಡೆಯುವು ದಕ್ಕೆ ಪ್ರಯತ್ನ ಪಡುತ್ತಾರೆ ಎಂದು ತಿಳಿದುಕೊಂಡಿದ್ದೇನೆ.

ಕೆಲವು ಸದಸ್ಯರುಗಳು ಹೇಳಿದರು, ಈ ರಾಜ್ಯದಲ್ಲಿ ಆಹಾರವಿಲ್ಲದೆ ಯಾರೂ ಸತ್ತಿಲ್ಲ ಎಂದು. ನಾನಾದರೂ ಆಹಾರ ಮಂತ್ರಿಗಳಿಗೆ ಹೇಳುತ್ತೇನೆ, ಕೋಲಾರದ ಜಿಲ್ಲಾ ಆಸ್ಪತ್ರೆಗೆ ಒಂದು ಸಾರಿ ಬೇಟಿ ಕೊಡಬೇಕೆಂದು. ಅಲ್ಲಿಯ ಡಾಕ್ಟರ್‌ನ್ನು ಕೇಳಿದರೆ ಗೊತಾಗುತ್ತದೆ. ಸಿಕ್ಕಿದ ಗೆಡ್ಡೆ ಗೆಣಸು ಗಳನ್ನು ತಿಂದು, ಕಾಯಿಲೆಯಿಂದ ಆಸ್ಪತ್ರೆಗೆ ಸೇರುತ್ತಿದ್ದಾರೆ. ಮೊದಲು ಇಂತಹವರ ಸಂಖ್ಯೆ ಕಮ್ಮಿ ಇದ್ದು ಈಗ ಆ ಆಸ್ಪತ್ರೆಯಲ್ಲಿನ ಮುಕ್ಕಾಲು ಪಾಲು ರೋಗಿಗಳೆಲ್ಲಾ ಇದೇ ಕಾಯಿಲೆಯಿಂದ ಸೇರಿ, ಅನೇಕ ಜನ ಸತ್ತಿದ್ದಾರೆ. ಈ ರೀತಿ ಸತ್ತಿರುವವರ ಸಂಖ್ಯೆ 50ಕ್ಕಿಂತ ಮೇಲೆ ಇದೆ. ಅಧಿಕೃತ ವಾಗಿ ತಿಳಿಸುತ್ತಿದ್ದೇನೆ. ಬೇಕಾದರೆ ಆಸ್ಪತ್ರೆಯಿಂದ ಅಂಕಿ ಅಂಶಗಳನ್ನು ತರಿಸಿಕೊಂಡು ನೋಡಲಿ, ಅಥವಾ ಆಸ್ಪತ್ರೆಗೆ ಹೋಗಿ ನೋಡಲಿ. ಆಹಾರವಿಲ್ಲದೇ ಸತ್ತಿದ್ದಾರೆ ಎಂದು ಹೇಳುವುದು ನಿಜ. ಗೆಡ್ಡೆ ಗೆಣಸು ತಿಂದು ಆಸ್ಪತ್ರೆಗೆ ಸೇರಿ ಅಲ್ಲಿಂದ ಸ್ಮಶಾನಕ್ಕೆ ಹೋಗಿದ್ದಾರೆ. ಶ್ರೀಮಾನ್ ಆರ್. ಎಸ್. ಹೆಗ್ಡೆಯವರು ದೇಶದಲ್ಲಿ ಅಷ್ಟೊಂದು ಆಹಾರ ಅಭಾವವಿಲ್ಲವೆಂದು ಹೇಳಿದ್ದು ಸರಿಯಲ್ಲ. ಆಹಾರ ಜನಗಳಿಗೆ ಸರಿಯಾಗಿ ಸಿಗದೆ, ಪರಿಸ್ಥಿತಿ ಭೀಕರ ಸ್ವರೂಪ ತಳೆದು ನಿಂತಿದೆ. ಇನ್ನು ಸಾರ್ವಜನಿಕರು ಲೂಟಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡಬಾರದೆಂದು ಆಹಾರ ಮಂತ್ರಿಗಳಲ್ಲಿ ವಿನಂತಿ ಮಾಡಿ ಕೊಳ್ಳುತ್ತೇನೆ. ಒಂದೇ ಒಂದು ವಿಷಯವೆಂದರೆ, ಆಹಾರ ಪರಿಸ್ಥಿಯ ಬಗ್ಗೆ ಮಾತನಾಡುವಾಗ ಹೆಚ್ಚು ಆಹಾರ ಬೆಳೆಯುವುದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಯೋಜನೆಗಳ ಮೂಲಕ ಖರ್ಚು ಮಾಡಿದ್ದೇವೆ. ಅದರೂ ಕೊಡ ತಕ್ಕಷ್ಟು ಪ್ರತಿಫಲ ದೊರಕುತ್ತಾ ಇಲ್ಲ. ನಮ್ಮ ಸರ್ಕಾರದವರು ಬರೀ ಒಂದು ಪುಸ್ತಕದಲ್ಲರುವ ಪ್ಲಾನ್‌ಗಳ ಬಗ್ಗೆ ಹಣ ಖರ್ಚು ಮಾಡುವುದು ಏನಾ, ಸದಸ್ಯರುಗಳು ಹೇಳುವ ನಲಹೆಗಳನ್ನು ಸರಿಯಾಗಿ ಕೇಳುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸು ತ್ತಿದ್ದೇನೆ, ಈ ಕ್ಷಾಮ ಪರಿಹಾರಕ್ಕೆ ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೀರಿ; ಲಕ್ಷಾಂತರ ರೂಪಾಯಿ ಪೋಲಾಗುತ್ತಿದೆ.

10-30 A.M.

ಅದಕ್ಕೆ ಬದಲಾಗಿ ಬಾವಿಗಳಿಗೆ ಏನು ಹಣ ಕೊಡುತ್ತಾ ಇದ್ದೀರಿ, ಅದನ್ನು ಒಂದೊಂದು ತಾಲ್ಲೂಕಿನಲ್ಲಿ 100-150 ಬಾವಿಗಳಿಗೆ ಹಣ ಕೊಡಿ. ಅದರಿಂದ ಪರಿಹಾರ ಕಾರ್ಯ ತಾತ್ಕಾಲಿಕ ವಾಗಿ ಆಗುವುದಲ್ಲದೆ, ಶಾಶ್ವತವಾದ ಆಹಾರ ಅಭಿವೃದ್ಧಿಗೆ ಅವಕಾಶ ಆಗುತ್ತದೆ, ಅದರಿಂದ ಜನ ಗಳಿಗೆ ಉದ್ಯೋಗ ಸಿಕ್ಕುತ್ತದೆ ಎಂದು ಒತ್ತಾಯ ಪೂರ್ವಕವಾಗಿ ತಿಳಿಸುತ್ತೇನೆ. ಒಂದೊಂದು ತಾಲ್ಲೂಕಿಗೆ 25-30 ಬಾವಿಗಳಿಗೆ ಮಾತ್ರ ಕೊಟ್ಟಿದ್ದೀರಿ 9 ರೂಪಾಯಿನಂತೆ ಬಡ್ಡಿ ಅದರೂ ಚಿಂತೆಯಿಲ್ಲ. 100 ಬಾವಿಗಳಿಗೆ ಹಣ ಕೊಡಿ ಎಂದು ಕೇಳಿದ್ದಕ್ಕೆ 9 ರೂಪಾಯಿ ಬಡ್ಡಿಯಂತೆ ಕೊಡುವುದಕ್ಕಾಗುವು ದಿಲ್ಲ. ಒಬ್ಬರಿಗೆ 3 ರೂಪಾಯಿ ಮತ್ತೊಬ್ಬರಿಗೆ 9 ರೂಪಾಯಿ ಬಡ್ಡಿ ಕೊಟ್ಟರೆ ಸರ್ಕಾರದ ನೀತಿಗೆ

(ಶ್ರೀ ಪಿ. ವೆಂಕಟಗಿರಿಯಪ್ಪ)

ಏರುದ್ಧ ಆಗುತ್ತದೆ: ಆದ್ದರಿಂದ ಮೂರು ರೂಪಾಯಿ ಬಡ್ಡಿಯಂತೆಯೇ ಕೊಡಬೇಕು. 25-30 ಬಾವಿಗಳಿಗೆ ಸಾಲ ಈ ದರದಮೇಲೆ ಕೊಡಬಹುದು ಎಂದು ಹೇಳಿದರು. ಈ ವರ್ಷ ಎಲ್ಲಾ ಬಾವಿಗಳಿಗೂ ಸಾಕಷ್ಟು ನರ್ಕಾರ ಹಣ ಕೊಡುತ್ತೇವೆಂದು ತಿಳಿಸಿದ್ದರಿಂದ ಕೋಲಾರ ತಾಲ್ಲೂಕಿನಲ್ಲಿ 100 ಬಾವಿಗಳನ್ನು 25-30 ಅಡಿ ಆಳ ಮಾಡಿ ಹಾಗೆಯೇ ಕೆಲಸ ನಿಂತಿರುವ ಪರಿಸ್ಥಿತಿ ಇದೆ. ಹಣ ಕೊಡಿಸದೇ ಹೋದರೆ ಮಳೆ ಬಂದರೆ ಅವು ಪೂರ್ತಿ ಮುಚ್ಚಿಹೋಗಿ ನಂಸಾರಗಳೆಲ್ಲಾ ಹಾಳಾಗಿ ಹೋಗುವ ಪರಿಸ್ಥಿತಿ ಇದೆ. ನಿಜವಾಗಿಯೂ ಕೂಡ ಆಹಾರ ಅಭಾವ ಪರಿಸ್ಥಿಯನ್ನು ಶಾಶ್ವತವಾಗಿ ಪರಿಹರಿನುವ ದೃಷ್ಟಿಯಿಂದಲೂ ಮತ್ತು ಜನರಿಗೆ ಕ್ಷಾಮ ಪರಿಹಾರ ಕೆಲಸ ಕೂಡ ಒದಗಿಸಿದಂತೆ ಆಗುವುದರಿಂದ ನರ್ಕಾರದವರು ಒಂದೊಂದು ತಾಲ್ಲೂಕಿಗೆ 150 ಬಾವಿಗಳಿಗೆ ಹಣ ಕೊಡಿನಬೇಕು ಎಂದು ಹೇಳಿ ನರ್ಕಾರವನ್ನು ಒತ್ತಾಯಪಡಿಸಿ ನನ್ನ ಮಾತನ್ನು ಮುಗಿನುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ (ಹೊಳೆನರಸಿಪುರ).—ಈ ಡಿಮ್ಯಾಂಡ್ 124 ಏನು ಇದೆ Capital outlay on Schemes of Government Trading ಇದು ಆಹಾರ ಇಲಾಖೆಗೆ ಸಂಬಂಧಪಟ್ಟದ್ದು. ಶ್ರೀಮಾನ್ ಜತ್ತಿಯವರು ಆಹಾರದ ಇಲಾಖೆ ವಹಿಸಿಕೊಂಡಾಗ ಅದು ಸಣ್ಣ ಇಲಾಖೆ ಆಗಿದ್ದು ಅದಕ್ಕೆ ಒಬ್ಬ ಮಂತ್ರಿಗಳು ಬೇಕೇ ಎಂದು ನಮಗೆ ಸ್ವಲ್ಪ ಹಾಸ್ಯಾಸ್ಪದವಾಗಿ ಕಾಣಿಸುತ್ತಾ ಇತ್ತು. ಇವೊತ್ತು ನೋಡಿದರೆ ಬರೀ ಎಸ್ಟಾಬ್ಲಿಷ್‌ಮೆಂಟ್‌ಗೇ 54 ಲಕ್ಷ ರೂಪಾಯಿ ಹಣ ಖರ್ಚಾಗುವಷ್ಟು ಬೃಹದಾಕಾರವಾಗಿ ಬೆಳೆದಿದೆ. ನಂಸ್ಥಾನದ ಎಲ್ಲಾ ಮೂಲೆ ಮೂಲೆಗಳಲ್ಲೂ ಆಹಾರದ ಇಲಾಖೆಗೆ ಹೆಚ್ಚಿನ ಆದ್ಯತೆ ಕೊಡತಕ್ಕ ಕಾಲ ಒದಗಿದೆ. ಅವರು ಇನ್ನೂ ಹೆಚ್ಚಿನ ಒಂದು ಅನಕ್ತಿಯಿಂದ ಕೆಲನ ಮಾಡದೇ ಹೋದರೆ, ಪ್ರಾಯಶಃ ಈ ಇಲಾಖೆಯಿಂದ ನಾಕಷ್ಟು ಜನತೆಗೆ ಫಲ ದೊರಕಲಾರದು ಎನ್ನುವ ಅಭಿಪ್ರಾಯ ಇದೆ. ಇವೊತ್ತಿನ ದಿವನ ಅವರು ಆಹಾರದ ಹೋರ್ಡಿಂಗ್ ಮತ್ತು ಜೊತೆಗೆ ಲೆವಿ ನಿಸ್ಪಂ ಬಗ್ಗೆ ಏನು ಒಂದು ನಿಯಮಗಳನ್ನು ತಂದಿದ್ದಾರೋ ಅದರಿಂದ ನಾಕಷ್ಟು ಪರಿಣಾಮಕಾರಿಯಾದ ವ್ಯವಸ್ಥೆಯಾಗಿದೆ. ಹೇಗೆ ಎಂದರೆ, ಖಾನಗಿ ವರ್ತಕರು, ಹೋರ್ಡ್ ಮಾಡತಕ್ಕವರು ಹೇಳುತ್ತಾ ಇದ್ದಾರೆ, ಶ್ರೀ ಜತ್ತಿಯರು ಏನು ಒಂದು ರಿಕ್ವಿನಷನ್ ಮಾಡತಕ್ಕವರ ಬಗ್ಗೆ ಇಲಾಖೆಯಲ್ಲಿರತಕ್ಕ ನ್ಪೆಷಲ್ ನೆಲ್‌ಗಳನ್ನು ಇಟ್ಟು ಅನೇಕ ನ್ಥಳಗಲ್ಲಿ ರೇಡ್ ಮಾಡಿ ತೆಗೆದುಕೊಂಡಿರತಕ್ಕ ಕ್ರಮ ಏನು ಇದೆ, ಆ ಕ್ರಮದಿಂದ ಬಹಳ ಜನ ವರ್ತಕರು ಹೆದರುತ್ತಾ ಇದ್ದಾರೆ, ಅದರಿಂದ ನಾಕಷ್ಟು ಪರಿಣಾಮಕಾರಿತದಂಥ ಅನುಭವ ನಮಗೆ ಬಂದಿದೆ ಎಂದು. ಇದನ್ನು ಏತಕ್ಕೆ ಪ್ರನ್ತಾಪ ಮಾಡುತ್ತಾ, ಇದ್ದೇನೆ ಎಂದರೆ, ಎಲ್ಲಿ ಶ್ರೀ ಜತ್ತಿಯವರು ರಾಜಕೀಯ ಒತ್ತಡಕ್ಕೆ ಸಿಕ್ಕಿ ಬೀಳುತ್ತಾರೋ ಎನ್ನುವ ಅನುಮಾನ ಇತ್ತು. ಆದರೆ ಇವೊತ್ತು ನಮ್ಮ ಕಣ್ಣುಮುಂದೆ ಇರತಕ್ಕ ದೃಶ್ಯಗಳನ್ನು ನೋಡುವುದಾದರೆ, ಅವರು ರಾಜಕೀಯ ಒತ್ತಡಕ್ಕೆ ಬಿದ್ದಿಲ್ಲ ಎಂದು ಕಾಣುತ್ತದೆ. ಇವೊತ್ತು ಅನೇಕ ಕಡೆ ಪತ್ರಿಕೆಯಲ್ಲಿ ನೋಡುತ್ತೇನೆ, ಸಣ್ಣ ವರ್ತಕ, ದೊಡ್ಡ ವರ್ತಕ ಅಥವಾ ಮಿಲ್ ಮಾಲೀಕರು ಆಗಲಿ ಅವರ ಮೇಲೆ ಇಲಾಖೆಯಿಂದ ಬಂದಿಂಥ ವರ್ತಮಾನದ ನಹಾಯದಿಂದ ಮತ್ತು ನರ್ಕಾರದವರೇ ಇಟ್ಟುಕೊಂಡಿರತಕ್ಕ ಪೋಲೀಸ್ ನೆಲ್ಲಿನ ಅಧಿಕಾರಿಗಳಿಂದ ಪರಿಣಾಮಕಾರಿಯಾದಂಥ ಕೆಲನ ನಡೆಯುತ್ತಾ ಇದೆ. ಅದು ಮುಂದುವರಿಯಬೇಕು. ರಿಕ್ವಿನಷನ್ ವಿಚಾರದಲ್ಲಿ ಒಂದು ವಿಷಯ ಪ್ರನ್ತಾಪ ಮಾಡಿ ನನ್ನ ಮಾತನ್ನು ಮುಗಿನುತ್ತೇನೆ. ತಮ್ಮ ಲೆವಿ ಆರ್ಡರ್ ಬಗ್ಗೆ ಸ್ವಲ್ಪ ಯೋಚನೆ ಮಾಡಬೇಕು. ಒಬ್ಬ ರೈತನಿಗೆ 10 ಎಕರೆ ಜಮೀನು ಇದ್ದರೆ, ಅವನು ಪ್ರಮೋಷ್ಟನೇಟ್ ಲೆವಿ 10 ಕ್ವಿಂಟಾಲೋ 20 ಕ್ವಿಂಟಾಲೋ ಕೊಡಬೇಕಾಗುತ್ತದೆ. ಅದನ್ನು ಕೊಟ್ಟ ಮೇಲೆ ಅವನು 200 ಕ್ವಿಂಟಾರ್ 300 ಕ್ವಿಂಟಾರ್ ಭತ್ತ ಇಟ್ಟುಕೊಂಡಿರುತ್ತಾನೆ. ಅವನಿಗೆ exemption certificate ಕೊಡುತ್ತೀರಿ ಲೆವಿ ಪ್ರಕಾರ ನರ್ಕಾರಕ್ಕೆ ಕೊಡುವುದನ್ನು ಕೊಟ್ಟಿದ್ದಾನೆ ಎನ್ನುವ ನೆಪದಿಂದ ಉಳಿದ ಭತ್ತವನ್ನು ಕೊಂಡುಕೊಂಡು ಇಟ್ಟಿದ್ದರೂ ನ್ವಂತ ಜಮೀನಿನಿಂದ ಬೆಳೆದು ಇಟ್ಟಿದ್ದಾನೆ ಎಂದು ತಿಳಿದು ಅಂಥಕಡೆ ಪ್ರವೇಶ ಮಾಡುತ್ತಾ ಇಲ್ಲ. ನರ್ಕಾರಕ್ಕೆ ಕೊಡತಕ್ಕ ಲೆವಿ ಕೊಟ್ಟ ಮೇಲೆ 40 ಕ್ವಿಂಟಾರ್‌ಗಿಂತ ಜಾನ್ತಿ ಇದ್ದರೆ ಮಾತ್ರ ಡಿಕ್ಲೇರ್ ಮಾಡಬೇಕು ಎಂದು ಇದೆ. ಡಿಕ್ಲೇರ್ ಮಾಡಿದರೆ ಯಾವಾಗ ಬೇಕಾದರೂ ಅದನ್ನು ರೆಕ್ವಿನಷನ್ ಮಾಡಬಹುದು ಎಂದು ಇದೆ. ಆದರೆ ಇವೊತ್ತು ಪ್ರಾಕ್ಟಿಕರ್ ಆಗಿ ಏನು ಆಗುತ್ತಾ ಇದೆ ಎಂದರೆ ರೈತನು ತನ್ನ ಮನೆಯಲ್ಲಿ 200-300 ಪಲ್ಲ ಇಟ್ಟಿರುತ್ತಾನೆ. ಇದು ರೈತನಿಗೆ ನಾಕಷ್ಟು ಹಣ ಬರುವ ವಿಷಯ. ರೈತನಿಗೆ ಅನುಕೂಲ ದೊರೆಯಬೇಕು ಎಂದು ವಾದ ಮಾಡುತ್ತಾ ಇದ್ದಾನೆ. ನಾಕಷ್ಟು ಬೆಲೆ ಬೇಕು, ನಾಕಷ್ಟು ಆರ್ಥಿಕ ಪರಿಸ್ಥಿತಿ ಉತ್ತಮವಾಗಬೇಕು ಎಂದು ಹೇಳುವ ವಾದ ಒಂದು ಕಡೆ ಇರಲ್ಲಿ. ವಸ್ತುತಃ ಪರಿಸ್ಥಿತಿ ಎನಾಗಿದೆ ಎಂದರೆ, ಅನೇಕ ದೊಡ್ಡ ದೊಡ್ಡ ವಾಪಾರನ್ಥರಂತೆ ದೊಡ್ಡ ದೊಡ್ಡ ವಾಪಾರಿ ಆಗಿರುತ್ತಾನೆ. ಅವನು ಈ ಒಂದು ಲೆವಿ ಕೊಟ್ಟ ಮೇಲೆ, ಆ ಒಂದು ಷೆಲ್ಟರ್‌ನಲ್ಲಿ

ಹೆಚ್ಚಿಗೆ ಆಹಾರಪದಾರ್ಥ ಹೋರ್ಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾನೆ. ಸರ್ಕಾರ ರಿಕ್ವಿಸಿಷನ್ ಮಾಡುವ ಬಗ್ಗೆ ಜನರಲ್ ಆಗಿ ಒಂದು ಹುಕುಂ ಕೊಡಬೇಕು. ಎಷ್ಟೋ ಜನ ರೈತರು ಡಿಕ್ಲರೇಷನ್ ಕೊಡುವುದಿಲ್ಲ. ಲೆವಿ ಕೊಟ್ಟ ಮೇಲೆ ತಾಸೀರ್ದಾರರು exemption ಸರ್ಟಿಫಿಕೇಟ್ ಕೊಡುತ್ತಾರೆ, ಆಮೇಲೆ ರೈತರು ಕ್ವಿಂಟಾಲಿಗೆ 150-160 ರೂಪಾಯಿನಂತೆ ಮಾರ್ಕೆಟ್‌ನಲ್ಲಿ ಮಾರ ತಕ್ಕ ವ್ಯವಹಾರ ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಆದ್ಯ ಗಮನ ಕೊಡಬೇಕು. ಎಕ್ಸೆಮ್‌ಷನ್ ಸರ್ಟಿಫಿಕೇಟ್ ಕೊಟ್ಟಾಕ್ಷಣ ಭತ್ತವನ್ನು ಯಾವ ಪ್ರಮಾಣದಲ್ಲಿಯೂ ಹೆಚ್ಚು ಇಡುವುದಕ್ಕೆ ಅವಕಾಶ ಕೊಡಬಾರದು.

ಶ್ರೀ ಡಿ. ದೇವರಾಜ್ ಅರಸ್.—ಫ್ರೀ ಮಾರ್ಕೆಟ್ ಬಿಟ್ಟಿದ್ದೇವೆ.

ಶ್ರೀ ಹೆಚ್. ಡಿ. ದೇವೇಗೌಡ.—ಫ್ರೀ ಮಾರ್ಕೆಟ್ ಬಿಟ್ಟಿದ್ದೀರಿ. ಒಬ್ಬ ರೈತ 100 ಖಂಡುಗ ಬೆಳೆದರೆ, 200 ಖಂಡುಗ ಶೇಖರಣೆ ಮಾಡಿಕೊಂಡು ಇಟ್ಟುಕೊಳ್ಳುತ್ತಾನೆ. ಲೆವಿ ಕೊಟ್ಟಿದ್ದಾನೆಂದು ಅಧಿಕಾರಿಗಳಿಂದ ಎಕ್ಸೆಮ್‌ಷನ್ ಸರ್ಟಿಫಿಕೇಟ್ ತೆಗೆದುಕೊಳ್ಳುತ್ತಾನೆ. ಪ್ರಾಕ್ಟಿಕರ್ ಆಗಿ ಇವೊತ್ತು ಏನಾಗುತ್ತದೆ ಎಂದರೆ, ಬೆಳೆಯುವುದರ ಜೊತೆಗೆ ರೈತ ಶೇಖರಣೆ ಮಾಡಿ ಇಡುತ್ತಿದ್ದಾನೆ. ಅದರ ಬಗ್ಗೆ ಸರ್ಕಾರ ಯೋಚನೆ ಮಾಡಬೇಕು ಮತ್ತು ಅಂತಹ ಸಂದರ್ಭದಲ್ಲಿ ಕಟ್ಟುನಿಟ್ಟಾಗಿ ವರ್ತಿಸಬೇಕು ಎಂದು ಹೇಳಲು ಇಚ್ಛೆಪಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ರೈತ 20-25 ಸೇರು ಕೂಲಿಗಾಗಿ ಕೊಡಬೇಕಾಗುತ್ತದೆ. ಆದರೆ 40 ಪಲ್ಲ ಜಾಸ್ತಿ ಇದ್ದರೆ ಡಿಕ್ಲರೇಷನ್ ಕೊಡಬೇಕು ಎಂದು ಹೇಳುತ್ತೀರಿ. ರೈತರ ಹತ್ತಿರ ಅಲ್ಲಲ್ಲಿ ಅನೇಕ ಸಂಸಾರಗಳು ದವಸ ತೆಗೆದುಕೊಂಡು ಜೀವನ ನಡೆಸುತ್ತಿದ್ದಾರೆ. ಅವರ ಬಾಯಿಗೆ ಬೀಗ ಹಾಕಿದರೆ, ಇಂತಹವರು ಏನು ಮಾಡಬೇಕು ?

ಶ್ರೀ ಹೆಚ್. ಡಿ. ದೇವೇಗೌಡ.—40 ಕ್ವಿಂಟಾಲ್ ಒಳಗೆ ಯಾವ ರೈತನು ಆಹಾರ ದಿನಸಿ ಇಟ್ಟುಕೊಂಡರೂ ಸರ್ಕಾರದ ಭಯವಿಲ್ಲ. ಯಾರೂ ಅದನ್ನು ತೆಗೆದುಕೊಂಡು ಹೋಗಿ ಎಂದು ಹೇಳುವುದಿಲ್ಲ, 40 ಕ್ವಿಂಟಾಲ್‌ಗಳಿಗಿಂತ ಜಾಸ್ತಿ ಇಡುವ ಸಂದರ್ಭದಲ್ಲಿ, ಅವನಿಗೆ ಈ ವಿಷಯದಲ್ಲಿ ಈ ಪ್ರಶ್ನೆ ಬರುತ್ತದೆ. ತಮಗೆ ಈ ವಿಷಯದಲ್ಲಿ ಸಾಕಷ್ಟು ಅನುಭವ ಇದೆ, ರೈತನಾಗಿರತಕ್ಕವನು ಹೋರ್ಡ್ ಮಾಡುವ ಸಂದರ್ಭದಲ್ಲಿ ಫರ್ಮ್ ಆಗಿ ಡೀಲ್ ಮಾಡಬೇಕು. ಲಾಭ ಸಂಪಾದನೆ ಮಾಡುವ ಬಗ್ಗೆ ಸಹಾನುಭೂತಿ ತೋರಿಸಬೇಕಿಲ್ಲ. ನಿನ್ನೆ ದಿವಸ ಈ ಸಭೆಯಲ್ಲಿ ಉತ್ತರ ಕೊಡುವ ಕಾಲದಲ್ಲಿ, 20 ಸಾವಿರ ಜನಗಳಿಗೆ ಒಂದು ತಿಂಗಳಿಗೆ ಪುಕ್ಕಟೆ ಆಹಾರ ಕೊಡುವ ವ್ಯವಸ್ಥೆಯನ್ನು ಆರು ತಿಂಗಳವರೆಗೆ ಇಟ್ಟುಕೊಂಡಿದ್ದಾರೆ ಎಂದು ಹೇಳಿದರು. ಯಾವರೀತಿ ವಿತರಣೆ ಮಾಡಬೇಕು ಮಾನ್ಯ ಸದಸ್ಯರು ತಿಳಿಸಬೇಕು ಎಂದು ಹೇಳಿದರು. ತಮ್ಮ ಉದ್ದೇಶ ಏನು ಇದೆ, ಅದು ದುರ್ವಿನಿಯೋಗ ಆಗಬಾರದು. ಅದಕ್ಕೆ ತಕ್ಕ ಹಾಗೆ ನಿಯಮ ಇಟ್ಟುಕೊಳ್ಳಬೇಕು. ಯಾವ ಮನುಷ್ಯನಿಗೆ ಇದೆ ಯಾರಿಗೆ ಇಲ್ಲ ಎಂದು ತಿಳಿದು, ನಿಜವಾಗಿ ಕಷ್ಟದಲ್ಲಿರತಕ್ಕಂಥವರಿಗೆ, ಯಾವುದೇ ಕಾರಣದಿಂದಲೂ ಜೀವನ ಮಾಡುವುದಕ್ಕೆ ಸಾಧ್ಯ ಇಲ್ಲದೆ ಯಾವುದೇ ಬೇರೆ ತರಹ ಸೌಲಭ್ಯ ಇಲ್ಲದೆ ಕೆಳಮಟ್ಟದಲ್ಲಿರುವ ಜನಗಳಿಗೆ ಕೊಡುವ ವ್ಯವಸ್ಥೆ ಮಾಡಬೇಕು. ಸರಿಯಾದ ವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕು, ಕೊಡತಕ್ಕ ಸೌಲಭ್ಯ ಏನು ಇದೆ, ಅದು ಒಳ್ಳೆಯ ಉದ್ದೇಶದಿಂದ ಮಾಡುವುದಾದರೂ ಕೂಡ, ದುರುಪಯೋಗ ಆಗಬಾರದು ಎನ್ನತಕ್ಕ ಬಗ್ಗೆ ಶ್ರೀ ಜತ್ತಿಯವರು ಆನಕ್ಕೆ ವಹಿಸಬೇಕು, ಸರಿಯಾದ ರೀತಿನಿಯಮಗಳನ್ನು ಮಾಡಬೇಕು ಎಂದು ಹೇಳುತ್ತೇನೆ. ಇವತ್ತು ಒಂದು ರಾಜಕೀಯಕ್ಕೆ ಮಣಿಯದೆ, ಒಂದು ಸರಿಯಾದಂತಹ ವ್ಯವಸ್ಥೆ ಮಾಡುವಂತಾಗಬೇಕೆಂದು ನಾನು ತಮಗೆ ತಿಳಿಸಬಯಸುತ್ತೇನೆ. ಸುಮ್ಮನೆ ಉತ್ತರ ಕೊಡತಕ್ಕ ಕಾಲದಲ್ಲಿ ಒಂದು ತಲೆಗೆ 5 ಕೆ.ಜಿ. ಕೊಡುತ್ತೇವೆ, ಅದರ ಬಗ್ಗೆ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳುತ್ತಾರೆ. ನಾನು ಈಗ ಇವರಲ್ಲಿ ಕೇಳಬೇಕಾಗಿರುವುದೇನೆಂದರೆ, ನಮ್ಮ ತಾಲ್ಲೂಕಿನಲ್ಲಿ ಸಾಧಾರಣ 80 ಸಾವಿರ ಜನಸಂಖ್ಯೆ ಇದೆ. ನಿಮ್ಮ ಲೆಕ್ಕದ ಪ್ರಕಾರ ಇವರಿಗೆ ಸಾಧಾರಣ ಮೂರರಿಂದ ಮೂರೂವರೆ ಸಾವಿರ ಕ್ವಿಂಟಲ್ ದವಸ ಬೇಕಾಗುತ್ತದೆ. ತಮ್ಮ ಇರಾಖೆಯಲ್ಲಿ ಬರೆ 600 ಕ್ವಿಂಟಲ್ ಕೊಡುತ್ತಿದ್ದಾರೆ. ಇದರಿಂದ ಇನ್ನುಳಿದ ಕೊರತೆಯನ್ನು ನೀವು ಯಾವ ತರದಿಂದ ಭರ್ತಿ ಮಾಡುತ್ತೀರಿ ? ತಾವೇನೊ ಸಭೆಯಲ್ಲಿ ಆಶ್ವಾಸನೆ ಕೊಟ್ಟಿದ್ದೀರಿ. ಆದರೆ ಅದನ್ನ ಕಾರ್ಯಗತ ಮಾಡುತ್ತೀರಾ ಎಂದು ನಮಗೆ ಭರವಸೆ ಕೊಡಬೇಕು. ಇದರಿಂದ ನೀವು ಜಿಲ್ಲಾಧಿಕಾರಿಗಳಿಗೆ ಇದನ್ನು ಸರಿದೂಗಿಸುವಂತೆ ಏರ್ಪಾಡು ಮಾಡುವ ಅಪ್ಪಣೆ ಕೊಡಿಸಬೇಕೆಂದು ಈ ಸಮಯದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಇನ್‌ಫರ್ಮೇಶನ್ ಪಬ್ಲಿಸಿಟಿ ಬಗ್ಗೆ ಸುಮಾರು 18 ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದು ಹೊಟ್ಟಿಗೆ ಅನ್ನವಿಲ್ಲ, ಜುಟ್ಟಿಗೆ ಮಲ್ಲಿಗೆ ಹೂ ಎಂಬಂತೆ ಆಗಿದೆ. ಇವತ್ತಿನ ದಿವಸ ನಮಗೆ ಅನೇಕ

(ಶ್ರೀ ಹೆಚ್. ಡಿ. ದೇವೇಗೌಡ)

ತರವಾದ ಕಷ್ಟಗಳು ಇವೆ. ಇಂದು ಸರ್ಕಾರ ಹಣಕಾಸಿನ ಬಗ್ಗೆ ಸಾಕಷ್ಟು ಬಿಗಿಯಾಗಿ ಯೋಚನೆ ಮಾಡತಕ್ಕ ಕಾಲದಲ್ಲಿ ಈ 18 ಲಕ್ಷ ರೂಪಾಯಿಯನ್ನು ಇದಕ್ಕೋಸ್ಕರ ಖರ್ಚು ಮಾಡುವುದು ಎಂದರೆ ಬಹಳ ಶೋಚನೀಯವಾದ ನಂಗತಿ. ಡೆಲ್ಲಿಯಲ್ಲಿ ಒಂದು, ಪಂಜಿಮ್‌ನಲ್ಲಿ ಒಂದು, ಮತ್ತು ಪ್ರತಿ ಜಿಲ್ಲೆಯಲ್ಲಿ ಒಂದೊಂದು ಆಫೀಸುಗಳನ್ನು ತೆಗೆದು, ಇದರಲ್ಲಿ ಟೇಪ್ ರಿಕಾರ್ಡ್ ಮಾಡುವುದಕ್ಕೆ, ಹಾಗೂ ಇನ್ನುಳಿದ ಖರ್ಚುಗಳನ್ನು ಮಂತ್ರಿಗಳ ಭಾಷಣ, ಮುಖಂಡರ ಪ್ರಚಾರ ಇತ್ಯಾದಿಗಳಿಗೆ ಮಾಡಿದರೆ ಇದರಲ್ಲಿ ಏನು ನ್ಯಾಯವಿದೆ ಎಂದು ನಾನಾದರೂ ಕೇಳುತ್ತಿದ್ದೇನೆ. ಇದು ಏನೊಂದು ಉಪಯೋಗಕರವಾದ ವಿಷಯವಲ್ಲ ? ಇದಕ್ಕೋಸ್ಕರ ಇಂತಹ ಖರ್ಚಗೋಸ್ಕರ ಈ ರಿನರ್ವ್ ಬಾಂಕಿನಿಂದ ಓವರ್‌ಡ್ರಾಫ್ಟ್ ಮಾಡಿ 19 ವರೆ ಕೋಟಿ ರೂಪಾಯಿ ತೆಗೆಯಬೇಕಾಯ್ತು ಇದು ಸಾರ್ವಜನಿಕರ ಹಣ, ಸಾರ್ವಜನಿಕರ ಕ್ಷೇಮಕ್ಕಾಗಿ ಉಪಯೋಗಿಸಬೇಕಾದ ಹಣ ಎಂದು ಸರ್ಕಾರದವರು ಸ್ವಲ್ಪ ವಾದರೂ ಯೋಚಿಸಬೇಡವೇ ಎಂದು ನಾನಾದರೂ ಮನನೊಂದು ಇಲ್ಲಿ ಹೇಳಬೇಕಾಗಿದೆ. ಇದಕ್ಕೆ ನಾನಾದರೂ ಹೇಳುತ್ತೇನೆ, ಈ ತರಹ ಇವರು ಅವಾಂತರಗಳನ್ನು ಮಾಡುವುದು ಬೇಡ. ಹೇಪರಿ ನಲ್ಲಿ ಪ್ರಚಾರ ಬಂದ ತಕ್ಷಣ ಇದರಿಂದ ಏನೂ ಇವರ ದೊಡ್ಡಸ್ತಿಕೆ ಹೆಚ್ಚಾಗುವುದಿಲ್ಲ. ಇದರಿಂದ ನಿಮ್ಮ ಘನತೆ ಗೌರವಗಳನ್ನು ಹೆಚ್ಚಿಸಿಕೊಳ್ಳುತ್ತೀರಿ ಎಂದು ಭಾವಿಸಿದ್ದರೆ ಅದು ಕೇವಲ ಮೂಢತನವೆಂದು ತಿಳಿದುಕೊಂಡಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಸ್ಪಾಮಿ, 'ಫಿರ್ಮ್ ಫೇರ್'ನಲ್ಲಿ ಬಂದರೆ ಇವರು ಆಕ್ಷೇಪಿಸಬಹುದು, ಬರೇ ಪ್ರಜಾಮತದಲ್ಲಿ ಬಂದರೆ ಏಕೆ, ಸ್ಪಾಮಿ, ಆಕ್ಷೇಪಣೆ ?

ಶ್ರೀ ಹೆಚ್. ಡಿ. ದೇವೇ ಗೌಡ.—ಆ ಮೇಲೆ Weights and Measurements ಇಲಾಖೆಗೆ ಮೂರುವರೆ ಲಕ್ಷ ರೂಪಾಯಿ ಖರ್ಚಾಗುತ್ತದೆ. ಇದು ದೇಶಕ್ಕೆ ಬೇಕಾದುದೋ, ದೇಶಕ್ಕೆ ಏನು ಇದರಿಂದ ಕೆಲಸವಾಗುತ್ತದೆ ಎಂಬುದೊಂದೂ ನನಗೆ ಅರ್ಥವಾಗುವುದಿಲ್ಲ. ಈಗ ಬಜೆಟಿನಲ್ಲಿ ಮೂರೂವರೆ ಲಕ್ಷ ಒದಗಿಸಿದ್ದಾರೆ. ಇದು ಏನು ಕೆಲಸ ಮಾಡುತ್ತದೆ, ಏನು ಅನುಕೂಲವಾಗಿದೆ ಎಂಬುದರ ಅಂಕ ಅಂಶ ಇದೆಯೋ ಇಲ್ಲವೋ ಎಂದು ಗೊತ್ತಿಲ್ಲ. ಇದು ಎಲ್ಲಾ ಎಷ್ಟು ಕೆಲಸಮಾಡುತ್ತದೆ, ಇದರ ಕರ್ತವ್ಯವೇನು ಎಂಬುದನ್ನು ಸ್ವಲ್ಪ ತಿಳಿಸಬೇಕೆಂದು ಹೇಳುತ್ತೇನೆ. ಹೀಗೆ ವಿಸಲೇನಿಯಸ್ ಡಿಪಾರ್ಟ್‌ಮೆಂಟ್, ಹೌಸ್ ರೆಂಟ್ ಕಂಟ್ರೋಲರ್ ಡಿಪಾರ್ಟ್‌ಮೆಂಟ್ ಎಂದು ಹೇಳಿ ಅನೇಕ ಡಿಪಾರ್ಟುಮೆಂಟುಗಳಿವೆ. ಇದಕ್ಕೆ ಅನಾವಶ್ಯಕವಾದ ಖರ್ಚನ್ನು ತೋರಿಸುತ್ತಾರೆ. ಇದಕ್ಕೆ ಸಾಕಷ್ಟು ಮುಂಜಾಗರೂಕತೆಯನ್ನು ವಹಿಸುವುದು ಸೂಕ್ತ ಎಂದು ನಾನಾದರೂ ಈ ಸಂಧರ್ಭದಲ್ಲಿ ತಿಳಿಸಿ, ಮಾತನಾಡಲು ಅವಕಾಶ ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎ. ಮಸಿಯಪ್ಪ (ಹಿರಿಯೂರು).—ಮಾನ್ಯ ಸಭಾಪತಿಗಳೇ, ಮೈಸೂರು ರಾಜ್ಯದ 66–67ನೇ ಸಾಲಿನ ಸರ್ಕಾರದ ವ್ಯಾಪಾರಿಕೆಯ ಬಗ್ಗೆ ರಾಜ್ಯದ ಯೋಜನೆಯ ಮೇಲಿನ ಬಂಡವಾಳದ ಪೆಚ್ಚು ಮತ್ತು ವಿವಿಧ ಇಲಾಖೆಗಳ ಬಾಬಿನಲ್ಲಿ ಸರ್ಕಾರದವರು ಮಂಡಿಸಿರತಕ್ಕಂತಹ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಸರ್ಕಾರದವರು ಈಗ ಕೈಗೊಂಡಿರತಕ್ಕ ಆಹಾರ ನೀತಿಯ ಬಗ್ಗೆ ಕೆಲವು ಅಂಶಗಳನ್ನು ಪ್ರಸ್ತಾಪ ಮಾಡಲಿಚ್ಛಿಸುತ್ತೇನೆ.

ಈ ಆಹಾರದ ಸಮಸ್ಯೆ ದೇಶದ ಮುಂದೆ ಬಹಳ ಬೃಹದಾಕಾರವಾಗಿ ನಿಂತಿದೆ. ಯಾವ ರೀತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸಬೇಕು, ಅದರಿಂದ ತೊಂದರೆಯಾಗದಂತೆ, ದೇಶಕ್ಕೆ ಅನುಕೂಲವಾಗುವ ಹಾಗೆ, ಅದನ್ನು ಹೇಗೆ ಬಿಡಿಸಬೇಕು ಎನ್ನುವುದನ್ನು ನಾವು ಪ್ರಸ್ತಾಪಮಾಡತಕ್ಕಂಥದ್ದು ಮತ್ತು ಈ ಬಗ್ಗೆ ತೀವ್ರವಾದ ಗಮನವನ್ನು ಹರಿಸುವುದು ಅವಶ್ಯಕವೆಂದು ನಾನಾದರೂ ಭಾವಿಸಿದ್ದೇನೆ. ಈ ಸಂದರ್ಭದಲ್ಲಿ ಆಹಾರ ಸಮಸ್ಯೆಯನ್ನು ಸರ್ಕಾರದವರು ಯಾವ ರೀತಿಯಲ್ಲಿ ಬಗೆಹರಿಸಬೇಕೆಂದು ಗಣನೆ ಮಾಡತಕ್ಕ ರೀತಿಯನ್ನು ನೋಡಿದರೆ, ಈ ಆಹಾರದ ಇಲಾಖೆಯವರು ಭಾವಿಸಿರತಕ್ಕಂಥದ್ದು ಬರೇ ಆಹಾರವನ್ನು ತರಿಸತಕ್ಕದ್ದು ಮತ್ತು ವಿತರಣೆ ಮಾಡತಕ್ಕದ್ದು ಇಷ್ಟೇ ಇವರ ಕರ್ತವ್ಯವೆಂದು ಭಾವಿಸಿಕೊಂಡ ಹಾಗೆ ಕಾಣುತ್ತದೆ. ಆದರೆ ಇಡೀ ದೇಶದ ಆಹಾರ ಸಮಸ್ಯೆಯನ್ನು ಒಂದು ಶಾಸ್ತ್ರೀಯವಾಗಿ ಮತ್ತು ಪರಿಣಾಮಕಾರಿಯಾಗಿ, ಬಗೆಹರಿಸಬೇಕಾಗಿದ್ದರೆ, ನಾವು ಇಂದು ಈ ಸಮಸ್ಯೆಯ ಎಲ್ಲಾ ಮುಖಗಳನ್ನೂ ನೋಡಿ, ಇದಕ್ಕೆ ಒಂದು ಶಾಶ್ವತವಾದ ಪರಿಹಾರವನ್ನು ಕಂಡುಹಿಡಿಯಬೇಕೆಂದು ನಾನಾದರೂ ಹೇಳುತ್ತೇನೆ. ಇವತ್ತು ನಾವು ಪ್ರೊಕ್ಯೂರ್‌ಮೆಂಟ್ ಮತ್ತು ಡಿಸ್ಟ್ರಿಬ್ಯೂಶನ್‌ಗೆ ಹೆಚ್ಚಿನ ಮಹತ್ವ ಕೊಡದೆ, ದೇಶವನ್ನು ಒಂದು ಸ್ವಾವಲಂಬನಾ ದೇಶವನ್ನಾಗಿ ಮಾಡುವುದಕ್ಕೆ, ಹೆಚ್ಚಿನ ಆಹಾರ ಉತ್ಪತ್ತಿ ಮಾಡುವುದಕ್ಕೆ ಪ್ರಯತ್ನ ಮಾಡುವುದೇ ಇದರ

ಮೂಲ ಸಮಸ್ಯೆಯೆಂದು ನನಗನ್ನಿಸುತ್ತದೆ. ಅದಕ್ಕೆ ಸರ್ಕಾರದವರು ಒಂದು ದೊಡ್ಡ ಗೊಂಡಾರಣ್ಯದ ನಡುವೆ ದಾರಿಯನ್ನು ಕಾಣಬೆ, ನೇರವಾದ, ಒಂದು ನ್ಯೆಜವಾದ ದಾರಿಯನ್ನು ಕಂಡುಹಿಡಿಯಬೇಕು. ಇವತ್ತು ಅಮೇರಿಕಾದಿಂದ ಅಕ್ಕಿ ತರಿಸುತ್ತೇವೆ, ನಾಳೆ ಆಸ್ಟ್ರೇಲಿಯಾದಿಂದ ಗೋಧಿ ತರಿಸುತ್ತೇವೆ, ಮತ್ತು ಸೊಸೈಟಿಗಳ ಮೂಲಕ ಹಂಚುತ್ತೇವೆ, ಸಿಟಿಯಲ್ಲಿ ರೇಶನಿಂಗ್ ಡಾರಿಗೆ ತರುತ್ತೇವೆ, ಎಲ್ಲಾ ಹಳ್ಳಿಗಳಲ್ಲೂ ಆಹಾರ ಸಿಗುವಂತೆ ಮಾಡುತ್ತೇವೆ, ಇತ್ಯಾದಿ ವರದಿಗಳನ್ನು ಮಾಡುವುದರಿಂದ ನಮ್ಮ ಈ ಬೃಹದಾಕಾರದ ಸಮಸ್ಯೆಯನ್ನು ಇನ್ನು 100 ವರ್ಷ ಕಾಲ ಪ್ರಯತ್ನ ಮಾಡಿದರೂ ಕೂಡ ಪರಿಣಾಮಕಾರಿಯಾಗಿ ಬಗೆಹರಿಸುವುದಕ್ಕೆ ಖಂಡಿತವಾಗಿಯೂ ಸಾಧ್ಯವಿಲ್ಲ ಎಂದು ನಾನಾದರೂ ಹೇಳುತ್ತೇನೆ. ಆದ್ದರಿಂದ ಇದಕ್ಕೆ ಮೂಲತಃ ಕಾರಣವಾದ, ಆಹಾರದ ಉತ್ಪಾದನೆಯನ್ನು ಹೆಚ್ಚಿಗೆ ಮಾಡುವುದಕ್ಕೆ ಏನೇನು ಪ್ರಯತ್ನಗಳು ಬೇಕೋ, ಅವನ್ನು ಸರಿಯಾದ ರೀತಿಯಲ್ಲಿ ಮಾಡಬೇಕು. ನಮ್ಮ ಆಹಾರೋತ್ಪತ್ತಿಯನ್ನು ಹೆಚ್ಚಿಸುವುದಕ್ಕೋಸ್ಕರ ಬೇರೆ ಬೇರೆ ರೀತಿಯಲ್ಲಿ ಏನೇನು ಇನ್‌ಸೆಂಟಿವ್ಸ್ ರೈತನಿಗೆ ಕೊಡಬೇಕೋ, ಅದನ್ನು ಅವನಿಗೆ ಕೊಡಬೇಕು. ಏಕೆಂದರೆ ಇವತ್ತು ಆಹಾರದ ಉತ್ಪತ್ತಿಯು ಕೈಗಾರಿಕೆಗಳಲ್ಲಿ ಆಗುತ್ತಾ ಇಲ್ಲ. ಅದು ಭೂಮಿಯಲ್ಲಿ ಉತ್ಪತ್ತಿಯಾಗುವುದರಿಂದ, ರೈತನಿಗೆ ಮುಖ್ಯವಾಗಿ ಬೇಕಾದಂತಹ ಗೊಬ್ಬರ, ನೀರು, ಬೀಜ ಹಾಗೂ ಇನ್ನುಳಿದ ಸಲಕರಣೆಗಳನ್ನು ಒದಗಿಸಿದ್ದೆ ಆದರೆ, ನಮ್ಮ ಈ ಸಮಸ್ಯೆ ಏನಿದೆ ಅದಕ್ಕೆ ಅದು ಔಷಧಿಯಾಗುತ್ತದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಏಕೆಂದರೆ, ಇವತ್ತು ಅವನಿಗೆ ಇದೆಲ್ಲಾ ಕೊಡದೆ ಹೋದರೆ ಅವನ ಕಾಲ ಮೇಲೆ ಅವನು ನಿಲ್ಲಲಾರದೆ ತುಂಬಾ ಕಷ್ಟಕ್ಕೀಡಾಗುತ್ತಾನೆ. ಅವನು ಸಾಕಷ್ಟು ಬೆಳೆದರೂ, ಅವನು ಸಹಕಾರ ಸಂಘಗಳಿಂದಾಗಲೀ, ಸರ್ಕಾರದಿಂದಾಗಲೀ, ಭಂಡವಾಳಗಾರರಿಂದಾಗಲೀ ಅಥವಾ ವರ್ತಕರಿಂದಾಗಲೀ ಪಡೆದಂತಹ ಸಾಲಗಳನ್ನು ಕೊಡಲು ಸಾಧ್ಯವಾಗದೆ ಹೋದರೆ ಅವನು ಏತಕ್ಕೆ ಆಹಾರ ಉತ್ಪಾದನೆ ಮಾಡಬೇಕು? ಈ ಆಹಾರ ಉತ್ಪಾದನೆಗೆ ರೈತನೊಬ್ಬನೇ ಜವಾಬ್ದಾರನಾಗಿ ಹುಟ್ಟಿದನೇ, ಅಥವಾ ಬೇರೆ ಯಾರೂ ಈ ಆಹಾರದ ಸಮಸ್ಯೆಗೆ ಜವಾಬ್ದಾರರಲ್ಲವೇ ಎನ್ನುವ ಎಲ್ಲಾ ಸಮಸ್ಯೆಗಳು ರೈತನ ಮುಂದೆ ಬಂದು ನಿಲ್ಲುತ್ತವೆ. ತಾನು ಬೆಳೆದಂಥ ಬೆಳೆಗೆ ಸಾಕಷ್ಟು ವರಮಾನ ಬಂದು, ತಾನು ಬೆಳೆಯನ್ನು ತೆಗೆಯಲು ಖರ್ಚು ಮಾಡಿದುದೆಲ್ಲವನ್ನೂ ಕೂಡ ಅದರೊಳಗೇ ಹಿಡಿದು, ಅವನು, ಹೆಂಡತಿ ಮತ್ತು ಮಕ್ಕಳು ಸುಖವಾಗಿ ಸಂಸಾರ ನಡೆಸುವುದಕ್ಕೆ ಸಾಗಾಗುವಷ್ಟು ವರಮಾನ ರೈತನಿಗೆ ಬರದೆ ಹೋದರೆ ಆ ತರಹ ಧಾರಣಿವಾಸಿಗಳು ಇಲ್ಲದೆ ಹೋದರೆ, ಎಷ್ಟೇ ಪ್ರಯತ್ನ ಮಾಡಿದರೂ ಕೂಡ ವ್ಯವಸಾಯವನ್ನು ಅಭಿವೃದ್ಧಿಗೆ ತರುವುದಕ್ಕಾಗುವುದಿಲ್ಲ ಎಂದು ಈ ಸಂದರ್ಭದಲ್ಲಿ ಒತ್ತಾಯ ಪೂರ್ವಕವಾಗಿ ಈ ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಆಹಾರ ಮಂತ್ರಿಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ಆಹಾರ ಮಂತ್ರಿಗಳು ಮೈಸೂರು ರಾಜ್ಯದ ಮುಖ್ಯ ಮಂತ್ರಿಗಳಾಗಿ ಮೂರು ನಾಲ್ಕು ವರ್ಷಗಳಕಾಲ ಜವಾಬ್ದಾರಿಯನ್ನು ಹೊತ್ತು ಆಡಳಿತ ನಡೆಸಿದ್ದಾರೆ, ಹಾಗೆಯೇ ಹಣಕಾಸಿನ ನಿಪುಣರಾಗಿ ನುಮಾರು ನಾಲ್ಕು ವರ್ಷ ಕಾಲ ದೊಡ್ಡ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ. ನಾನು ಹೇಳಬೇಕು ಎಂದರೆ ದೇಶದಲ್ಲಿ ದಕ್ಷ ಆಡಳಿಗಾರರು, ಚೆನ್ನಾಗಿ ಯೋಚನೆ ಮಾಡಿ ರೋಗದ ಮೂಲವನ್ನು ಕಂಡುಹಿಡಿದು ಅದಕ್ಕೆ ತಕ್ಕ ಔಷಧಿಯನ್ನು ಕೊಟ್ಟು ರೋಗವನ್ನು ನಿವಾರಣೆ ಮಾಡತಕ್ಕ ಶಕ್ತಿ ಅವರಲ್ಲದೆ ಇಂಥ ಕೀರ್ತಿಯನ್ನು ಮಾನ್ಯ ಮಂತ್ರಿಗಳು ಪಡೆದಿದ್ದಾರೆ. ಮಾನ್ಯ ಜತ್ತಿಯವರು ಆಹಾರ ಮಂತ್ರಿಗಳಾದ ಮೇಲೆ ರೈತ ಮತ್ತು ಬಳಕೆದಾರ ಇಬ್ಬರೂ ಸಹ ಆಹಾರದ ಸಮಸ್ಯೆಯನ್ನು ನಿಜವಾಗಿಯೂ ಪರಿಣಾಮಕಾರಿಯಾದ ರೀತಿಯಲ್ಲಿ ಬಗೆಹರಿಸುತ್ತಾರೆ, ಉತ್ಪಾದನೆ ಮಾಡುವವನಿಗೂ ಉತ್ತೇಜನ ಸಿಕ್ಕುತ್ತದೆ ಬಳಕೆದಾರನಿಗೂ ಅನುಕೂಲವಾಗುತ್ತದೆ ಎನ್ನುವ ಆಶಾಕಿರಣವನ್ನು ಇಟ್ಟುಕೊಂಡಿದ್ದಾರೆ. ನಾನು ಈ ವಿಷಯದಲ್ಲಿ ಒಂದೇ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅಮೆರಿಕದ ಸಂಯುಕ್ತ ಸಂಸ್ಥಾನಗಳಲ್ಲಿ 1938-39ರಲ್ಲಿ ವ್ಯವಸಾಯದ ಉತ್ಪಾದನೆ ಅಧೋಗತಿಗೆ ಹೋಗಿದ್ದ ಕಾಲದಲ್ಲಿ, ರೂಸ್‌ವೆಲ್ಟರು ಆ ದೇಶದ ಅಧ್ಯಕ್ಷರಾಗಿದ್ದ ಕಾಲದಲ್ಲಿ, ವ್ಯವಸಾಯಕ್ಕೆ ಪೂರ್ಣವಾದ ಉತ್ತೇಜನವನ್ನು ಕೊಟ್ಟು ಯಾವುದೇ ನಂದರ್ಭದಲ್ಲಿಯೂ ನಿಮ್ಮ ಕೈ ಬಿಡುವುದಿಲ್ಲ, ನೀವು ಸಂದೇಹ ಪಡಬೇಡಿ, ಸರ್ಕಾರ ರೈತರ ಕಡೆಗೆ ಇದೆ ಎನ್ನುವ ಘೋಷಣೆಯನ್ನು ಮಾಡಿ ಎಲ್ಲಾ ಆಹಾರ ವಸ್ತುಗಳಿಗೂ ಕೂಡ ನಿಗದಿಯಾಗಿರತಕ್ಕ ದರವನ್ನು ಕೊಟ್ಟು ಪ್ರಪಂಚದಲ್ಲಿಯೇ ಅಮೆರಿಕಾ ಆಹಾರ ಉತ್ಪಾದನೆಯಲ್ಲಿ ಅಗ್ರರಾಷ್ಟ್ರವಾಗುವಂತೆ ಮಾಡಿದರು. ಯಾವ ದೇಶದಲ್ಲಿಯಾದರೂ ಆಹಾರ ಕಡಮೆ ಆಯಿತು ಎಂದರೆ ಆ ದೇಶಕ್ಕೆ ಆಹಾರವನ್ನು ಕಳುಹಿಸಿಕೊಟ್ಟು ಹೆಮ್ಮೆಯಿಂದ ಮೆರೆಯುತಕ್ಕ ರಾಷ್ಟ್ರವಾಗಿದೆ. ಅದೇ ತರಹ ಸಾಧನೆಯನ್ನು, ಅದೇ ಕೀರ್ತಿಯನ್ನು ಅರೇಳು ವರ್ಷ ಮೈಸೂರು ರಾಜ್ಯದ ಜವಾಬ್ದಾರಿಯನ್ನು ಹೊತ್ತು, ಜನರಲ್ಲಿ ಒಳ್ಳೆಯ ಅಭಿಪ್ರಾಯವನ್ನು ಬೇರೂರು

(ಶ್ರೀ ಎ. ಮುನಿಯಪ್ಪ)

ವಂತೆ ಮಾಡಿರುವ ಶ್ರೀಮಾನ್ ಜತ್ತಿಯವರು ತಮ್ಮ ಅಧಿಕಾರಾವಧಿಯಲ್ಲಿ ಆ ಕಾರ್ಯವನ್ನು ಸಾಧಿಸುವುದಕ್ಕೆ ಕಾರಣಕರ್ತರಾಗಬೇಕು ಎಂದು ಈ ಸಂದರ್ಭದಲ್ಲಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ.

[MR. SPEAKER in the Chair]

ಆಹಾರ ಉತ್ಪಾದನೆ ಮೊದಲು, ಮತ್ತು ಎರಡನೆಯದಾಗಿ ಪ್ರೊಕ್ಯೂರ್‌ಮೆಂಟ್ ಬರುತ್ತದೆ. ಮತ್ತು ಆಮದು ಮಾಡಿಕೊಳ್ಳುವುದು ಬರುತ್ತದೆ. ಅದರ ಬಗೆ ಹೆಚ್ಚು ಹೇಳುವುದಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಆಮದು ಮಾಡಿಕೊಳ್ಳುವುದನ್ನು ಕಡಮೆ ಮಾಡಬೇಕು ಎಂದರೆ ತಪ್ಪಾಗುತ್ತದೆ. ಅದರೆ ಹಿಂದೆ ಇದಕ್ಕಿಂತ ಉತ್ತಮವಾದ ಕಾಲವಿತ್ತು. ಉತ್ತಮವಾಗಿರುವ ಕಾಲದಲ್ಲಿ, ರೈತನಿಗೆ ಸ್ವಲ್ಪ ಉತ್ತೇಜನವನ್ನು ಕೊಟ್ಟಿದ್ದರೆ ಹೆಚ್ಚು ಆಹಾರ ಬೆಳೆಯುವ ಸಂದರ್ಭ ಬರುತ್ತಿತ್ತು. ಅಂಥ ಸಂದರ್ಭದಲ್ಲಿ ಆಮದನ್ನು ಕಡಮೆ ಮಾಡಿ ಅದರಿಂದ ಹೊರಗಿನವರಿಗೆ ಕೊಡುವ ಸಾವಿರಾರು ಕೋಟಿ ರೂಪಾಯಿಗಳು ಉಳಿಯುವುದನ್ನು ನಮ್ಮ ರೈತರಿಗೆ, ಲಬರರೈಸ್ಡ್ ಸ್ಕೀಮುಗಳ ಪ್ರಕಾರ ಬಾಪಿಗಳಿಗೆ ಮತ್ತು ಇತರ ಕೆಲಸಗಳಿಗೆ ಸಾಲವಾಗಿ ಕೊಡುತ್ತಿರುವಂತೆ, ನಾಲ್ಕಾರು ವರ್ಷಗಳ ಹಿಂದೆಯೇ ಕೊಟ್ಟಿದ್ದರೆ ಈಗ ಬಂದಿರುವ ದುಸ್ಥಿತಿ ಬರುತ್ತಿರಲಿಲ್ಲ. ಮುಂದೆಯಾದರೂ ಇಂಥ ಪರಿಸ್ಥಿತಿ ಬರಬಾರದೆಂದು ತಿಳಿದು ಆಮದನ್ನು ಕಡಮೆ ಮಾಡಿ ಸ್ಥಳದ ಉತ್ಪಾದನೆಗೆ ಹೆಚ್ಚು ಪ್ರೋತ್ಸಾಹವನ್ನು ಕೊಡುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಅದಕ್ಕೆ ಆಹಾರ ವಸ್ತುವಾಗಿಲ್ಲ ಎಂದು ಭಾವಿಸಲಾಗಿದೆ. ಹೊರಗಿನಿಂದ ಬರತಕ್ಕ ಮಾಲಿನಿಂದ ದೇಶದಲ್ಲಿ ಉತ್ಪಾದನೆಯಾಗುವ ಅಡಕೆಗೆ ಧಕ್ಕೆ ಬರುತ್ತದೆ ಎಂದು ತಿಳಿದು ಹೊರಗಿನಿಂದ ತರಿಸತಕ್ಕ ಅಡಕೆಗೆ ತೆರಿಗೆ ಮತ್ತು ಇಂಪೋರ್ಟ್ ಡ್ಯೂಟಿ ಹೆಚ್ಚಾಗಿ ಹಾಕಿದರು. ಇದರಿಂದ ಸ್ಥಳದಲ್ಲಿ ಬೆಸೆಯತಕ್ಕ ಅಡಕೆಗೆ ಹೆಚ್ಚಿನ ಧಾರಣೆ ದೊರೆತು ರೈತನಿಗೆ ಅಡಕೆ ಬೆಳೆಯನ್ನು ತೆಗೆಯಲು ಹೇಳದೆ ಇದ್ದರೂ ಕೂಡ ತಾನಾಗಿಯೇ ವರ್ಷ ವರ್ಷವೂ ಅಡಕೆ ತೋಟವನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾನೆ. ಇದೇ ಪದ್ಧತಿಯನ್ನು ಬತ್ತ ಮೊದಲಾದ ಆಹಾರ ಪದಾರ್ಥಗಳ ವಿಷಯದಲ್ಲಿಯೂ ಅನುಸರಿಸಿದರೆ ರೈತರು ತಾವಾಗಿಯೇ ಹೆಚ್ಚು ಬೆಳೆಯನ್ನು ತೆಗೆಯುವ ಪರಿಸ್ಥಿತಿ ಬರುತ್ತದೆ, ಹಾಗೆ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ರೋಕಲ್ ಪ್ರೊಕ್ಯೂರ್‌ಮೆಂಟ್ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಸರ್ಕಾರದವರು ಮೊನ್ನೆ ರೆಪ ಪದ್ಧತಿಯನ್ನು ಜಾರಿಗೆ ತಂದಿದ್ದಾರೆ. ಅನೇಕ ಜನ ರೈತರು ಸರ್ಕಾರದವರು ಹಾಕಿರತಕ್ಕ ರೆಪಿಯನ್ನು ವಿರೋಧ ಮಾಡದಂತೆ, ಎಲ್ಲೆಲ್ಲ ನ್ಯಾಯವಾಗಿ ಬೆಳೆಯಾಗಿದೆಯೋ ಅಲ್ಲಿ ಮೋಸ ವಿಲ್ಲದಂತೆ ಸರ್ಕಾರಕ್ಕೆ ಕೊಟ್ಟಿರುತ್ತಾರೆ. ಕೆಲವು ಕಡೆಗಳಲ್ಲಿ, ಬೆಳೆ ಆಗದೆ ಇರುವ ಕಡೆ, ನಮ್ಮ ಸ್ನೇಹಿತರು ಹೇಳಿದ ಹಾಗೆ ಅನ್ಯಾಯಗಳು ಕೂಡ ಆಗಿವೆ. ಬಲವಂತದಿಂದ, ಮನೆಗಳಿಗೆ ನುಗ್ಗಿ ಶೋಧನೆ ಮಾಡಿ, ಬೀಜಕ್ಕೆ ಎಂದು ಇಟ್ಟುಕೊಂಡಿದ್ದ ದವಸವನ್ನು ಕೂಡ ಪ್ರೊಕ್ಯೂರ್ ಮಾಡಿರುವ ನಿದರ್ಶನಗಳನ್ನು ಪತ್ರಿಕೆಗಳಲ್ಲಿಯೂ ನೋಡಿದ್ದೇವೆ. ಇಂಥದ್ದರಲ್ಲಿ ರೈತ ಏನು ಬೆಳೆಯನ್ನು ತಾನೆ ತೆಗೆಯಲು ಸಾಧ್ಯ ಎನ್ನುವುದನ್ನು ಯೋಚನೆ ಮಾಡಬೇಕು.

ಧಾನ್ಯವನ್ನು ಪ್ರೊಕ್ಯೂರ್ ಮಾಡುವುದರಲ್ಲಿ ಸೊಸೈಟಿಗಳ ಮುಖಾಂತರ ಮಾಡುವುದರಲ್ಲಿ, ಮಿರ್ ಮಾಡುವುದರಲ್ಲಿ ದೋಷವಿದೆ. ಆದರೆ ಎಲ್ಲ ಕಡೆಯೂ ಒಂದೊಂದು ದೋಷವಿದೆ. ಮಿರ್‌ಗಳಿಗೆ ಒಂದು ಕ್ವಿಂಟಾಲ್ ಬತ್ತವನ್ನು ಕೊಟ್ಟರೆ ಅವರು ಇಷ್ಟು ಅಕ್ಕಿಯನ್ನು ಕೊಡಬೇಕು, ಎಂದು ಇಟ್ಟಿರತಕ್ಕ ಇಳುವರಿ ಏನಿದೆ ಅದರಿಂದ ಮಿರ್‌ನವರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಒಂದೆರಡು ಸೊಸೈಟಿಗಳಲ್ಲಿ ನಡೆದಿರತಕ್ಕ ವ್ಯವಹಾರವನ್ನು ಕೇಳಿದರೆ ನೂರಾರು ಕ್ವಿಂಟಾಲ್ ಬತ್ತವನ್ನು ಅಕ್ಕಿ ಮಾಡಿಸುವಾಗ ಹತ್ತಾರು ಕ್ವಿಂಟಾಲ್‌ನಷ್ಟು ಅಕ್ಕಿ ಮಿರ್‌ನವರಿಗೆ ಅನಾವಶ್ಯಕವಾಗಿ ಉಳಿದು ಅದನ್ನು ಮಿರ್‌ನವರು ದುರುಪಯೋಗ ಮಾಡಿಕೊಳ್ಳತಕ್ಕ ನಿದರ್ಶನಗಳನ್ನು ನಾವು ಕಂಡಿದ್ದೇವೆ, ಕೇಳಿದ್ದೇವೆ. ಇಂಥದಕ್ಕೆ ಅವಕಾಶವಾಗದಂತೆ ನೋಡಿಕೊಳ್ಳುವುದು ಒಳ್ಳೆಯದು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಆಹಾರಧಾನ್ಯವನ್ನು ವಿತರಣೆ ಮಾಡುವ ಸಂದರ್ಭದಲ್ಲಿ ಸೊಸೈಟಿಯವರು ಜನರಿಗೆ ಹಂಚುವುದರಲ್ಲಿ ಕೂಡ ನ್ಯೂನತೆಗಳಿವೆ ಎಂದು ಕೆಲವು ಮಾನ್ಯ ಸದಸ್ಯರು ಹೇಳಿದರು. ಯಾವುದೇ ಪದ್ಧತಿಯನ್ನು ಅನುಸರಿಸಿದರೂ ಕೂಡ ಅದರಲ್ಲಿ ಕೆಲವಾರು ದೋಷದೋಷಗಳು ಇದ್ದೇ ಇರುತ್ತವೆ. ನಾವು ಯಂತ್ರಗಳೊಡನೆ ವ್ಯವಹಾರವನ್ನು ನಡೆಸುತ್ತಿಲ್ಲ, ಮನುಷ್ಯರ ಹತ್ತಿರ ವ್ಯವಹಾರವನ್ನು ನಡೆಸುತ್ತಿದ್ದೇವೆ. ಮನುಷ್ಯರಲ್ಲಿ ದೋಷದೋಷಗಳು ಸರ್ವೇ ಸಾಮಾನ್ಯವಾಗಿ ಎಲ್ಲರಲ್ಲಿಯೂ

ಕಾಣುತ್ತಿರುವುದರಿಂದ ಸರ್ಕಾರದವರೇ ಆಗಲಿ, ಸೊಸೈಟಿಯವರೇ ಆಗಲ್ಲಿ ಎಲ್ಲ ಕಡೆಯೂ ಅದು ಪ್ರತಿಬಿಂಬಿತವಾಗುತ್ತದೆ. ಅದನ್ನೇ ವಿಪರೀತವಾಗಿ ಟೀಕೆ ಮಾಡುವುದರ ಬದಲು ಆ ದೋಷಗಳನ್ನು ತಿದ್ದುವುದಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದು. ಸೊಸೈಟಿಗಳಲ್ಲಿ ಕೆಲವಾರು ಅನ್ಯಾಯಗಳು ನಡೆಯುತ್ತಿರುವುದಕ್ಕೆ ಈಗ ಸೊಸೈಟಿಗಳ ಆಡಳಿತ ವರ್ಗವನ್ನು ರಚನೆ ಮಾಡುವುದರಲ್ಲಿ ಒಂದು ಮೂಲಭೂತ ಲೋಪವಿದೆ. ಸೊಸೈಟಿಗಳ ಆಡಳಿತ ವರ್ಗ ತಮ್ಮಲ್ಲೇ ಒಂದು ಮನಾಪಲಿ ಮಾಡಿ ಕೊಂಡಿದ್ದಾರೆ. ಇದನ್ನು ಮೂಲಭೂತವಾಗಿ ಬದಲಾವಣೆ ಮಾಡಿ ವರ್ಷಕ್ಕೆ ವರ್ಷಕ್ಕೆ ಹೊಸ ಹೊಸ ವ್ಯಕ್ತಿಗಳು ಬಂದು ಸೊಸೈಟಿಯ ಆಡಳಿತವನ್ನು ನುಗಮವಾಗಿ ನಡೆಸಿಕೊಂಡು ಹೋಗತಕ್ಕ ವ್ಯವಸ್ಥೆಯನ್ನು ಮಾಡುವ ಪೈಪೋಟಿ ಮನೋಭಾವನೆಯನ್ನು ಅವರಲ್ಲಿ ತರದೆ ಹೋದರೆ ಈಗ ಇರುವ ಮನಾಪಲಿ ಮನೋಭಾವನೆಯಿಂದ ಸೊಸೈಟಿಯನ್ನು ಯಾರೂ ಕೇಳುವವರೇ ಇಲ್ಲದ ಹಾಗೆ ಆಗುತ್ತದೆ. ಆಹಾರವನ್ನು ಹಂಚಿಕೆ ಮಾಡುವ ಕಾಲದಲ್ಲಿ ಸೊಸೈಟಿಗಳ ಮೂಲಕ ಮಾಡಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಆದರೆ ಅದನ್ನು ಸ್ವಲ್ಪ pull up ಮಾಡಬೇಕು, ಅದನ್ನು ಹತೋಟಿಗೆ ತರಬೇಕು ಮತ್ತು ಅಲ್ಲಿ ಆಗತಕ್ಕ ಲೋಪದೋಷಗಳನ್ನು ತಿದ್ದತಕ್ಕದ್ದು ಬಹಳ ಅವಶ್ಯಕ ಎಂದು ಸಲಹೆಯನ್ನು ಕೊಡುತ್ತೇನೆ.

ಏಕಸ್ವಾಮ್ಯ ಆಹಾರ ಧಾನ್ಯ ಸಂಗ್ರಹಣೆಯ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈ ರೀತಿ ಮಾಡುವುದು ಒಂದು ದೃಷ್ಟಿಯಿಂದ ಒಳ್ಳೆಯದು ಎಂದು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇವತ್ತು ಸರ್ಕಾರದಿಂದ ಕೊಡುತ್ತಿರುವ ಧಾರಣೆಯನ್ನೆ ಏಕಸ್ವಾಮ್ಯ ಸಂಗ್ರಹಣೆಯಲ್ಲಿಯೂ ಕೊಡುವುದಾದರೆ ಅದಕ್ಕಿಂತ ಕುಠಾರಪ್ರಾಯವಾಗಿರತಕ್ಕ ಯೋಜನೆ ರೈತನಿಗೆ ಇನ್ನು ಯಾವುದೂ ಇಲ್ಲ ಎಂದು ಹೇಳುತ್ತೇನೆ. ಈಗ ನಿಗದಿ ಮಾಡಿರುವ ಧಾರಣೆಗಳು ವ್ಯವಸಾಯಗಾರನಿಗೆ ಯಾವ ರೀತಿಯಿಂದಲೂ ಉತ್ತೇಜನಕರವಾಗಿಲ್ಲ. ಈಗ ಸರ್ಕಾರ ಲೆವಿ ಮಾಡುತ್ತಿರುವ ಪ್ರಕಾರ ಸರ್ಕಾರ ನಿಗದಿ ಮಾಡಿರುವ ಧಾರಣೆಯಲ್ಲಿ ಸ್ವಲ್ಪ ಭಾಗ ಧಾನ್ಯವನ್ನು ಕೊಟ್ಟರೆ ಎಷ್ಟು ಧಾನ್ಯವನ್ನಾದರೂ ಬೇರೆ ಕಡೆ ಮಾರಾಟ ಮಾಡಬಹುದು ಎನ್ನುವ ಅಭಿಪ್ರಾಯವನ್ನು ಇಟ್ಟುಕೊಂಡು ಅವನು ಸರ್ಕಾರಕ್ಕೆ ಧಾನ್ಯವನ್ನು ಕೊಡುತ್ತಿದ್ದಾನೆ. ಈಗ ನಿಗದಿ ಮಾಡಿರುವ ಧಾರಣೆಯಲ್ಲಿಯೇ ಸರ್ಕಾರ ಏಕಸ್ವಾಮ್ಯ ಪದ್ಧತಿಯಲ್ಲಿಯೂ ಆಹಾರ ಧಾನ್ಯವನ್ನು ತೆಗೆದುಕೊಳ್ಳುವುದಾದರೆ ಅದರಿಂದ ರೈತನಿಗೆ ದೊಡ್ಡ ಆಘಾತವಾಗುತ್ತದೆ. ಆದುದರಿಂದ ಶಾಸ್ತ್ರೀಯವಾದ ಪದ್ಧತಿಯಿಂದ ದರವನ್ನು ನಿಗದಿ ಮಾಡಿ ರೈತನಿಗೆ ಉತ್ತಮ ಬೆಲೆಗಳನ್ನು ಕೊಟ್ಟು ಆಹಾರ ಧಾನ್ಯವನ್ನು ಸಂಗ್ರಹ ಮಾಡಬೇಕೆಂದು ನಾನು ಸಲಹೆ ಮಾಡುತ್ತಿದ್ದೇನೆ.

ಈಗ ರೈತನಿಗೆ ಕೊಡುವ ಬೆಲೆಯ ಜೊತೆಗೆ 5 ರೂಪಾಯಿ ಬೋನಸ್ ಕೊಡುತ್ತಿದ್ದಾರೆ.

11-00 A.M.

ನನ್ನ ತಾಲ್ಲೂಕಿನಮಟ್ಟಿಗೆ ಹೇಳುವುದಾದರೆ ಇವತ್ತಿನವರೆಗೂ ರೈತನಿಗೆ ಇವರು ಕೊಟ್ಟಿರತಕ್ಕ 5 ರೂಪಾಯಿಗಳ ಬೋನಸ್ಸು ತಲುಪಿಲ್ಲ. ಭತ್ತ ವಸೂಲಿ ಆಗಿ ಮೂರು ತಿಂಗಳುಗಳಾಗಿರಬಹುದು. ಆ ಬೋನಸ್ಸು ಅವರ ಕೈಗೆ ಸೇರಿಲ್ಲ. ಏಕೆಂದರೆ ಅದನ್ನು ಸೊಸೈಟಿಯವರು ಕೊಡಬೇಕೇ ಅಥವಾ ರೆವಿನ್ಯೂ ಆಫೀಸಿನ ತಹಸೀಲ್‌ದಾರರು ಕೊಡಬೇಕೇ ಎಂಬುದು ಇನ್ನೂ ನಿರ್ಣಯಾಗಿ ನಿಗದಿಯಾಗಿಲ್ಲ ವೆಂದು ನನಗೆ ಗೊತ್ತಾಗಿದೆ. ಆದ್ದರಿಂದ ಈ ಬಗ್ಗೆ ಕೂಡಲೇ ಪರಿಶೀಲನೆ ನಡೆಸಿ ಅವರಿಗೆ ಕೊಡತಕ್ಕ ಬೋನಸ್ಸನ್ನು ಆದಷ್ಟು ಜಾಗ್ರತೆ ಕೊಡುವ ವ್ಯವಸ್ಥೆ ಮಾಡಬೇಕು.

ಇನ್ನು ಕಾಸ್ಟ್ ಷೀಟ್ ಎಂದು ಸರ್ಕಾರದವರು ಧಾರಣೆಗಳನ್ನು ನಿಗದಿಮಾಡಿದ್ದಾರೆ. ಅದನ್ನು ವರ್ಕ್‌ಔಟ್ ಸಹ ಮಾಡಿದ್ದಾರೆ. ಮೊದಲನೆಯದಾಗಿ ಪ್ರೊಡ್ಯೂಸರ್‌ನಿಂದ ಸೊಸೈಟಿ, ಸೊಸೈಟಿಯಿಂದ ಹೋಲ್‌ಸೇಲರ್ಸ್, ಹೋಲ್‌ಸೇಲರ್ಸ್‌ನಿಂದ ರಿಟೇಲರ್ಸ್—ಈಗೆ ಆಹಾರ ಪದಾರ್ಥಗಳನ್ನು ಒಂದು ಕಡೆಯಿಂದ ಮತ್ತೊಂದುಕಡೆಗೆ ಸಾಗಿಸುವಾಗ ಆಗತಕ್ಕ ಹ್ಯಾಂಡ್ಲಿಂಗ್ ಚಾರ್ಜಸ್, ಸ್ಟೋರೇಜ್ ಚಾರ್ಜಸ್, ರಾಭ ನಷ್ಟ, ಬಡ್ಡಿ, ಪ್ಯೂಮಿಗೇಷನ್ ಚಾರ್ಜಸ್, ಇನ್ನೂ ಇತರೇ ಸಣ್ಣ ಪುಟ್ಟ ಚಾರ್ಜಸ್ ಇತ್ಯಾದಿಗಳು 2-3 ಸಾರಿ ಬೀಳುತ್ತದೆ. ಇದನ್ನೆಲ್ಲಾ ಸರ್ಕಾರದವರು ಕೂಲಂಕಷವಾಗಿ ಪರಿಶೀಲಿಸಿ ರೆಕ್ಯಾಚಾರ ಮಾಡಬೇಕಾಗುತ್ತದೆ. ಸ್ವಲ್ಪ ಜನರನ್ನಾಗಿ ಇದರ ಬಗ್ಗೆ ವ್ಯವಹಾರ ನಡೆದಿದ್ದರೆ ಒಂದು ವೇಳೆ ಇದು ಸರ್ಕಾರಕ್ಕೆ ಹೊರೆ ಆಗಬಹುದು. ಆದ್ದರಿಂದ ಶ್ರೀಮಾನ್ ಕುಂದೂರು ರುದ್ರಪ್ಪನವರು ಹೇಳಿದಹಾಗೆ ಈಗ 5 ರೂಪಾಯಿಗಳನ್ನು ಕೊಡುವ ಜೊತೆಗೆ ಇನ್ನೂ 5 ರೂಪಾಯಿಗಳನ್ನು ಜಾಸ್ತಿ ಕೊಟ್ಟರೆ ರೈತರಿಗೆ ಬಹಳ ಒಳ್ಳೆಯದಾಗುತ್ತದೆಂದು ನಾನು ಹೇಳುತ್ತೇನೆ. ಇದಕ್ಕಾಗಿ ಈಗ ಸರ್ಕಾರಕ್ಕೆ 50 ಲಕ್ಷ ರೂಪಾಯಿಗಳು ಖರ್ಚಾದರೂ ಇನ್ನು 50 ಲಕ್ಷ ರೂಪಾಯಿಗಳನ್ನು ಹೆಚ್ಚು ಖರ್ಚು ಮಾಡಿದರೂ ಚಿಂತೆಯಿಲ್ಲ. ರೈತರಿಗೋಸ್ಕರ ಈ ರೀತಿ ಖರ್ಚುಮಾಡಿದರೆ ಅವರಿಗೆ ತುಂಬಾ ಉಪಕಾರ ಮಾಡಿದಂತಾಗುತ್ತದೆ.

(ಶ್ರೀ ವಿ. ಮುನಿಯಪ್ಪ)

ಕೊನೆಯದಾಗಿ ಈ ಬೇಡಿಕೆಗಳಿಗೆ ನಾನು ಹೃತ್ಪೂರ್ವಕವಾಗಿ ಸ್ವಾಗತವನ್ನು ಬಯಸಿ ನನ್ನ ವಂದನೆಗಳನ್ನು ಅಧ್ಯಕ್ಷರಿಗೆ ಅರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ನಂಜಪ್ಪ (ಕಬ್ಬನ್‌ಪೇಟೆ).—ಅಧ್ಯಕ್ಷರೇ, ನಾನು ಈಗ ಆಹಾರದ ಒಂದು ವಿಷಯದಲ್ಲಿ ಮಾತ್ರ ಮಾತನಾಡುತ್ತೇನೆ. ಆದರಲ್ಲೂ ಬೆಂಗಳೂರು ನಗರದಲ್ಲಿ ಈ ಆಹಾರ ಹಂಚಿಕೆ ವಿಷಯದಲ್ಲಿ ಬಹಳ ತೊಂದರೆಗಳಾಗುತ್ತಿವೆ. ಒಂದೊಂದು ಕಾರ್ಡಿಗೆ ಒಂದೊಂದು ರೀತಿಯಲ್ಲಿ ಅಕ್ಕಿಯನ್ನು ಕೊಡುತ್ತಿದ್ದಾರೆ. ಒಂದೊಂದು ಕಾಲದಲ್ಲಿ ಸರ್ಕಾರದವರು ಡಿಪೋಗಳಿಗೆ ಕೊಡುವ ಅಕ್ಕಿಯ ವಿತರಣೆ ಹೇಗಿದೆಯೆಂದರೆ ಒಂದು ವೇಳೆ ಬಾಯರ್ಡ್ ರೈಸ್ ಕೊಡುತ್ತಾರೆ, ಮತ್ತೊಂದು ವೇಳೆ ರಾರೈಸ್ ಕೊಡುತ್ತಾರೆ. ಈ ತರಹ ಎಷ್ಟೋ ಸಾರಿ ಎಷ್ಟೋ ಕಡೆಗಳಲ್ಲಿ ನಡೆದಿದೆ. ಈ ವಿಚಾರದಲ್ಲಿ ಜನರ ಅನೇಕ ಕುಂದುಕೊರತೆಗಳನ್ನು ನಾನು ಸಂಬಂಧಪಟ್ಟ ಮಂತ್ರಿಗಳಲ್ಲಿ ಹೇಳಿದ್ದೇನೆ. ಸುಮಾರು 8 ದಿನಗಳ ಮುಂಚೆ ಒಬೊಬ್ಬ ಹೋಲ್‌ಸೇಲ್ ಡೀಲರ್ ಅಂಗಡಿಗಳ ಮುಂದೆ ಒಂದೆರಡು ರಾರಿ ಗಳಷ್ಟು ಅಕ್ಕಿಯನ್ನು ಹಂಚತಕ್ಕ ಪರಿಸ್ಥಿತಿ ಬಂದಿತ್ತು. ಅಲ್ಲಿ ಸುಮಾರು ಒಂದೆರಡು ಕ್ವಿಂಟಾರ್ ವರೆಗೂ ಅಕ್ಕಿಯನ್ನು ನರಬರಾಜು ಮಾಡಬೇಕಾಗಿ ಬಂತು. ಕೆಲವು ಭಾಗಗಳಲ್ಲಿರತಕ್ಕ ಹೋಲ್‌ಸೇಲ್ ಡೀಲರ್ಸ್‌ಗೆ ಆ ರೀತಿ ಕೊಟ್ಟಿಲ್ಲ. ಹೀಗಾಗಿ ಹಂಚಿಕೆ ವಿಚಾರದಲ್ಲಿ ಜನರಿಗೆ ತುಂಬಾ ತೊಂದರೆಯಾಗಿದೆ. ಅದನ್ನು ಸರ್ಕಾರದವರು ಕೂಡಲೇ ನರಿಪಡಿಸಬೇಕೆಂದು ನಾನು ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಕೆಲವು ಕಡೆಗಳಲ್ಲಿ ಏನಾಗುತ್ತದೆಂದರೆ, ಹೋಲ್‌ಸೇಲ್ ಡೀಲರ್ಸ್ ಅಂಗಡಿಗಳ ಮುಂದೆ ರಾರಿಗಳನ್ನು ತೆಗೆದುಕೊಂಡು ಹೋದರೆ, ಬೆಳಿಗ್ಗೆಯಿಂದ ಸಂಜೆಯವರೆಗೂ ಆ ರಾರಿಗಳನ್ನು ನಿಲ್ಲಿಸಿ ಕೊಂಡಿದ್ದು ಅವರಿಗೆ ನಾಳೆ ಬನ್ನಿ ಎಂದು ಹೇಳುತ್ತಿದ್ದಾರೆಂಬ ದೂರುಗಳು ಇತ್ತೀಚೆಗೆ ಬೇಕಾದಷ್ಟು ಇವೆ. ಈ ರೀತಿಯಾಗಿ ಹಂಚಿಕೆ ವ್ಯವಸ್ಥೆ ಅಷ್ಟು ಸಮರ್ಪಕವಾಗಿಲ್ಲ. ಇದರ ವಿಚಾರದಲ್ಲಿ ಡಿಪೋಗಳ ವರೆಗೂ ಮತ್ತು ಹೋಲ್‌ಸೇಲ್ ಡೀಲರ್ಸಿಗೂ ಹಾಗೂ ಜನತೆಗೂ ಅನುಕೂಲವಾಗುವಂತೆ ಸರ್ಕಾರ ದವರು ಏರ್ಪಾಡು ಮಾಡಬೇಕು ಎಂಬುದಾಗಿ ಹೇಳಿ ನನಗೆ ಅಧ್ಯಕ್ಷರು ಒಂದೆರಡು ಮಾತುಗಳನ್ನು ಹೇಳಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಮುನಿಚಿನ್ನಪ್ಪ (ಬೆಂಗಳೂರು ದಕ್ಷಿಣ).—ಅಧ್ಯಕ್ಷರೇ, ಈ ಆಹಾರ ವಿಷಯದಲ್ಲಿ ಈ ಸಭೆಯಲ್ಲಿ ನನ್ನ ಮಾನ್ಯ ಸ್ನೇಹಿತರನೇಕರು ಒಳ್ಳೆಯ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇದನ್ನು ನಾನು ಸಮರ್ಥನೆಮಾಡುತ್ತಾ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಮೊಟ್ಟಮೊದಲನೆಯದಾಗಿ ನನ್ನ ತಾಲ್ಲೂಕಿನ ವಿಚಾರವಾಗಿ ಇಲ್ಲಿ ಹೇಳುತ್ತೇನೆ. ನನ್ನ ತಾಲ್ಲೂಕಿನ ಸುತ್ತಮುತ್ತಲಿರುವ ಜಮೀನುಗಳಲ್ಲಿ ಒಳ್ಳೆಯ ಬೆಳೆಯನ್ನು ಬೆಳೆದು ಅನೇಕ ಆಹಾರ ಪದಾರ್ಥಗಳನ್ನು ರೈತರು ಒದಗಿಸುತ್ತಿದ್ದರು. ಆದಕ್ಕಾಗಿ ಬೆಂಗಳೂರಿನಲ್ಲಿ ಒಳ್ಳೆಯ ಗೊಬ್ಬರ ಸಿಗುತ್ತಿತ್ತು. ರೈತರೂ ಸಹ ಬಹಳ ಮುತುವರ್ಜಿ ವಹಿಸಿ ಕೆಲಸಮಾಡುತ್ತಿದ್ದರು. ಅಂತಹ ಜಮೀನುಗಳೆಲ್ಲಾ ಈಗ ಅಲ್ಲಿ ಇಲ್ಲವೇ ಇಲ್ಲ. ಸಿಟಿ ಇಂಪ್ರೂಮೆಂಟ್ ಟ್ರಸ್ಟ್ ಬೇರ್ಡಿನವರು ಸುಮಾರು 7 ಮೈಲುಗಳವರೆಗೆ ಇರತಕ್ಕ ಎಲ್ಲಾ ಜಮೀನುಗಳನ್ನೂ ಅವರ ಸ್ವಾಧೀನಕ್ಕೆ ತೆಗೆದುಕೊಂಡಿದ್ದಾರೆ. ಅಲ್ಲದೆ H.A.L., I.T.I., N.G.E.F. ಇನ್ನೂ ಇತರ ಕಾರ್ಖಾನೆಗಳು ಬೆಂಗಳೂರು ಸುತ್ತಮುತ್ತಲು ವಿಪರೀತವಾಗಿ ಆಗಿವೆ. ಕಾರ್ಖಾನೆಯವರು ಜಮೀನು ತೆಗೆದುಕೊಂಡು ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡುವುದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ಅಲ್ಲಿರತಕ್ಕ ರೈತರಿಗೆ ಜಮೀನು ಸ್ವಲ್ಪವಾದರೂ ಉಳಿದಿಲ್ಲ ಎನ್ನುವುದು ಒಂದೇ ನಮ್ಮ ಅಂತಕ ಮತ್ತೇನೂ ಇಲ್ಲ. ಅವರು ಇದರಿಂದಾಗಿ ಹಡಬೆರದ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಸರ್ಕಾರದವರು ಈಗ ಒಂದು ತಿಂಗಳಿಗೆ ತಲಾ ಒಂದಕ್ಕೆ 2 ಅಥವಾ 3 ಕೆ. ಜಿ. ಆಹಾರಧಾನ್ಯವನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಸಾಮಾನ್ಯವಾಗಿ ಒಬ್ಬೊಬ್ಬ ರೈತನ ಮನೆಯಲ್ಲಿ ಸುಮಾರು 15-20-30 ಜನರು ಇರುತ್ತಾರೆ. ಅಷ್ಟು ಜನರು ಅಷ್ಟು ಕಡಮೆ ಧಾನ್ಯದಿಂದ ಯಾವರೀತಿಯಲ್ಲಿ ಜೀವನ ಮಾಡಬೇಕು ? ಜಮೀನು ಇದ್ದರೆ ಅದರಿಂದಾದರೂ ಜೀವನಮಾಡುತ್ತಿದ್ದರು, ಈಗ ಜಮೀನೆಲ್ಲಾ ಹೋಯಿತು ಎಂದು ಹೇಳು ತ್ತಿದ್ದಾರೆ ಯಾವ ಇಲಾಖೆಯಲ್ಲಿಯೂ ಅವರಿಗೆ ಸರಿಯಾಗಿ ಕೆಲಸಗಳಾದರೂ ಸಿಗುವುದಿಲ್ಲ. ಬೇರೆ ಯವರಿಗೆ, ಹೊರ ಪ್ರಾಂತಗಳಿಂದ ಬಂದಿರುವವರಿಗೆ ಕೆಲಸಗಳನ್ನು ಇವರು ಕೊಡುತ್ತಿದ್ದಾರೆ. ಈ ವಿಚಾರವನ್ನು ನಾನು ನಾರ್ಕೈದು ವರ್ಷಗಳಿಂದಲೂ ಹೇಳುತ್ತಿದ್ದೇನೆ. ಸರ್ಕಾರದವರು ಸ್ವಲ್ಪವೂ

ಅದನ್ನು ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ ನಮಗೆ ಈ ಮಾನ್ಯ ಸಭೆಯ ಸದಸ್ಯರು ಎನ್ನುವ ಬಗ್ಗೆ ಸರ್ಕಾರಕ್ಕೆ ಸ್ವಲ್ಪವೂ ಮರ್ಯಾದೆ ಇಲ್ಲ ನುಮಾರು 3—4 ವರ್ಷಗಳಿಂದಲೂ ಈ ವಿಚಾರದಲ್ಲಿ ಅನೇಕ ಪ್ರಶ್ನೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ. ಇದುವರೆಗೂ ಅವಕ್ಕೆ ಉತ್ತರ ಬಂದಿಲ್ಲ. ಇದನ್ನು ದಯವಿಟ್ಟು ಅಧ್ಯಕ್ಷರಾದ ತಾವು ಸರ್ಕಾರದವರಲ್ಲಿ ವಿಚಾರಮಾಡಬೇಕು. ಬೆಂಗಳೂರಿನಲ್ಲಿ ಏನೋ ಅಕ್ಕಿ ಸ್ವಲ್ಪ ಕೊಡುತ್ತಿದ್ದಾರೆ. ಹೇಗೋ ಜನರು ಜೀವನಮಾಡುತ್ತಿದ್ದಾರೆ. ಮುಕ್ಕಾಲುಭಾಗ ಸಾಹುಕಾರರು ಇರುತ್ತಾರೆ, ಕಾಲುಭಾಗ ಬಡವರು ಇರುತ್ತಾರೆ. ಆದರೆ ಹಳ್ಳಿಗಳಲ್ಲಿ ಶೇಕಡ 5ರಷ್ಟು ಶ್ರೀಮಂತರಿರುತ್ತಾರೆ, ಇನ್ನುಳಿದವರೆಲ್ಲರೂ ಬಡವರು ಇರುತ್ತಾರೆ. ಅಲ್ಲಿ ಸಾಕಷ್ಟು ಆಹಾರಧಾನ್ಯಗಳನ್ನು ದೊರಕಿಸಿ ಕೊಡದೆ ಹೋದರೆ ಅಲ್ಲಿನ ಜನ ಯಾವರೀತಿಯ ಲ್ಲಿ ಜೀವನ ಮಾಡ ಬೇಕು ! ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಆಹಾರವನ್ನು ಹೆಚ್ಚಿಗೆ ಕೊಡುತ್ತೇವೆಂದು ಬೇರೆ ಹೇಳಿದರು. ಅದೂ ಕೂಡ ಸರಿಯಾಗಿ ಸಿಗುತ್ತಾ ಇಲ್ಲ. ನಾವು ಒಂದು ಕಮಿಟಿಮಾಡಿ ಅದರಲ್ಲಿ ಹೇಳಿದಹಾಗೆ ಕೇಳಿ ಅಂದರೆ ಕೇವಲ ಇಬ್ಬರು ಮೂವರು ಸದಸ್ಯರು ಇರತಕ್ಕ ಕಮಿಟಿ, ಅದನ್ನು ಸರ್ಕಾರ ಮಾಡಿದ ಕಮಿಟಿಯಲ್ಲ, ನಾವು ಹೇಳುವ ಹಾಗೆ ಕೇಳಬೇಕಾಗಿಲ್ಲ, ಅಫಿಷಿಯರ್ ಕಮಿಟಿ ಬೇರೊಂದಿದೆ ಎಂದು ಕೆಲವು ಅಧಿಕಾರಿಗಳು ಹೇಳುತ್ತಾರೆ, ನಮ್ಮ ಮಾತಿನ ಮೇಲೆ ಕೆಲವು ಅಧಿಕಾರಿಗಳೇ ಇಷ್ಟು ಅನಾದರಣೆಮಾಡುತ್ತಾರೆ. ನಾನು ಒಂದು ಅಕ್ಷರವನ್ನೂ ತಪ್ಪು ಹೇಳುವುದಿಲ್ಲ, ಎಲ್ಲಾ ಅಂಶಗಳನ್ನೂ ನಿಜವಾಗಿ ಹೇಳುತ್ತೇನೆ. ಆದ್ದರಿಂದ ಬೆಂಗಳೂರು ದಕ್ಷಿಣದ ಕಡೆ ಹೋಗಿ ಆಲ್ಲರತಕ್ಕ ಬೆರ್ಟ್ ಏರಿಯಾದಲ್ಲಿ ವಾಸಮಾಡುತ್ತಿರತಕ್ಕ ಜನರಿಗೆ ಈ ಆಹಾರದ ವಿಷಯದಲ್ಲಿ ಹೆಚ್ಚಿನ ಸಹಾಯಮಾಡಬೇಕೆಂದು ನಾನು ಬಹಳ ವಿನಯದಿಂದ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ನನ್ನ ತಾಲ್ಲೂಕಿನಲ್ಲಿ ಬೇರೆ ನೀರಾವರಿಗೆ ಯಾವುದೂ ನದಿಗಳಿಲ್ಲ, ಅಣೆಕಟ್ಟುಗಳಿಲ್ಲ, ಬಾವಿಗಳಾದರೂ ಹೆಚ್ಚಾಗಿದ್ದರೆ ಏನಾದರೂ ರೈತರಿಗೆ ಅನುಕೂಲವಾಗುತ್ತಿತ್ತು. 20 ಬಾವಿ ಗಳನ್ನು ತೆಗೆಸಲಿಕ್ಕೆ ದುಡ್ಡು ಸಹಾಯಮಾಡುತ್ತೇವೆಂದು ಹಿಂದೆ ಹೇಳಿದ್ದರು. ಸರ್ಕಾರಿ ಆರ್ಡರ್ ಕೂಡ ಆಗಿತ್ತು. ಈಗ 200—300 ರೂಪಾಯಿಗಳನ್ನು ಖರ್ಚುಮಾಡಿ ಬಾವಿಗಳನ್ನು ತೆಗೆಸಲಿಕ್ಕೆ ಪ್ರಯತ್ನಪಟ್ಟರೆ ಸರ್ಕಾರದವರು ಅದಕ್ಕೆ ದುಡ್ಡು ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಅಧಿಕಾರಿಗಳ ಜೊತೆಯಲ್ಲಿ ಇವರು ಟೂರ್ ಮಾಡಿದಮೇಲೆ ಕೇವಲ 20 ಬಾವಿಗಳನ್ನಾದರೂ ಖಂಡಿತ ವಾಗಿ ಕೊಡುತ್ತೇವೆಂದು ಈಗ ಹೇಳಿದ್ದಾರೆ. ಇದನ್ನು ಯಾರಿಗೆ ಕೊಡುವುದು ? ಆದ್ದರಿಂದ ಈ ವಿಚಾರದಲ್ಲಿ ಸರಿಯಾದ ಗಮನವನ್ನು ಕೊಟ್ಟು ರೈತರಿಗೆ ಹೆಚ್ಚು ಸಹಾಯವಾಡುವಂತೆ ಅವರನ್ನು ಕೇಳಿಕೊಳ್ಳುತ್ತೇನೆ. ಇನ್ನು ರಿಲೀಫ್ ಕಾಮಗಾರಿಗಳು ಸರಿಯಾಗಿ ನಡೆಯದೆ ಆಹಾರ ಬೆಳೆಯುವು ದರಲ್ಲಿ ಅರ್ಧಂಬರ್ಧವಾಗಿದೆ. ಅಧಿಕಾರಿಗಳಿಗೂ ಮಂತ್ರಿಗಳಿಗೂ ಈ ಬಾಬಿಗೆ ಕೊಟ್ಟ ದುಡ್ಡು ಖರ್ಚಾಗದೆ ಹೇಗೆ ಉಳಿದಿದೆಯೆಂಬುದು ಗೊತ್ತಿದೆ. ಅಂಕಅಂಶಗಳನ್ನು ತರಿಸಿ ನೋಡಲಿ. ದೇಶಕ್ಕೇ ಕಷ್ಟಬಂದಿರುವಾಗ ನಾನು ಹೆಚ್ಚಿಗೆ ಹೇಳುವುದಿಲ್ಲ. ಸರ್ಕಾರದವರು ರೈತರಿಗೆ ಹೆಚ್ಚು ಅನುಕೂಲವಾಗುವಂತೆ ಸಹಾಯಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸಭಾಧ್ಯಕ್ಷರೇ ಆಹಾರದ ವಿಷಯವಾಗಿ ಅನೇಕ ಮಾನ್ಯ ಸದಸ್ಯರು ಉಪಯುಕ್ತವಾದ ಸಲಹೆಗಳನ್ನು ನೀಡಿದ್ದಾರೆ ಹಾಗೂ ಕೆಲವು ದೋಷಗಳನ್ನೂ ಕೂಡ ತೋರಿಸಿ ಕೊಟ್ಟಿದ್ದಾರೆ. ಈ ಆಹಾರ ಸಮಸ್ಯೆ ಬಗ್ಗೆ ನಾನು ಉತ್ತರ ಕೊಡುವ ಕಾಲಕ್ಕೆ ಆಹಾರೋತ್ಪಾದನೆ, ಆಹಾರ ಸಂಗ್ರಹಣೆ ಮತ್ತು ಆಹಾರ ವಿತರಣೆ— ಈ ಮೂರು ವಿಷಯಗಳನ್ನು ಬೇರೆ ಬೇರೆ ಮಾಡಿ ಮಾತನಾಡಲಿಕ್ಕೆ ಯೋಚನೆ ಮಾಡಿದ್ದೇನೆ. ಯಾರಾದರೂ ಈ ಒಂದೇ ವರ್ಷಕ್ಕೆ ಇಷ್ಟು ಆಹಾರ ತೊಂದರೆಯಾಗಿದೆಯೆಂದು ತಿಳಿದುಕೊಂಡಿದ್ದರೆ ಅದು ತಪ್ಪು. ಈ ಒಂದು ವರ್ಷದೊಳಗೆ ಜನರಿಗೆ ಬೇಕಾದಷ್ಟು ಆಹಾರೋತ್ಪಾದನೆ ಮಾಡುತ್ತೇವೆಂದು ತಿಳಿದುಕೊಂಡು ಯಾವ ಸರ್ಕಾರಕ್ಕೂ ಹೇಳ ಲಿಕ್ಕೆ ಆಗುವುದಿಲ್ಲ, ಅದು ಸಾಧ್ಯವೂ ಇಲ್ಲ. ಈ ಪರಿಸ್ಥಿತಿ ನಮ್ಮ ದೇಶಕ್ಕೇ ಬಂದಿದೆಯೆಂದು ತಿಳಿದು ಕೇಂದ್ರ ಸರ್ಕಾರ ಮತ್ತು ಪ್ರಾಂತ ಸರ್ಕಾರದವರು ಇಂದಿನ ಪರಿಸ್ಥಿತಿಯನ್ನು ನೋಡಿ ಯಾವ್ಯಾವ ಕ್ರಮಗಳನ್ನು ಈ ವಿಚಾರದಲ್ಲಿ ತೆಗೆದುಕೊಳ್ಳಬೇಕೋ ಆ ರೀತಿಯಲ್ಲಿ ಎಲ್ಲಾ ಕ್ರಮಗಳನ್ನು ಇದುವರೆಗೆ ತೆಗೆದುಕೊಂಡಿದ್ದಾರೆ.

ಆ ಕಾರ್ಯಕ್ರಮಕ್ಕೆ ಅನುಸಾರವಾಗಿ ಪ್ರತಿಫಲಬರಬೇಕಾದರೆ ಕೆಲವು ಕಾಲ ಬೇಕು. ಹೊಸ ಹೊಸ ಬಾವಿಗಳನ್ನು ತೆಗೆಯುವುದಕ್ಕೆ ಹಣದ ವಿತರ್ಾಡನ್ನು ಸರ್ಕಾರದವರು ಮಾಡಿದ್ದಾರೆ. ಸಾಧ್ಯ ವಾದಷ್ಟು ಬೇಗ ರೈತರಿಗೆ ಹಣ ಸಿಕ್ಕಿ ಬೇಗ ನೀರಾವರಿ ಯೋಜನೆಗಳು ಆಗಿ ರೈತರಿಗೆ ಅನುಕೂಲ ವಾಗಲಿ ಎನ್ನುವ ದೃಷ್ಟಿಯಿಂದ ಅದರ ಬಗ್ಗೆ ಅನೇಕ ತಿದ್ದುಪಡಿಗಳನ್ನು ಮಾಡಿದ್ದಾರೆ. ಮತ್ತು ಇದ್ದ ಬಾವಿಗಳನ್ನು ಆಳ ಮಾಡುವ ಬಗ್ಗೆಯೂ ಸರ್ಕಾರದವರು ಹಣವನ್ನು ಒದಗಿಸಿದ್ದಾರೆ. ಚಿಕ್ಕ ಚಿಕ್ಕ

(ಶ್ರೀ ಬಿ. ಡಿ. ಜತ್ತಿ)

ಮಾರಾಟ ಮಾಡುತ್ತಿದ್ದಾರೆ. ನಮಗೆ ಹೊರಗಿನಿಂದ ಅಕ್ಕಿ ನುಮಾರು ಎಂಟು ಸಾವಿರ ಟನ್ನು ಗಳಷ್ಟು ಹೆಚ್ಚಾಗಿ ಬರಲು ಪ್ರಯತ್ನ ಮಾಡುತ್ತಿದ್ದೇವೆ. ಅಕ್ಕಿಯ ಪರಿಸ್ಥಿತಿ ಸರಿಯಿಲ್ಲ ಎಂದು ಅಕ್ಕಿಯ ಉಪಯೋಗವನ್ನು ಬಹಳ ಎಚ್ಚರಿಕೆಯಿಂದ ತೊಂದರೆಯಾಗದಂತೆ ಬಳಕೆದಾರರು ನಾವೇನು ಅಕ್ಕಿ ಹಂಚುತ್ತಿದ್ದೇವೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಬೇಕೆಂದು ಒತ್ತಿ ಒತ್ತಿ ಹೇಳುತ್ತ ಬರುತ್ತಿದ್ದೇವೆ. ಹಳ್ಳಿಗಾಡಿನ ಜನಕ್ಕೆ ಅಕ್ಕಿ ಹಂಚಿಕೆ ಮಾಡಿಲ್ಲ ಎಂದರು. ನಮಗೆ ಹಳ್ಳಿ ಗಳಿಗೆ ಅಕ್ಕಿಯನ್ನು ಹಂಚಲಕ್ಕೆ ಆಗಲಲ್ಲ. ಅವರಿಗೆ ಉಪಯೋಗ ಮಾಡಲಕ್ಕೆ ಕೊಡಲು ನಮಗೆ ಹೆಚ್ಚಾಗಿ ಅಕ್ಕಿ ಬರಲಿಲ್ಲ. ನಮ್ಮಲ್ಲಿರುವ ಅಕ್ಕಿಯನ್ನು ಪ್ರತಿಯೊಂದು ಜಿಲ್ಲೆಗೆ ಇಂತಿಷ್ಟು ಎಂದು ಆಹಾರ ಧಾನ್ಯಗಳನ್ನು ಕೊಡಬೇಕಾಗಿದೆ. ಆಸ್ಪತ್ರೆಗಳಲ್ಲಿ ರೋಗಿಗಳಿಗಾಗಿ ಅಕ್ಕಿ ಕೊಡಬೇಕಾಗಿ ಬರುತ್ತದೆ. ಮತ್ತು ಹಾಸ್ಟಲ್ಲುಗಳಲ್ಲಿರುವ ಚಿಕ್ಕ ಮಕ್ಕಳಿಗಾಗಿ ಕೊಡಬೇಕು. ಇನ್ನೂ ಕೆಲವು ಕಡೆ ಗಳಲ್ಲಿ ಅವಶ್ಯಕವೆಂದು ಕಂಡುಬಂದ ಕಡೆಗಳಲ್ಲಿ ಅಕ್ಕಿ ಕೊಡಬೇಕಾಗಿ ಬರುತ್ತದೆ. ಎಲ್ಲಿ ಅಕ್ಕಿಯನ್ನು ಬೆಳೆಯುತ್ತಿದ್ದಾರೋ ಆ ಪ್ರದೇಶಗಳಲ್ಲಿ ರೆವೆ ರೂಪದಲ್ಲಿ ಬತ್ತ ಕೊಟ್ಟು ಉಳಿಕೆಯಾದುದನ್ನು ಅವರೇ ಇಟ್ಟುಕೊಳ್ಳಲು ಅಥವಾ ಮಾರಲು ಅವಕಾಶಕೊಡರಾಗಿದೆ. ಆದರಿಂದ ಹಳ್ಳಿಗಳಲ್ಲಿ ನಾವು ಅಕ್ಕಿ ಯನ್ನು ಹೆಚ್ಚಾಗಿ ಕೊಡಲಕ್ಕೆ ಇದುವರೆಗೂ ಸಾಧ್ಯವಾಗಲಲ್ಲ ಮತ್ತು ಮುಂದೂ ಕೊಡಲು ಸಾಧ್ಯ ಎಂದು ನನಗೇನೂ ಕಾಣಿಸುತ್ತಿಲ್ಲ. ಮೈಸೂರು ದೇಶಕ್ಕೆ ಪರದೇಶಗಳಿಂದ ಅಕ್ಕಿಯನ್ನು ಹೆಚ್ಚು ತರಿ ಸುವ ಪ್ರಯತ್ನ ಮಾಡುತ್ತಿದ್ದೇವೆ. ಮದರಾಸು ಹಾಗೂ ಆಂಧ್ರ ಸರಕಾರವನ್ನೂ ಅಕ್ಕಿ ಕೊಡ ಬೇಕೆಂದು ಕೇಳಿದ್ದೇವೆ. ಕೇಂದ್ರ ಸರಕಾರದವರನ್ನೂ ಸಹಾಯ ಮಾಡಬೇಕೆಂದು ಕೇಳಿದ್ದೇವೆ. ಇವರುಗಳಿಂದ ಅಕ್ಕಿ ಬಂದರೆ ಆಗ ಅದನ್ನು ಹಂಚುವುದಕ್ಕೆ ಸಾಧ್ಯ ಎಂದು ಇಲ್ಲಿನಾನು ತಮಗೆ ಹೇಳುತ್ತೇನೆ.

ಇನ್ನೊಂದು ಪ್ರಶ್ನೆ ಇಲ್ಲ ಕೇಳಿದರು. ಜಿಲ್ಲೆಗಳಿಗೆ ಆಹಾರಧಾನ್ಯವನ್ನು ಹೇಗೆ ನೀವು ಹಂಚು ತ್ತೀರಿ ಎಂದು ಕೇಳಿದರು. ಎಲ್ಲೆಲ್ಲಿ ಯಾವ ಯಾವ ತಿಂಗಳುಗಳಿಗೆ ಎಷ್ಟು ಹಂಚುತ್ತೀವೆ ಎನ್ನುವು ದನ್ನು ಈಗಾಗಲೇ ಒಮ್ಮೆ ಹೇಳಿದ್ದೇನೆ. ಅದನ್ನೇ ಮತ್ತೊಮ್ಮೆ ಈಗ ಇಲ್ಲಿ ಹೇಳುತ್ತೇನೆ.

ಜನವರಿ ತಿಂಗಳಲ್ಲಿ 21 ಜಿಲ್ಲೆಗಳಿಗಾಗಿ

ಅಕ್ಕಿ ಕೊಟ್ಟುದ್ದು	9,387 ಟನ್ನುಗಳು
ಗೋಧಿ	11,332 ಟನ್ನುಗಳು
ಇತರ ಆಹಾರಧಾನ್ಯಗಳು	4,115 ಟನ್ನುಗಳು

ಇದರಲ್ಲಿ ಬೆಂಗಳೂರು ರೂರಲ್ ಜಿಲ್ಲೆಯ ಬಗ್ಗೆ ನಮ್ಮ ಸ್ನೇಹಿತರು ನಮ್ಮ ಜಿಲ್ಲೆ ಬಗ್ಗೆ ಕಡೆಗಾಣಿಸಿದರು ಎಂದು ಹೇಳುವುದು ಸರಿಯಲ್ಲ. ಅವರ ಜಿಲ್ಲೆಗೂ ಕೊಡರಾಗಿದೆ ಮತ್ತು ಮುಂದೆ ಇನ್ನೂ ಹೆಚ್ಚು ಕೊಟ್ಟಿರುವುದನ್ನೂ ಇಲ್ಲಿ ಅವರಿಗೆ ತಿಳಿಸುತ್ತೇನೆ. ಈಗ ಬರೀ ಬೆಂಗಳೂರು ರೂರಲ್ ಜಿಲ್ಲೆಗಾಗಿ ಕೊಟ್ಟಿರುವುದನ್ನು ಹೇಳುತ್ತೇನೆ.

ಜನವರಿಯಲ್ಲಿ ಅಕ್ಕಿ	100 ಟನ್ನುಗಳು
ಗೋಧಿ	200 ಟನ್ನುಗಳು
ಇತರ ಆಹಾರಧಾನ್ಯಗಳು	440 ಟನ್ನುಗಳು

ಎಂದರೆ ಒಟ್ಟು 750 ಟನ್ನುಗಳಷ್ಟು ಬೆಂಗಳೂರು ರೂರಲ್ ಜಿಲ್ಲೆಗೇನೇ ಕೊಡರಾಗಿದೆ. ಇದರಿಂದ ಬೇರೆ ಜಿಲ್ಲೆಗಳಿಗೆ ಹೆಚ್ಚು ಕೊಟ್ಟಂತೆ ಮುಂದೆ ಈ ಜಿಲ್ಲೆಗೂ ಕೊಡರಾಗಿದೆ. ಅದನ್ನೂ ತಮಗೆ ಕೊಡು ತ್ತೇನೆ.

ಫೆಬ್ರುವರಿ ತಿಂಗಳಲ್ಲಿ ಎಲ್ಲ 21 ಜಿಲ್ಲೆಗಳಿಗೂ ಆಹಾರ ಧಾನ್ಯಗಳನ್ನು ಕೊಟ್ಟಿರುವುದು ಹೀಗಿದೆ.

ಅಕ್ಕಿ	9,162 ಟನ್ನುಗಳು
ಗೋಧಿ	16,762 ಟನ್ನುಗಳು
ಇತರ ಆಹಾರಧಾನ್ಯಗಳು	8,766 ಟನ್ನುಗಳು
ಹೀಗೆ ಒಟ್ಟಿಗೆ ಕೊಟ್ಟಿರುವುದು	24,690 ಟನ್ನುಗಳು

ಅದನ್ನು ಮನಸ್ಸಿಗೆ ತೆಗೆದುಕೊಳ್ಳುವುದಿಲ್ಲ ನಮಗೆ ಈ ಮಾನ್ಯ ಸಭೆಯ ಸದಸ್ಯರು ಎನ್ನುವ ಬಗ್ಗೆ ಸರ್ಕಾರಕ್ಕೆ ಸ್ವಲ್ಪವೂ ಮರ್ಯಾದೆ ಇಲ್ಲ ಸುಮಾರು 3—4 ವರ್ಷಗಳಿಂದಲೂ ಈ ವಿಚಾರದಲ್ಲಿ ಅನೇಕ ಪ್ರಶ್ನೆಗಳನ್ನು ಸರ್ಕಾರಕ್ಕೆ ಕೊಟ್ಟಿದ್ದೇನೆ. ಇದುವರೆಗೂ ಅವಕ್ಕೆ ಉತ್ತರ ಬಂದಿಲ್ಲ. ಇದನ್ನು ದಯವಿಟ್ಟು ಅಧ್ಯಕ್ಷರಾದ ತಾವು ಸರ್ಕಾರದವರಲ್ಲಿ ವಿಚಾರಮಾಡಬೇಕು. ಬೆಂಗಳೂರಿನಲ್ಲಿ ಏನೋ ಅಕ್ಕಿ ಸ್ವಲ್ಪ ಕೊಡುತ್ತಿದ್ದಾರೆ. ಹೇಗೋ ಜನರು ಜೀವನಮಾಡುತ್ತಿದ್ದಾರೆ. ಮುಕ್ಕಾಲುಭಾಗ ಸಾಹುಕಾರರು ಇರುತ್ತಾರೆ, ಕಾಲುಭಾಗ ಬಡವರು ಇರುತ್ತಾರೆ. ಆದರೆ ಹಳ್ಳಿಗಳಲ್ಲಿ ಶೇಕಡ ೧೦ರಷ್ಟು ಶ್ರೀಮಂತರಿರುತ್ತಾರೆ, ಇನ್ನುಳಿದವರೆಲ್ಲರೂ ಬಡವರು ಇರುತ್ತಾರೆ. ಅಲ್ಲಿ ಸಾಕಷ್ಟು ಆಹಾರಧಾನ್ಯಗಳನ್ನು ದೊರಕಿಸಿ ಕೊಡದೆ ಹೋದರೆ ಅಲ್ಲಿನ ಜನ ಯಾವರೀತಿಯ ಲ್ಲಿ ಜೀವನ ಮಾಡಬೇಕು ? ಈ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಗಮನ ಕೊಡಬೇಕು. ಆಹಾರವನ್ನು ಹೆಚ್ಚಿಗೆ ಕೊಡುತ್ತೇವೆಂದು ಬೇರೆ ಹೇಳಿದರು. ಅದೂ ಕೂಡ ಸರಿಯಾಗಿ ಸಿಗುತ್ತಾ ಇಲ್ಲ. ನಾವು ಒಂದು ಕಮಿಟಿಮಾಡಿ ಅದರಲ್ಲಿ ಹೇಳಿದಹಾಗೆ ಕೇಳಿ ಅಂದರೆ ಕೇವಲ ಇಬ್ಬರು ಮೂವರು ಸದಸ್ಯರು ಇರತಕ್ಕ ಕಮಿಟಿ, ಅದನ್ನು ಸರ್ಕಾರ ಮಾಡಿದ ಕಮಿಟಿಯಲ್ಲ, ನಾವು ಹೇಳುವ ಹಾಗೆ ಕೇಳಬೇಕಾಗಿಲ್ಲ, ಅಫಿಷಿಯರ್ ಕಮಿಟಿ ಬೇರೊಂದಿದೆ ಎಂದು ಕೆಲವು ಅಧಿಕಾರಿಗಳು ಹೇಳುತ್ತಾರೆ, ನಮ್ಮ ಮಾತಿನ ಮೇಲೆ ಕೆಲವು ಅಧಿಕಾರಿಗಳೇ ಇಷ್ಟು ಅನಾದರಣೆಮಾಡುತ್ತಾರೆ. ನಾನು ಒಂದು ಅಕ್ಷರವನ್ನೂ ತಪ್ಪು ಹೇಳುವುದಿಲ್ಲ, ಎಲ್ಲಾ ಅಂಶಗಳನ್ನೂ ನಿಜವಾಗಿ ಹೇಳುತ್ತೇನೆ. ಆದ್ದರಿಂದ ಬೆಂಗಳೂರು ದಕ್ಷಿಣದ ಕಡೆ ಹೋಗಿ ಆಲ್ಲರತಕ್ಕ ಬೆರ್ಟ್ ಏರಿಯಾದಲ್ಲಿ ವಾಸಮಾಡುತ್ತಿರತಕ್ಕ ಜನರಿಗೆ ಈ ಆಹಾರದ ವಿಷಯದಲ್ಲಿ ಹೆಚ್ಚಿನ ಸಹಾಯಮಾಡಬೇಕೆಂದು ನಾನು ಬಹಳ ವಿನಯದಿಂದ ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ನನ್ನ ತಾಲ್ಲೂಕಿನಲ್ಲಿ ಬೇರೆ ನೀರಾವರಿಗೆ ಯಾವುದೂ ನದಿಗಳಿಲ್ಲ. ಅಣೆಕಟ್ಟುಗಳಿಲ್ಲ, ಬಾವಿಗಳಾದರೂ ಹೆಚ್ಚಾಗಿದ್ದರೆ ಏನಾದರೂ ರೈತರಿಗೆ ಅನುಕೂಲವಾಗುತ್ತಿತ್ತು. 20 ಬಾವಿಗಳನ್ನು ತೆಗೆಸಲಕ್ಕೆ ದುಡ್ಡು ಸಹಾಯಮಾಡುತ್ತೇವೆಂದು ಹಿಂದೆ ಹೇಳಿದ್ದರು. ಸರ್ಕಾರಿ ಆರ್ಡರ್ ಕೂಡ ಆಗಿತ್ತು. ಈಗ 200—300 ರೂಪಾಯಿಗಳನ್ನು ಖರ್ಚುಮಾಡಿ ಬಾವಿಗಳನ್ನು ತೆಗೆಸಲಕ್ಕೆ ಪ್ರಯತ್ನಪಟ್ಟರೆ ಸರ್ಕಾರದವರು ಅದಕ್ಕೆ ದುಡ್ಡು ಸಹಾಯ ಮಾಡುತ್ತೇವೆಂದು ಹೇಳಿದ್ದಾರೆ. ಅಧಿಕಾರಿಗಳ ಜೊತೆಯಲ್ಲಿ ಇವರು ಟೂರ್ ಮಾಡಿದಮೇಲೆ ಕೇವಲ 20 ಬಾವಿಗಳನ್ನಾದರೂ ಖಂಡಿತವಾಗಿ ಕೊಡುತ್ತೇವೆಂದು ಈಗ ಹೇಳಿದ್ದಾರೆ. ಇದನ್ನು ಯಾರಿಗೆ ಕೊಡುವುದು ? ಆದ್ದರಿಂದ ಈ ವಿಚಾರದಲ್ಲಿ ಸರಿಯಾದ ಗಮನವನ್ನು ಕೊಟ್ಟು ರೈತರಿಗೆ ಹೆಚ್ಚು ಸಹಾಯವಾಗುವಂತೆ ಅವರನ್ನು ಕೇಳಿಕೊಳ್ಳುತ್ತೇನೆ. ಇನ್ನು ರಿಲೀಫ್ ಕಾಮಗಾರಿಗಳು ಸರಿಯಾಗಿ ನಡೆಯದೆ ಆಹಾರ ಬೆಳೆಯುವುದರಲ್ಲಿ ಅರ್ಧಂಬರ್ಧವಾಗಿದೆ. ಅಧಿಕಾರಿಗಳಿಗೂ ಮಂತ್ರಿಗಳಿಗೂ ಈ ಬಾವಿಗೆ ಕೊಟ್ಟ ದುಡ್ಡು ಖರ್ಚಾಗದೆ ಹೇಗೆ ಉಳಿದಿದೆಯೆಂಬುದು ಗೊತ್ತಿದೆ. ಅಂಕಿಅಂಶಗಳನ್ನು ತರಿಸಿ ನೋಡಲಿ. ದೇಶಕ್ಕೇ ಕಷ್ಟಬಂದಿರುವಾಗ ನಾನು ಹೆಚ್ಚಿಗೆ ಹೇಳುವುದಿಲ್ಲ. ಸರ್ಕಾರದವರು ರೈತರಿಗೆ ಹೆಚ್ಚು ಅನುಕೂಲವಾಗುವಂತೆ ಸಹಾಯ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸಭಾಧ್ಯಕ್ಷರೇ ಆಹಾರದ ವಿಷಯವಾಗಿ ಅನೇಕ ಮಾನ್ಯ ಸದಸ್ಯರು ಉಪಯುಕ್ತವಾದ ಸಲಹೆಗಳನ್ನು ನೀಡಿದ್ದಾರೆ ಹಾಗೂ ಕೆಲವು ದೋಷಗಳನ್ನೂ ಕೂಡ ತೋರಿಸಿ ಕೊಟ್ಟಿದ್ದಾರೆ. ಈ ಆಹಾರ ಸಮಸ್ಯೆ ಬಗ್ಗೆ ನಾನು ಉತ್ತರ ಕೊಡುವ ಕಾಲಕ್ಕೆ ಆಹಾರೋತ್ಪಾದನೆ, ಆಹಾರ ಸಂಗ್ರಹಣೆ ಮತ್ತು ಆಹಾರ ವಿತರಣೆ— ಈ ಮೂರು ವಿಷಯಗಳನ್ನು ಬೇರೆ ಬೇರೆ ಮಾಡಿ ಮಾತನಾಡಲಕ್ಕೆ ಯೋಚನೆ ಮಾಡಿದ್ದೇನೆ. ಯಾರಾದರೂ ಈ ಒಂದೇ ವರ್ಷಕ್ಕೆ ಇಷ್ಟು ಆಹಾರ ತೊಂದರೆಯಾಗಿದೆಯೆಂದು ತಿಳಿದುಕೊಂಡಿದ್ದರೆ ಅದು ತಪ್ಪು. ಈ ಒಂದು ವರ್ಷದೊಳಗೆ ಜನರಿಗೆ ಬೇಕಾದಷ್ಟು ಆಹಾರೋತ್ಪಾದನೆ ಮಾಡುತ್ತೇವೆಂದು ತಿಳಿದುಕೊಂಡು ಯಾವ ಸರ್ಕಾರಕ್ಕೂ ಹೇಳಲಕ್ಕೆ ಆಗುವುದಿಲ್ಲ, ಅದು ಸಾಧ್ಯವೂ ಇಲ್ಲ. ಈ ಪರಿಸ್ಥಿತಿ ನಮ್ಮ ದೇಶಕ್ಕೇ ಬಂದಿದೆಯೆಂದು ತಿಳಿದು ಕೇಂದ್ರ ಸರ್ಕಾರ ಮತ್ತು ಪ್ರಾಂತ ಸರ್ಕಾರದವರು ಇಂದಿನ ಪರಿಸ್ಥಿತಿಯನ್ನು ನೋಡಿ ಯಾವ್ಯಾವ ಕ್ರಮಗಳನ್ನು ಈ ವಿಚಾರದಲ್ಲಿ ತೆಗೆದುಕೊಳ್ಳಬೇಕೋ ಆ ರೀತಿಯಲ್ಲಿ ಎಲ್ಲಾ ಕ್ರಮಗಳನ್ನು ಇದುವರೆಗೆ ತೆಗೆದುಕೊಂಡಿದ್ದಾರೆ.

ಆ ಕಾರ್ಯಕ್ರಮಕ್ಕೆ ಅನುಸಾರವಾಗಿ ಪ್ರತಿಫಲಬರಬೇಕಾದರೆ ಕೆಲವು ಕಾಲ ಬೇಕು. ಹೊಸ ಹೊಸ ಬಾವಿಗಳನ್ನು ತೆಗೆಯುವುದಕ್ಕೆ ಹಣದ ಏರ್ಪಾಡನ್ನು ಸರ್ಕಾರದವರು ಮಾಡಿದ್ದಾರೆ. ಸಾಧ್ಯವಾದಷ್ಟು ಬೇಗ ರೈತರಿಗೆ ಹಣ ಸಿಕ್ಕಿ ಬೇಗ ನೀರಾವರಿ ಯೋಜನೆಗಳು ಆಗಿ ರೈತರಿಗೆ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಅದರ ಬಗ್ಗೆ ಅನೇಕ ತಿದ್ದುಪಡಿಗಳನ್ನು ಮಾಡಿದ್ದಾರೆ. ಮತ್ತು ಇದ್ದ ಬಾವಿಗಳನ್ನು ಆಳ ಮಾಡುವ ಬಗ್ಗೆಯೂ ಸರ್ಕಾರದವರು ಹಣವನ್ನು ಒದಗಿಸಿದ್ದಾರೆ. ಚಿಕ್ಕ ಚಿಕ್ಕ

(ಶ್ರೀ ಬಿ. ಡಿ. ಜತ್ತಿ)

ನೀರಾವರಿ ಯೋಜನೆಗಳಿಗೆ ಹೆಚ್ಚು ಹಣವನ್ನು ಒದಗಿಸಿ ಅವುಗಳನ್ನು ಕಾರ್ಯಗತ ಮಾಡುವುದಾದರೆ ಅವುಗಳಿಂದ 2—3 ವರ್ಷಗಳಲ್ಲಿ ಪ್ರತಿಫಲ ಸಿಕ್ಕುತ್ತದೆ ಎಂದು ಸರ್ಕಾರಕ್ಕೆ ಗೊತ್ತಾಗಿದೆ. ಆ ಸೌಲಭ್ಯವನ್ನು ಪಡೆದುಕೊಳ್ಳಲು ಜನಗಳೂ ಸಹ ಮುಂದೆ ಬರುತ್ತಿದ್ದಾರೆ. ಇದರಿಂದ ಆಹಾರದ ಅಭಾವವನ್ನು ನೀಗಿಸುವುದಕ್ಕೆ ಸಾಧ್ಯವಾಗಬಹುದು ಎಂದು ಸರ್ಕಾರದವರು ಚಿಕ್ಕ ಚಿಕ್ಕ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಗಮನವನ್ನು ಕೊಟ್ಟಿದ್ದಾರೆ. ಈ ಯೋಜನೆಗಳಿಗೆ ಸಂಸ್ಥಾನ ಸರ್ಕಾರದವರು ಹಣವನ್ನು ಒದಗಿಸಿರುವುದರ ಜೊತೆಗೆ ಕೇಂದ್ರ ಸರ್ಕಾರದವರೂ ಸಹ ಸಾಕಷ್ಟು ಹಣವನ್ನು ಸಹಾಯ ಮಾಡಿದ್ದಾರೆ. ಆ ಪ್ರಕಾರ ಕೆಲಸ ನಡೆದಿದೆ. ಹೀಗೆ ಸರ್ಕಾರದವರು ಅವಕ್ಕಾಗಿ ಒದಗಿಸಿರುವ ಹಣ ಮತ್ತು ಕೇಂದ್ರ ಸರ್ಕಾರದವರು ಕೊಟ್ಟಿರುವ ಹಣ ಎಲ್ಲಾ ತಾಲ್ಲೂಕುಗಳಿಗೂ ಎಲ್ಲರಿಗೂ ಮುಟ್ಟುತ್ತದೆ. ಅದರ ಬಗ್ಗೆ ರೈತರಿಂದ ಬಂದಂತಹ ಅರ್ಜಿಗಳನ್ನು ಪರಿಶೀಲನೆ ಮಾಡಿ ಯಾವ ಅರ್ಜಿ ಸರಿಯಾಗಿದೆ ಎಂದು ಸರ್ಕಾರದವರಿಗೆ ಗೊತ್ತಾಗುತ್ತದೆಯೋ ಅಂಥವರಿಗೆಲ್ಲಾ ಸರ್ಕಾರದವರು ಹಣವನ್ನು ಮುಂಜೂರು ಮಾಡುತ್ತಿದ್ದಾರೆ. ಈ ಪ್ರಕಾರವಾಗಿ ಬಾವಿಗಳಿಗಾಗಿ ಹೆಚ್ಚು ಹೆಚ್ಚು ಹಣವನ್ನು ಕೊಡುವ ಏರ್ಪಾಡನ್ನು ಸರ್ಕಾರದವರು ಮಾಡುತ್ತಿದ್ದಾರೆ.

ಇನ್ನು ನಮ್ಮ ಪ್ರಾಂತದಲ್ಲಿ ಬೆಳೆದಂತಹ ಆಹಾರವನ್ನು ಸಂಗ್ರಹಿಸಿ ಅದು ಕೆಡದಂತೆ ಇಟ್ಟಿದ್ದೇವೆ. ಮತ್ತು ಹೊರಗಡೆಯಿಂದ, ಪರದೇಶದಿಂದ ಬಂದಂತಹ ಆಹಾರವನ್ನು ಕೂಡ ನಾವು ಸರಿಯಾಗಿ ಸಂಗ್ರಹಿಸಿ ಇಟ್ಟಿದ್ದೇನೆ. ಇದರ ಬಗ್ಗೆ ಸರ್ಕಾರದವರು ಸಾಕಷ್ಟು ಕ್ರಮವನ್ನು ತೆಗೆದುಕೊಂಡು ಎಲ್ಲಾ ಆಹಾರ ಧಾನ್ಯವನ್ನೂ ಸಹ ವೇರ್‌ಹೌಸ್ ಕಾರ್ಪೋರೇಷನ್ ಗೋಡೌನ್‌ಗಳಲ್ಲಿ, ಮತ್ತು ಸ್ಟೇಟ್ ಗೌನ್ಮೆಂಟ್ ಗೋಡೌನ್‌ಗಳಲ್ಲಿ ಇಟ್ಟು ಅದಕ್ಕೆ ಯಾವ ಕ್ರಿಮಿಕೀಟಗಳೂ ಬೀಳದಂತೆ ಜೋಪಾನವಾಗಿ ನೋಡಿಕೊಳ್ಳಲಾಗುತ್ತಿದೆ. ಆಹಾರಧಾನ್ಯ ಒಂದು ವೇಳೆ ಹಾಳಾಗಿ ಹೋದರೆ ಅದರಿಂದ ಆಗತಕ್ಕ ನಷ್ಟವನ್ನು ತುಂಬುವುದಕ್ಕಾಗಿ ಇನ್‌ಷ್ಯೂರೆನ್ಸನ್ನು ಎಲ್ಲಾ ಕಡೆಗಳಲ್ಲೂ ಮಾಡಿದೆ.

ಇನ್ನು ಆಹಾರ ಧಾನ್ಯದ ಉತ್ಪಾದನೆಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ರೈತ ಹೆಚ್ಚಿಗೆ ಆಹಾರವನ್ನು ಬೆಳೆಯುಬೇಕಾದರೆ ಅವನಿಗೆ ವ್ಯವಸಾಯಕ್ಕೆ ಬೇಕಾದ ಸವಲತ್ತುಗಳನ್ನು ಒದಗಿಸಿ ಕೊಡಬೇಕು. ಮತ್ತು ರೈತರಿಗೆ ಹೆಚ್ಚಿಗೆ ಪ್ರೋತ್ಸಾಹ ಸಿಕ್ಕುವಂತಹ ಯೋಜನೆಗಳನ್ನು ತೆಗೆದು ಕೊಳ್ಳಬೇಕು. ಮತ್ತು ಅವನು ಬೆಳೆದಂತಹ ಧಾನ್ಯಕ್ಕೆ ಪ್ರೋತ್ಸಾಹ ಸಿಕ್ಕುವಂತಹ ಬೆಲೆಯನ್ನು ಕೊಡಬೇಕು. ಆಗ ರೈತ ಹೆಚ್ಚು ಆಹಾರ ಧಾನ್ಯವನ್ನು ಬೆಳೆಯುವುದಕ್ಕೆ ಪ್ರಯತ್ನ ಮಾಡುತ್ತಾನೆ. ಆಹಾರವನ್ನು ಬೆಳೆಯುವ ರೈತನಿಗೆ ಅವನು ಮಾಡಿದಂತಹ ಕೆಲಸಕ್ಕೆ ಸರಿಯಾದಂತಹ ಪ್ರತಿಫಲ ಬರಬೇಕು. ಅದು ಕಡಿಮೆ ಬಾರದಂತೆ ನೋಡಿಕೊಂಡು ರೈತನಿಗೆ ಸರ್ಕಾರದವರು ಸಹಾಯ ಮಾಡಿದರೆ ಅವನು ಶ್ರದ್ಧೆಯಿಂದ ನಿಷ್ಠೆಯಿಂದ ಕೆಲಸ ಮಾಡುತ್ತಾನೆ, ಮತ್ತು ಸಾಕಷ್ಟು ಆಹಾರವನ್ನು ಉತ್ಪತ್ತಿ ಮಾಡುತ್ತಾನೆ. ಆ ರೀತಿ ಮಾಡುವುದಾದರೆ ನಮ್ಮ ದೇಶದಲ್ಲಿ ಆಹಾರದ ಅಭಾವವನ್ನು ಕಡಿಮೆ ಮಾಡುವುದರಲ್ಲಿ ಯಾವ ಸಂಶಯವು ನನಗೆ ಕಾಣುವುದಿಲ್ಲ. ಈ ಸಭೆಯ ಮಾನ್ಯ ಸದಸ್ಯರೆಲ್ಲರೂ ಈ ವಿಚಾರದಲ್ಲಿ ಇಲ್ಲಿ ಚರ್ಚೆ ಮಾಡಿ ತಮ್ಮ ಸಲಹೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಕೊಟ್ಟರೆ ಅವರು ದೇಶಾದ್ಯಂತ ಅನುಕೂಲವಾಗುವಂತಹ ಆಹಾರ ನೀತಿಯನ್ನು ಒಪ್ಪಿಕೊಂಡು ರೈತರಿಗೆ ಹೆಚ್ಚಿನ ಸೌಲಭ್ಯ ಸಿಕ್ಕುವ ಏರ್ಪಾಡು ಆಗುವುದರಲ್ಲಿ ಸಂಶಯ ಕಾಣುವುದಿಲ್ಲ.

ಇನ್ನು ನಾನು ಒಂದು ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮ ಮೈಸೂರು ರಾಜ್ಯಕ್ಕೆ ಸರ್ವೆ ಸಾಮಾನ್ಯವಾಗಿ ಒಂದು ವರ್ಷಕ್ಕೆ 48 ಲಕ್ಷ ಟನ್ ಆಹಾರಧಾನ್ಯ ಬೇಕಾಗುತ್ತದೆ ತಮಗೆಲ್ಲರಿಗೂ ಗೊತ್ತಿರುವ ಹಾಗೆ ನಮ್ಮಲ್ಲಿ ಮಳೆ ಬೆಳೆ ಚೆನ್ನಾಗಿ ಆದರೆ 45 ಲಕ್ಷ ಟನ್‌ಗಳಷ್ಟು ಆಹಾರವನ್ನು ಬೆಳೆಯುತ್ತಾರೆ. ಅಲ್ಲಿಗೂ ಸಹ 3 ಲಕ್ಷ ಟನ್ ಆಹಾರ ಡಿಫಿಸಿಟ್ ಇರುತ್ತದೆ. ಈ ವರ್ಷ ಮಳೆ ಸರಿಯಾಗಿ ಬಾರದೆ ಇದ್ದುದರಿಂದ ಬೆಳೆ ಚೆನ್ನಾಗಿ ಬರಲಿಲ್ಲ. ಹೆಚ್ಚಿಗೆ ಆಹಾರಧಾನ್ಯ ಬರಬೇಕಾದ್ದು ಬರಲಿಲ್ಲ. ಆದ್ದರಿಂದ ಆಹಾರಧಾನ್ಯ ನಮಗೆ ಕಡಿಮೆ ಬೀಳುತ್ತಿದೆ.

ಇನ್ನು ಶ್ರೀಮಾನ್ ಗೋಪಾಲಗೌಡರು ಗವರ್ನರ್ ಅವರ ಭಾಷಣದಲ್ಲಿ 9 ಲಕ್ಷ ಟನ್ ಆಹಾರ ಕಡಿಮೆ ಬೀಳುತ್ತದೆ ಎಂದು ಹೇಳಿದೆ ಎಂದು ಹೇಳಿದರು. ಅದರಲ್ಲಿ ಆ ರೀತಿ ಬರೆದಿಲ್ಲ ಮೈಸೂರು ರಾಜ್ಯಕ್ಕೆ ಆಹಾರದ ಕೊರತೆ ಹೆಚ್ಚಾಗಬಹುದು, ಕನಿಷ್ಟ ಪಕ್ಷ 9 ಲಕ್ಷ ಟನ್ ಆಹಾರವನ್ನು ಕೇಂದ್ರ ಸರ್ಕಾರದಿಂದ ದೊರಕಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿದೆ.

ಇನ್ನೊಂದು ವಿಷಯವೇನೆಂದರೆ, ಈ ವರ್ಷ ಮೊದಲು ಕರೀಫ್ ಬೆಳೆಯಲ್ಲಿ 15—16 ಲಕ್ಷ ಟನ್ ಕಡಿಮೆ ಬೀಳಬಹುದು ಎಂದು ನಾವು ಅಂದಾಜು ಮಾಡಿದ್ದೆವು. ರಬಿ ಬೆಳೆಯಲ್ಲಿ ಎಂದರೆ ಹಿಂಗಾರು ಬೆಳೆಯಲ್ಲಿ 5 ಲಕ್ಷ ಟನ್ ಆಹಾರ ಕಡಿಮೆ ಬೀಳಬಹುದೆಂದು ಅಂದಾಜು ಮಾಡಲಾಗಿತ್ತು. ಆದರೆ ಕೊನೆಯ ಬೆಳೆಗೆ ಕೊನೆಯಲ್ಲಿ ತಡವಾಗಿ ಬಂದ ಮಳೆಯ ಪರಿಣಾಮವಾಗಿ ಬೆಳೆಯು ಸುಧಾರಿಸಿ

5 ಲಕ್ಷ ಟನ್ ಆಹಾರಧಾನ್ಯ ಕಡಿಮೆ ಬೇಳುವುದಿಲ್ಲ ನುಮಾರು ಒಂದು ಲಕ್ಷ ಟನ್ ಆಹಾರಧಾನ್ಯ ಕಡಿಮೆ ಬೀಳಬಹುದು ಎಂದು ಅಂದಾಜು ಮಾಡಲಾಯಿತು ; ಆಮೇಲೆ ಅಷ್ಟೂ ಕಡಿಮೆ ಬೀಳುವುದಿಲ್ಲ ಎಂದು ಗೊತ್ತಾಯಿತು. ಕೇಂದ್ರ ಸರ್ಕಾರದವರ ಸಹಾಯದಿಂದ ಬರತಕ್ಕ 9 ಲಕ್ಷ ಆಹಾರಧಾನ್ಯ ದಿಂದ ನಮ್ಮಲ್ಲಿ ಪರಿಸ್ಥಿತಿ ಸ್ವಲ್ಪ ಸುಧಾರಣೆಯನ್ನು ಹೊಂದಿತು. ನಮ್ಮಲ್ಲಿ ಆಹಾರದ ಅಭಾವ ಪರಿಸ್ಥಿತಿ ಇರುವಾಗ ಆಹಾರದ ಹಂಚಿಕೆಯ ಏರ್ಪಾಡನ್ನು ಮಾಡುವುದು ಸರ್ಕಾರದ ಕರ್ತವ್ಯ. ಆ ದೃಷ್ಟಿಯಿಂದ ಸರ್ಕಾರದವರು ಒಳ್ಳೆಯ ರೀತಿಯಲ್ಲಿ ಆಹಾರಧಾನ್ಯವನ್ನು ಜನಗಳಿಗೆ ಹಂಚಿಗೆ ಮಾಡಿ ದ್ದಾರೆ. ಈ ಆಹಾರವನ್ನು ಹಂಚಿಕೆ ಮಾಡುವ ವಿಷಯದಲ್ಲಿ ಮಾನ್ಯ ಸದಸ್ಯರು ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ. ಅದಕ್ಕೆ ಉತ್ತರವನ್ನೂ ಕೂಡ ಹೇಳಿದ್ದೇವೆ. ಅನೇಕ ಮಾನ್ಯ ಸದಸ್ಯರು ನನ್ನನ್ನು ನೀವು ಹೇಳುವ ಉತ್ತರ ತಾಂತ್ರಿಕವಾಗಿರುತ್ತದೆ ಎಂದು ಹೇಳಿದರು. ನಾನು ತಮಗೆ ಹೇಳ ಬೇಕಾದರೆ ಪಾರ್ಲಿಮೆಂಟಿನಲ್ಲಿ ಎಷ್ಟು ಪ್ರಶ್ನೆ ಕೇಳುತ್ತಾರೆಯೋ ಅಷ್ಟಕ್ಕೆ ಮಾತ್ರ ಉತ್ತರವನ್ನು ಹೇಳ ಬೇಕು. ಒಂದು ವೇಳೆ ಹೆಚ್ಚಿಗೆ ಉತ್ತರವನ್ನು ಹೇಳುವುದಕ್ಕೆ ಹೋದರೆ ಅಧ್ಯಕ್ಷರು ಅದಕ್ಕೆ ಅವಕಾಶ ವನ್ನು ಕೊಡುವುದಿಲ್ಲ. ಅದ್ದರಿಂದ ನಾನು ಮಾನ್ಯ ಸದಸ್ಯರು ಕೇಳಿದಷ್ಟಕ್ಕೆ ಮಾತ್ರ ಉತ್ತರವನ್ನು ಹೇಳುತ್ತೇನೆ. ಅವರು ಕೇಳಿದ್ದಕ್ಕಿಂತ ಹೆಚ್ಚಿಗೆ ಉತ್ತರವನ್ನು ಹೇಳುವುದು ಸರಿಯಿಲ್ಲ ನಾನು ಹೇಳುವುದೂ ಇಲ್ಲ. ಅಂತೂ ಆಹಾರದ ವಿತರಣೆಯ ಕೆಲಸ ಚೆನ್ನಾಗಿ ನಡೆದಿದೆ.

ಇನ್ನು ನಮ್ಮ ರಾಜ್ಯಕ್ಕೆ ಕೇಂದ್ರ ಸರ್ಕಾರದವರ ಸಹಾಯದಿಂದ ಈ ವರ್ಷ 10 ಸಾವಿರ ಟನ್ ಕಡಲೆ ಮತ್ತು ಕಡಲೆ ಬೇಳೆ ಪಂಜಾಬಿನಿಂದಲೂ, 10 ಸಾವಿರ ಟನ್ ಕಡಲೆ ಮತ್ತು ಕಡಲೆ ಬೇಳೆ ರಾಜಾಸ್ಥಾನದಿಂದಲೂ ಬರುತ್ತಿದೆ. ಇದನ್ನು ನಮ್ಮ ರಾಜ್ಯಕ್ಕೆ ತರಿಸಿ ಕೊಡಲು ಫುಡ್ ಕಾರ್ಪೊರೇಷನ್ನಿಗೆ ತಿಳಿಸಿದ್ದೇವೆ. ಅವರು ಅದನ್ನು ತರಿಸಿಕೊಡುತ್ತಾರೆ. ಆ ಕಡಲೆ ಬೇಳೆ ಮತ್ತು ಕಡಲೆ ಯನ್ನು ಒಂದೇ ಕಡೆ ಸಂಗ್ರಹ ಮಾಡಿ ಆ ಮೇಲೆ ವಿತರಣೆ ಮಾಡುವುದರಿಂದ ಗ್ರಾಹಕರಿಗೆ ಬೆಲೆ ಹೆಚ್ಚಾಗಬಹುದೆಂದು ಎಲ್ಲೆಲ್ಲಿ ಅದನ್ನು ವಿತರಣೆ ಮಾಡಬೇಕೋ ಆಯಾ ಸ್ಥಳಗಳಿಗೆ ಅನುಕೂಲ ವಾಗುವಂತೆ ಯಾವ ಯಾವ ಸ್ಟೇಷನ್‌ನಲ್ಲಿ ಕಡಲೆ ಬೇಳೆಯನ್ನು ಇಳಿಸುವುದಕ್ಕೆ ಅನುಕೂಲವಾಗುತ್ತದೆಯೋ ಅಲ್ಲಲ್ಲಿ ಅದನ್ನು ಇಳಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಡಿಪ್ಯುಟಿ ಕಮೀಷನರಿಗೆ ತಿಳಿಸಿ ದ್ದೇವೆ. ಕಡಲೆ ಅಥವಾ ಕಡಲೆಬೇಳೆ ಯಾವರೀತಿ ಬರುತ್ತದೆಯೋ ಹಾಗೆಯೇ ಹಂಚುವಂತೆ ವ್ಯವಸ್ಥೆ ಮಾಡಲಾಗಿದೆ. ಕಳೆದ ವರ್ಷ 15 ಸಾವಿರ ಟನ್ ಕಡಲೆ ನಮ್ಮ ರಾಜ್ಯಕ್ಕೆ ಬಂದಿತ್ತು. ಅದನ್ನು ಬೇಳೆ ಮಾಡಿ ಮಾರಾಟ ಮಾಡುವ ಕಾಲಕ್ಕೆ ಕೆಲವು ಲೋಪದೋಷಗಳು ಕಂಡುಬಂದುವು. ಆಗ ಅದಕ್ಕೆ ಯಾರು ಕಾರಣಕರ್ತರೋ ಅಂಥವರನ್ನು ಹಿಡಿದು ಶಿಕ್ಷೆ ಮಾಡುವ ಪರಿಸ್ಥಿತಿಯು ಬಂತು. ಅದ್ದರಿಂದ ಇನ್ನು ಮುಂದೆ ಕಡಲೆ ಅಥವಾ ಕಡಲೇ ಬೇಳೆ ಯಾವರೀತಿ ಬರುತ್ತದೆಯೋ ಹಾಗೆಯೇ ಅದನ್ನು ವಿತರಣೆ ಮಾಡಲು ವ್ಯವಸ್ಥೆ ಮಾಡಲಾಗಿದೆ.

ನಮ್ಮ ರಾಜ್ಯಕ್ಕೆ ಜನಗಳಿಗೆ ವಿತರಣೆ ಮಾಡುವುದಕ್ಕೋಸ್ಕರ ಹೊರಗಡೆಯಿಂದ ಬಂದಂತಹ ಗೋಧಿ, ಕಡಲೆ ಬೇಳೆ, ಮೈದಾಹಿಟ್ಟು ಮತ್ತು ಕೇಸರಿ ಜೋಳ ಇವುಗಳೆಲ್ಲವನ್ನೂ ಬಹಳ ಎಚ್ಚರಿಕೆ ವಹಿಸಿ ಜನಗಳಿಗೆ ವಿತರಣೆ ಮಾಡಿದ್ದೇವೆ. ನಮ್ಮ ರಾಜ್ಯಕ್ಕೆ ಗೋಧಿ ಜನವರಿ ತಿಂಗಳಿನಲ್ಲಿ 22 ಸಾವಿರ ಟನ್ ಬಂತು. ಫೆಬ್ರವರಿ ತಿಂಗಳಿನಲ್ಲಿ 43 ಸಾವಿರ ಟನ್ ಬಂತು. ಆಮೇಲೆ ಮಾರ್ಚ್ ತಿಂಗಳಿನಲ್ಲಿ 'ಪ್ಲೋರ್' ಮಿಲ್‌ಗೋಸ್ಕರ 43 ಸಾವಿರ ಟನ್ ಗೋಧಿ ಬಂತು.

ಗೋಧಿ	ಜನವರಿ	ತಿಂಗಳಲ್ಲಿ	3,000 ಟನ್ನುಗಳು
ಗೋಧಿ	ಫೆಬ್ರವರಿ	ತಿಂಗಳಲ್ಲಿ	7,000 ಟನ್ನುಗಳು
ಗೋಧಿ	ಮಾರ್ಚಿ	ತಿಂಗಳಲ್ಲಿ	7,000 ಟನ್ನುಗಳು

ಇನ್ನು ಮಿಲೋ ಎಂದರೆ ಕೇಸರಿ ಜೋಳ ಮಾರ್ಚಿ ತಿಂಗಳಲ್ಲಿ 20,000 ಟನ್ನುಗಳಷ್ಟು. ಏಪ್ರಿಲ್ ತಿಂಗಳಲ್ಲಿ ಇದನ್ನು ಇನ್ನೂ ಹೆಚ್ಚು ಮಾಡಬೇಕೆಂದು ನಮ್ಮಲ್ಲರುವ ಧಾನ್ಯ ತೆಗೆದುಕೊಂಡು ಹಂಚಿಕೆ ಮಾಡುವ ವ್ಯವಸ್ಥೆ ಮಾಡುತ್ತಿದ್ದೇವೆ.

ಇದರಲ್ಲಿ ಗೋಧಿ ಏಪ್ರಿಲ್ ತಿಂಗಳಲ್ಲಿ 3,000 ಟನ್ನುಗಳು ಪ್ಲೋರ್‌ಮಿಲ್ಸ್‌ಗಳಿಗೆ ಬೇಕಾಗುವಷ್ಟು ಎಂದು 7,000 ಟನ್ನುಗಳು ಕೇಸರಿ ಜೋಳವನ್ನು 40,000 ಟನ್ನುಗಳಷ್ಟು ಹಂಚಬೇಕೆಂದು ಏರ್ಪಾಡು ಮಾಡಿದ್ದೇವೆ. ಏಪ್ರಿಲ್ ತಿಂಗಳಲ್ಲಿ ಒಟ್ಟಿಗೆ ಕೇಂದ್ರ ಸರಕಾರದಿಂದ 7,700 ಟನ್ನುಗಳಷ್ಟು ಆಹಾರಧಾನ್ಯ ಬರುತ್ತಿದೆ ಮತ್ತು ಹೊರಗಿನಿಂದಲೂ ಬರುತ್ತದೆ.

ಇನ್ನು ಅಕ್ಕಿ ವಿಷಯದ ಬಗ್ಗೆ ಕೆಲವರು ಪ್ರಶ್ನೆ ಕೇಳಿದರು. ಇದುವರೆಗೆ ನಮಗೆ ಅಕ್ಕಿಯನ್ನು ಆಂಧ್ರ ಹಾಗೂ ಮದರಾಸು ರಾಜ್ಯಗಳವರು ಏನು ಕೊಡುತ್ತಿದ್ದರು ಅದನ್ನು ಇದುವರೆಗೂ ಹಾಗೇ

(ಶ್ರೀ ಬಿ. ಡಿ. ಜತ್ತಿ)

ಮಾರಾಟ ಮಾಡುತ್ತಿದ್ದಾರೆ. ನಮಗೆ ಹೊರಗಿನಿಂದ ಅಕ್ಕಿ ನುಮಾರು ಎಂಟು ಸಾವಿರ ಟನ್ನು ಗಳಷ್ಟು ಹೆಚ್ಚಾಗಿ ಬರಲು ಪ್ರಯತ್ನ ಮಾಡುತ್ತಿದ್ದೇವೆ. ಅಕ್ಕಿಯ ಪರಿಸ್ಥಿತಿ ಸರಿಯಿಲ್ಲ ಎಂದು ಅಕ್ಕಿಯ ಉಪಯೋಗವನ್ನು ಬಹಳ ಎಚ್ಚರಿಕೆಯಿಂದ ತೊಂದರೆಯಾಗದಂತೆ ಬಳಕೆದಾರರು ನಾವೇನು ಅಕ್ಕಿ ಹಂಚುತ್ತಿದ್ದೇವೆ ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಬೇಕೆಂದು ಒತ್ತಿ ಒತ್ತಿ ಹೇಳುತ್ತ ಬರುತ್ತಿದ್ದೇವೆ. ಹಳ್ಳಿಗಾಡಿನ ಜನಕ್ಕೆ ಅಕ್ಕಿ ಹಂಚಿಕೆ ಮಾಡಿಲ್ಲ ಎಂದರು. ನಮಗೆ ಹಳ್ಳಿ ಗಳಿಗೆ ಅಕ್ಕಿಯನ್ನು ಹಂಚಲಿಕ್ಕೆ ಆಗಲಲ್ಲ. ಅವರಿಗೆ ಉಪಯೋಗ ಮಾಡಲಿಕ್ಕೆ ಕೊಡಲು ನಮಗೆ ಹೆಚ್ಚಾಗಿ ಅಕ್ಕಿ ಬರಲಲ್ಲ. ನಮ್ಮಲ್ಲರುವ ಅಕ್ಕಿಯನ್ನು ಪ್ರತಿಯೊಂದು ಜಿಲ್ಲೆಗೆ ಇಂತಿಷ್ಟು ಎಂದು ಆಹಾರ ಧಾನ್ಯಗಳನ್ನು ಕೊಡಬೇಕಾಗಿದೆ. ಆಸ್ಪತ್ರೆಗಳಲ್ಲಿ ರೋಗಿಗಳಿಗಾಗಿ ಅಕ್ಕಿ ಕೊಡಬೇಕಾಗಿ ಬರುತ್ತದೆ. ಮತ್ತು ಹಾಸ್ಟಲ್ಲುಗಳಲ್ಲಿರುವ ಚಿಕ್ಕ ಮಕ್ಕಳಿಗಾಗಿ ಕೊಡಬೇಕು. ಇನ್ನೂ ಕೆಲವು ಕಡೆ ಗಳಲ್ಲಿ ಅವಶ್ಯಕವೆಂದು ಕಂಡುಬಂದ ಕಡೆಗಳಲ್ಲಿ ಅಕ್ಕಿ ಕೊಡಬೇಕಾಗಿ ಬರುತ್ತದೆ. ಎಲ್ಲಿ ಅಕ್ಕಿಯನ್ನು ಬೆಳೆಯುತ್ತಿದ್ದಾರೋ ಆ ಪ್ರದೇಶಗಳಲ್ಲಿ ರೆವಿ ರೂಪದಲ್ಲಿ ಬತ್ತ ಕೊಟ್ಟು ಉಳಿಕೆಯಾದುದನ್ನು ಅವರೇ ಇಟ್ಟುಕೊಳ್ಳಲು ಅಥವಾ ಮಾರಲು ಅವಕಾಶಕೊಡರಾಗಿದೆ. ಆದುದರಿಂದ ಹಳ್ಳಿಗಳಲ್ಲಿ ನಾವು ಅಕ್ಕಿ ಯನ್ನು ಹೆಚ್ಚಾಗಿ ಕೊಡಲಿಕ್ಕೆ ಇದುವರೆಗೂ ಸಾಧ್ಯವಾಗಲಲ್ಲ ಮತ್ತು ಮುಂದೂ ಕೊಡಲು ಸಾಧ್ಯ ಎಂದು ನನಗೇನೂ ಕಾಣಿಸುತ್ತಿಲ್ಲ. ಮೈಸೂರು ದೇಶಕ್ಕೆ ಪರದೇಶಗಳಿಂದ ಅಕ್ಕಿಯನ್ನು ಹೆಚ್ಚು ತರಿ ಸುವ ಪ್ರಯತ್ನ ಮಾಡುತ್ತಿದ್ದೇವೆ. ಮದರಾಸು ಹಾಗೂ ಆಂಧ್ರ ಸರಕಾರವನ್ನೂ ಅಕ್ಕಿ ಕೊಡ ಬೇಕೆಂದು ಕೇಳಿದ್ದೇವೆ. ಕೇಂದ್ರ ಸರಕಾರದವರನ್ನೂ ಸಹಾಯ ಮಾಡಬೇಕೆಂದು ಕೇಳಿದ್ದೇವೆ. ಇವರುಗಳಿಂದ ಅಕ್ಕಿ ಬಂದರೆ ಆಗ ಅದನ್ನು ಹಂಚುವುದಕ್ಕೆ ಸಾಧ್ಯ ಎಂದು ಇಲ್ಲಿನಾನು ತಮಗೆ ಹೇಳುತ್ತೇನೆ.

ಇನ್ನೊಂದು ಪ್ರಶ್ನೆ ಇಲ್ಲ ಕೇಳಿದರು. ಜಿಲ್ಲೆಗಳಿಗೆ ಆಹಾರಧಾನ್ಯವನ್ನು ಹೇಗೆ ನೀವು ಹಂಚು ತ್ತೀರಿ ಎಂದು ಕೇಳಿದರು. ಎಲ್ಲೆಲ್ಲಿ ಯಾವ ಯಾವ ತಿಂಗಳುಗಳಿಗೆ ಎಷ್ಟು ಹಂಚುತ್ತೀವೆ ಎನ್ನುವು ದನ್ನು ಈಗಾಗಲೇ ಒಮ್ಮೆ ಹೇಳಿದ್ದೇನೆ. ಅದನ್ನೇ ಮತ್ತೊಮ್ಮೆ ಈಗ ಇಲ್ಲಿ ಹೇಳುತ್ತೇನೆ.

ಜನವರಿ ತಿಂಗಳಲ್ಲಿ 21 ಜಿಲ್ಲೆಗಳಿಗಾಗಿ

ಅಕ್ಕಿ ಕೊಟ್ಟುದ್ದು	9,387 ಟನ್ನುಗಳು
ಗೋಧಿ	11,332 ಟನ್ನುಗಳು
ಇತರ ಆಹಾರಧಾನ್ಯಗಳು	4,115 ಟನ್ನುಗಳು

ಇದರಲ್ಲಿ ಬೆಂಗಳೂರು ರೂರಲ್ ಜಿಲ್ಲೆಯ ಬಗ್ಗೆ ನಮ್ಮ ಸ್ನೇಹಿತರು ನಮ್ಮ ಜಿಲ್ಲೆ ಬಗ್ಗೆ ಕಡೆಗಾಣಿಸಿದರು ಎಂದು ಹೇಳುವುದು ಸರಿಯಿಲ್ಲ. ಅವರ ಜಿಲ್ಲೆಗೂ ಕೊಡರಾಗಿದೆ ಮತ್ತು ಮುಂದೆ ಇನ್ನೂ ಹೆಚ್ಚು ಕೊಟ್ಟಿರುವುದನ್ನೂ ಇಲ್ಲ ಅವರಿಗೆ ತಿಳಿಸುತ್ತೇನೆ. ಈಗ ಬರೀ ಬೆಂಗಳೂರು ರೂರಲ್ ಜಿಲ್ಲೆಗಾಗಿ ಕೊಟ್ಟಿರುವುದನ್ನು ಹೇಳುತ್ತೇನೆ.

ಜನವರಿಯಲ್ಲಿ ಅಕ್ಕಿ	100 ಟನ್ನುಗಳು
ಗೋಧಿ	200 ಟನ್ನುಗಳು
ಇತರ ಆಹಾರಧಾನ್ಯಗಳು	440 ಟನ್ನುಗಳು

ಎಂದರೆ ಒಟ್ಟು 750 ಟನ್ನುಗಳಷ್ಟು ಬೆಂಗಳೂರು ರೂರಲ್ ಜಿಲ್ಲೆಗೇನೇ ಕೊಡರಾಗಿದೆ. ಇದರಿಂದ ಬೇರೆ ಜಿಲ್ಲೆಗಳಿಗೆ ಹೆಚ್ಚು ಕೊಟ್ಟಂತೆ ಮುಂದೆ ಈ ಜಿಲ್ಲೆಗೂ ಕೊಡರಾಗಿದೆ. ಅದನ್ನೂ ತಮಗೆ ಕೊಡು ತ್ತೇನೆ.

ಫೆಬ್ರುವರಿ ತಿಂಗಳಲ್ಲಿ ಎಲ್ಲ 21 ಜಿಲ್ಲೆಗಳಿಗೂ ಆಹಾರ ಧಾನ್ಯಗಳನ್ನು ಕೊಟ್ಟಿರುವುದು ಹೀಗಿದೆ.

ಅಕ್ಕಿ	9,162 ಟನ್ನುಗಳು
ಗೋಧಿ	16,762 ಟನ್ನುಗಳು
ಇತರ ಆಹಾರಧಾನ್ಯಗಳು	8,766 ಟನ್ನುಗಳು
ಹೀಗೆ ಒಟ್ಟಿಗೆ ಕೊಟ್ಟಿರುವುದು	24,690 ಟನ್ನುಗಳು

ಇದೇ ರೀತಿ ಬೆಂಗಳೂರು ರೂರಲ್ ಜಿಲ್ಲೆಗೆ ಕೊಟ್ಟಿರುವುದು ಹೀಗಿದೆ

ಫೆಬ್ರವರಿ ತಿಂಗಳಲ್ಲಿ ಅಕ್ಕಿ	100 ಟನ್ನುಗಳು
ಫೆಬ್ರುವರಿ ತಿಂಗಳಲ್ಲಿ ಗೋಧಿ	300 ಟನ್ನುಗಳು
ಇತರ ಆಹಾರಧಾನ್ಯಗಳು	800 ಟನ್ನುಗಳು

ಎಂದರೆ ಒಟ್ಟು ಈ ಜಿಲ್ಲೆಗೆ ಕೊಟ್ಟಿರುವುದು 1,200 ಟನ್ನುಗಳು.

ಮಾರ್ಚ್ ತಿಂಗಳಲ್ಲಿ ಎಲ್ಲ ಜಿಲ್ಲೆಗಳಿಗಾಗಿ ಕೊಟ್ಟಿರುವುದು

ಅಕ್ಕಿ	9,162 ಟನ್ನುಗಳು
ಗೋಧಿ	34,534 ಟನ್ನುಗಳು

ಇದರಲ್ಲಿ ಬೆಂಗಳೂರು ರೂರಲ್ ಜಿಲ್ಲೆಗಾಗಿ

ಅಕ್ಕಿ	100 ಟನ್ನುಗಳು
ಗೋಧಿ	1,600 ಟನ್ನುಗಳು
ಇತರ ಆಹಾರಧಾನ್ಯಗಳು	400 ಟನ್ನುಗಳು

ಎಂದರೆ ಒಟ್ಟು 2,100 ಟನ್ನುಗಳಷ್ಟು ಇಲ್ಲಿಗೆ ಕೊಟ್ಟಹಾಗಾಯಿತು. ಗೋಧಿಯನ್ನು ಕಡಿಮೆಯಾಗಿ ಇಲ್ಲಿ ಕೊಟ್ಟಿದ್ದಲ್ಲ. ಇನ್ನೂ ಹೆಚ್ಚಾಗಿಯೇ ಕೊಡಲಾಗಿದೆ ಎಂದು ಇಲ್ಲಿ ಮಾನ್ಯ ಸದಸ್ಯರಿಗೆ ಹೇಳುತ್ತೇನೆ. ಮುಂದೆಯೂ ಕೂಡ ಇನ್ನೂ ಹೆಚ್ಚು ಆಹಾರ ಧಾನ್ಯಗಳನ್ನು ಕೊಡಬೇಕೆಂದು ಏರ್ಪಾಡು ಮಾಡುತ್ತಿದ್ದೇವೆ. ಬೆಂಗಳೂರು ಪಟ್ಟಣ, ಕೆ. ಜಿ. ಎಫ್. ಗಳಲ್ಲಿ ಇದುವರೆಗೆ 6.2 ಕೆ. ಜಿ. ಯಷ್ಟು ಆಹಾರಧಾನ್ಯ ಎಂದರೆ 3.2 ಕೆ. ಜಿ. ಅಕ್ಕಿ ಮತ್ತು 3 ಕೆ. ಜಿ. ಗೋಧಿ ಎಂದು ಕೊಡುತ್ತಿದ್ದೇವೆ. ಮುಂದೆ ಏಪ್ರಿಲ್ ತಿಂಗಳಿಂದ 6 ಕೆ. ಜಿ. ಅಕ್ಕಿ ಮತ್ತು ಎರಡು ಕೆ. ಜಿ. ಯಷ್ಟು ಕೇಸರಿ ಜೋಳವನ್ನೂ ಎಂದರೆ ಒಟ್ಟು 8 ಕೆ. ಜಿ. ಯಷ್ಟು ಕೊಡಬೇಕೆಂದು ಮಾಡಿದ್ದೇವೆ. ಇದೂ ಅಲ್ಲದೆ ಯಾರಾದರೂ ಬಡವರು ಕೊಂಡುಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಇರುವವರು ಕೊಳ್ಳಲು ಅನುಕೂಲವಾಗುವಂತೆ ಕೇಸರಿ ಜೋಳವನ್ನು 52 ಪೈಸೆಯಂತೆ ಕೆ. ಜಿ. ಗೆ ಮಾರಾಟ ಮಾಡಬೇಕೆಂದು ಮಾಡಿದ್ದೇವೆ. ಕಡಿಮೆ ಬೆಲೆಯ ಜೋಳವನ್ನೇ ತೆಗೆದುಕೊಳ್ಳುತ್ತೇವೆಂದು ಹೇಳುವವರಿಗೆ ಅವರಿಗೆ ಕೊಡುವ ಅಕ್ಕಿ ಆರು ಕೆ. ಜಿ. ಬಿಟ್ಟು [illegible] ಕೆ. ಜಿ. ಯಷ್ಟು ಕೇಸರೀ ಜೋಳವನ್ನೂ ತೆಗೆದು ಕೊಳ್ಳಲು ಅವಕಾಶ ಕೊಡಲಾಗಿದೆ. [illegible] ಒಟ್ಟು 8 ಕೆ. ಜಿ. ಯಷ್ಟು ಆಹಾರಧಾನ್ಯ ಪಡೆಯಲು ಅವಕಾಶ ಮಾಡಲಾಗಿದೆ. ಕೇಸರಿ ಜೋಳವನ್ನು ಹೆಚ್ಚು ಹೆಚ್ಚು ಉಪಯೋಗ ಮಾಡಿಕೊಳ್ಳಲು ಅದನ್ನೂ ಎಲ್ಲರಿಗೂ ಹಂಚುವ ಏರ್ಪಾಡು ಮಾಡಲಾಗಿದೆ. ಇದನ್ನು ದೊಡ್ಡ ಪಟ್ಟಣಗಳಲ್ಲಿ ಬಿಟ್ಟು ಇತರ ದೊಡ್ಡ ಊರುಗಳಲ್ಲಿ ಜನರು ಕೊಳ್ಳಲು ಅನುಕೂಲವಾಗುವಂತೆ ನುಮಾರು 20 ಸ್ಥಳಗಳಲ್ಲಿ ಪ್ರತಿಒಬ್ಬರಿಗೂ ಮೂರು ಕೆ. ಜಿ. ಯಷ್ಟು ಗೋಧಿ ಕೊಡಬೇಕೆಂದು ಮತ್ತು ಮಿಲ್ಲುಗಳಲ್ಲಿ ಕೆಲಸ ಮಾಡುವ ಜನಕ್ಕೆ ಅನುಕೂಲವಾಗುವಂತೆ ದೊಡ್ಡ ಸ್ಥಳಗಳಲ್ಲಿ ಆಹಾರಧಾನ್ಯಗಳನ್ನು ಹಂಚಬೇಕೆಂದು ಮಾಡಲಾಗಿದೆ. ಮುಂದೆ ಮೇ ತಿಂಗಳಿಂದ 5,000 ಜನಸಂಖ್ಯೆ ಇರುವ ಗ್ರಾಮಗಳಲ್ಲಿ ಮತ್ತು ಇನ್ನಿತರ ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ಒಟ್ಟು 5 ಕೆ. ಜಿ. ಯಷ್ಟು ಎಂದರೆ 3 ಕೆ. ಜಿ. ಗೋಧಿ 2 ಕೆ. ಜಿ. ಕೇಸರಿ ಜೋಳ ಪ್ರತಿ ಒಬ್ಬರಿಗೂ ಕೊಡಬೇಕೆಂದು ಗೊತ್ತುಮಾಡಿದ್ದೇವೆ. ಹಾಗೇ 5,000 ಜನಕ್ಕಿಂತ ಕಡಿಮೆ ಜನರಿರುವ ಕಡೆಗಳಲ್ಲಿ ಕೂಡ ಇದೇ ಪ್ರಕಾರವಾಗಿ ಕೊಡಬೇಕೆಂದು ಮಾಡಲಾಗಿದೆ. ಇದೂ ಅಲ್ಲದೆ ನಿರ್ಗತಿಕರಾಗಿರುವವರಿಗೆ ಕೈಯಲ್ಲಿ ಯಾವ ಕೆಲಸವನ್ನೂ ಮಾಡುವುದಕ್ಕಾಗದೇ ಇರುವವರಿಗೂ ಇದೇ ಪ್ರಕಾರ ಕೊಡಬೇಕೆಂದು ಇದೆ. ಮತ್ತು ರ್ಯಾಂಡಲೆಸ್ ರೇಬರರುಗಳು ಎಲ್ಲಿದ್ದಾರೋ ಅವರಿಗೂ ಕೂಡ ಕೊಡಬೇಕೆಂದು ಮತ್ತು ಕಾರ್ಮಿಕರುಗಳಿಗೂ ಕೊಡಬೇಕೆಂದು ಮಾಡಲಾಗಿದೆ ಮತ್ತು ಫ್ಯಾಮಿನ್ ಹಾಗೂ ಸ್ಕೇರ್ಸಿಟ ಏರಿಯಾಗಳಲ್ಲಿ ಕೆಲಸ ಮಾಡುವ ಕೂಲಿಗಾರರುಗಳಿಗಾಗಿ 5,000 ಜನಸಂಖ್ಯೆ ಇರಲಿ ಅಥವಾ ಅದಕ್ಕಿಂತ ಕಡಿಮೆ ಇರಲಿ ಅಲ್ಲಿ ಕೆಲಸಮಾಡುವ ಜನಗಳಿಗಾಗಿ ನಾವು ಆಹಾರಧಾನ್ಯ ಕೊಡಬೇಕೆಂದು ಮಾಡಿದ್ದೇವೆ. ಹೀಗೆ ಕೆಲಸ ಮಾಡುತ್ತಿರುವ ಪ್ರತಿಯೊಬ್ಬರಿಗೂ 10 ಕೆ. ಜಿ. ಯಷ್ಟು ಕೊಡಬೇಕೆಂದು ಮಾಡಿದ್ದೇವೆ ಇದೂ ಅಲ್ಲದೆ ಪ್ಲಾಂಟೇಷನ್ ಏರಿಯಾದಲ್ಲಿರುವ ಕಾರ್ಮಿಕರುಗಳಿಗೂ ಆಹಾರಧಾನ್ಯ ಕೊಡುತ್ತಿದ್ದೇವೆ. ಆಸ್ಪತ್ರೆಗಳಿಗೆ ಹಾಗೂ ಹಾಸ್ಟಲುಗಳಿಗೂ ಕೊಡುತ್ತಿದ್ದೇವೆ. ಇದೂ ಅಲ್ಲದೆ ಎಲ್ಲಿ ಕೈಯ್ಯರ್ಲಾಗದೆ ಇರುವ ವಯೋವೃದ್ಧರು ಇದ್ದಾರೋ ಅವರಿಗೆ ಮತ್ತು ಅಶಕ್ತರಿಗೆ ಮತ್ತು ಕೊಳ್ಳಲು ಶಕ್ತಿ ಇಲ್ಲದವರಿಗಾಗಿ ಸರಕಾರ ಆಹಾರ ಧಾನ್ಯವನ್ನು ಪುಕ್ಕಟೆಯಾಗಿ ಕೊಡಬೇಕೆಂದು ವ್ಯವಸ್ಥೆಮಾಡಲಾಗಿದೆ. ಇಂತಹ ಜನರಿಗಾಗಿ ನುಮಾರು 20 ಸಾವಿರ ಟನ್ನುಗಳಷ್ಟು ಕೊಡುವುದಕ್ಕೆ ಸಾಧ್ಯ ಎಂದು ಗೊತ್ತುಮಾಡಲಾಗಿದೆ. ಈಗ ಇನ್ನು ಮುಂದೆ ಆರು ತಿಂಗಳ ಕಾಲ ಮುಂದುವರಿಸಿಕೊಂಡು ಹೋಗುವುದಕ್ಕಾಗಿ ಇಂತಹ ನಿರ್ಗತಿಕರಿಗಾಗಿ ನುಮಾರು ಒಂದು ಸಾವಿರ ಟನ್ನುಗಳಷ್ಟು ತಂದು ಹಂಚಬೇಕೆಂದು ಮಾಡುತ್ತಿದ್ದೇವೆ.

(ಶ್ರೀ ಬಿ. ಡಿ. ಜತ್ತಿ)

ಇದನ್ನು ಹಂಚುವುದಕ್ಕೆ ಮುನ್ನ ಯಾವ ರೀತಿ ಹಂಚಬೇಕು ಎನ್ನುವುದರ ಬಗ್ಗೆ ಒಂದು ಯೋಜನೆಯನ್ನು ಕಲ್ಪಿಸಿ ಮಾಡಿಕೊಂಡಿದ್ದೇವೆ. ಆದರೆ ಪ್ರತಿಯೊಂದು ಪಂಚಾಯತಿಯಲ್ಲಿರುವವರ ಕಡೆಯಿಂದ ಪ್ರತ್ಯೇಕ ಪಂಚರವರುಗಳು ಪಟ್ಟಿಯನ್ನು ಮಾಡಿ ಸರಕಾರಕ್ಕೆ ಕಳುಹಿಸಬೇಕು ಅಥವಾ ಇಲ್ಲಿರುವ ಸದಸ್ಯರು ಯಾರಾದರೂ ಇದ್ದರೆ ಅಂತಹವರ ಹೆಸರುಗಳ ಪಟ್ಟಿಗಳನ್ನು ಪಂಚಾಯತಿಯವರ ಮೂಲಕ ಕಳುಹಿಸಿಕೊಟ್ಟರೆ ಅವರಿಗೆ ಹಂಚಬೇಕೆಂಬ ಯೋಜನೆಯನ್ನು ತಯಾರು ಮಾಡಿದ್ದೇವೆ. ಇದು ಬಂದಮೇಲೆ ಅಲ್ಲಲ್ಲಿರುವ ಸರ್ವಿಸ್ ಕೋ-ಆಪರೇಟೀವ್ಸ್‌ಗಳ ಮೂಲಕ ಹಂಚುವ ವ್ಯವಸ್ಥೆಯನ್ನು ಮಾಡಿದ್ದೇವೆ. ಇದಕ್ಕೆ ಹೆಚ್ಚು ಸಹಾಯ ಸಹಕಾರಗಳು ಎಲ್ಲ ಕಡೆಯಿಂದ ಬಂದರೆ ಮಾತ್ರ ಇದನ್ನು ಕೊಡಲಕ್ಕೆ ಸಾಧ್ಯವಾಗುತ್ತದೆ. ಈ ರೀತಿ ವ್ಯವಸ್ಥೆಮಾಡಲು ತಾವೆಲ್ಲರೂ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

11-30 A.M.

ಶ್ರೀಮಾನ್ ಶಿವಪ್ಪನವರು ಒಂದು ಮಾಹಿತಿಯನ್ನು ತರಿಸಿಕೊಡಬೇಕೆಂದು ಹೇಳಿದರು. 1964-65 ಮತ್ತು 65-66 ರಲ್ಲಿ ಎಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯ ಉತ್ಪನ್ನವಾಯಿತು ಮತ್ತು ಅದೇರೀತಿ ಆಹಾರಧಾನ್ಯ ಎಷ್ಟು ಬಂತು, ಎಷ್ಟು ಕಡಿಮೆಯಾಗಿದೆ ಎಂಬ ಬ್ರೇಕ್ ಅಪ್ ಕೊಡಬೇಕೆಂದು ಹೇಳಿದರು. ಅದನ್ನು ತರಿಸಿದ್ದೇನೆ. ಪುಡ್‌ಗ್ರೈನ್ಸ್,

ಅಕ್ಕಿ :

1964-65 ಇನ್ 1000 ಟನ್ಸ್ 1599
1965-66 ... 1380 ಟನ್ಸ್
ಕರೆಂಟ್ ಇಯರ್ ಷಾರ್ಟ್ ಫಾರ್ 219 ,,

ಜೋಳ :

1964-65 ಇನ್ 1000 ಟನ್ಸ್ 1440 ಟನ್ಸ್
1965-66 ,, 882 ,,
ಷಾರ್ಟ್ ಫಾರ್ ಇನ್ ಕರೆಂಟ್ ಇಯರ್ 580 ,,

ರಾಗಿ :

1964-65 ಇನ್ 1000 ಟನ್ಸ್ 755 ಟನ್ಸ್
1965-66 ,, 169 ,,
ಷಾರ್ಟ್ ಫಾರ್ ಇನ್ ಕರೆಂಟ್ ಇಯರ್ 590 ,,

ಗೋಧಿ :

1964-65 ಇನ್ 1000 ಟನ್ಸ್ 150 ಟನ್ಸ್
1965-66 63 ,,
ಷಾರ್ಟ್ ಫಾರ್ ಇನ್ ಕರೆಂಟ್ ಇಯರ್ 52 ,,

ಟೋಟಲ್ :

1964-65 ಇನ್ 1000 ಟನ್ಸ್ 3913 ಟನ್ಸ್
1965-66 2494 ,,
ಷಾರ್ಟ್‌ಫಾರ್ ಇನ್ ಕರೆಂಟ್ ಇಯರ್ 1419 ಟನ್ಸ್

ಈ ಒಂದು ಬ್ರೇಕ್ ಅಪ್ ಇದೆ.

ಹೋರ್ ಸೇರ್ ಡೀಲರ್ಸ್ ಬಗ್ಗೆ ಇಬ್ಬರು ಮಾನ್ಯ ಸದಸ್ಯರು ಚರ್ಚೆ ಮಾಡಿದರು. ಒಂದು ಒಂದು ಕಾಗದವನ್ನೂ ಕೂಡ ಶ್ರೀಮಾನ್ ಲಕ್ಕಪ್ಪನವರು ನನಗೆ ಕೊಟ್ಟಿದ್ದಾರೆ. ಹೋರ್ ಸೇರ್ ಮತ್ತು ರೀಟೇರ್ ಡೀಲರ್ಸ್ ಬಗ್ಗೆ ಒಂದು ಏರ್ಪಾಡು ಮಾಡಬೇಕೆಂದು ಏನು ಇತ್ತು ಅದನ್ನು ಮಾಡಿದ್ದಾರೆ. ಅದೇನೆಂದರೆ, ಸ್ಯಾಚ್ಯುಚೆರಿ ರೇಷನಿಂಗ್ ಪ್ರಾರಂಭಮಾಡಬೇಕಾದರೆ ಏನೊಂದು ಅಳತೆ ಒಳಗೆ ಆ ಸಂಖ್ಯೆ ಇರಬೇಕೋ ಅದನ್ನು ಬಿಟ್ಟರೆ ಚೆಕ್ ಮಾಡಲಕ್ಕೆ ಅವಕಾಶ ಸಿಗುವುದಿಲ್ಲ ಎಂದು ತಿಳಿದುಕೊಂಡು ಬೆಂಗಳೂರು ಪಟ್ಟಣದಲ್ಲಿ 1187 ರೀಟೇರ್ ಅಂಗಡಿಗಳು ಇದ್ದವು ಅದನ್ನು ಕಡಿಮೆ ಮಾಡಿ 700ಕ್ಕೆ ಇಳಿಸಬೇಕೆಂದು ಪುಡ್ ಡಿಪಾರ್ಟ್‌ಮೆಂಟಿನವರು ಪ್ರಯತ್ನ ಮಾಡಿದರು. ಆ ರೀತಿ ಸಿದ್ಧತೆಯನ್ನು ಕೂಡ ಮಾಡಿದರು. ಆದರೆ ಜನಗಳ ಕಡೆಯಿಂದ ಪುಡ್ ಇರಾಕೆಗೆ ಸಾಕಾದಷ್ಟು ತಕರಾರುಗಳು ಬಂದವು, ಈ ರೀತಿ ಕಡಿಮೆ ಮಾಡುವುದು ಸರಿಯಲ್ಲ; ಇದುವರೆಗೂ ಕೆಲಸ ಮಾಡಿಕೊಂಡು ಬಂದಿದ್ದೇವೆ ಮತ್ತು ಎಲ್ಲೆಲ್ಲಿ ಅಂಗಡಿಗಳನ್ನು ಇಟ್ಟಿದ್ದರೋ ಆ ಭಾಗಗಳಲ್ಲಿ ಜನಗಳಿಗೆ ಅನುಕೂಲವಾಗಿದೆ ಎಂದು ನಾನಾ ಮೂಲೆಗಳಿಂದ ತಕರಾರುಗಳು ಬಂದದ್ದರಿಂದ ನಾವೇನು ಮಾಡಬೇಕಾಯಿತು ? ಒಬ್ಬರನ್ನು ಬಿಟ್ಟು ಒಬ್ಬರನ್ನು ಇಡಬೇಕಾದರೆ ಡಿಸ್ಕ್ರಿಮಿನೇಷನ್ ಅಥವಾ ಪಕ್ಷಪಾತ ಮಾಡಿದ ಹಾಗೆ ಆಗುತ್ತದೆ ಎಂದು ತಿಳಿದುಕೊಂಡು ಮೊದಲು ಎಷ್ಟು ಸಂಖ್ಯೆ ಇತ್ತೋ, ಎಂದರೆ. 1187 ಅಂಗಡಿಗಳು ಇದ್ದದ್ದನ್ನು ಇದ್ದಹಾಗೆಯೇ ಇಟ್ಟಿದ್ದೇವೆ. ಸ್ಟೇಟಸ್ ಕೋ ಇಟ್ಟೆವು. ಇನ್ನು ಚಿಲ್ಲರೆ ಅಂಗಡಿಯವರ ಬಗ್ಗೆ ಈ ತತ್ವವನ್ನು ಒಪ್ಪಿದ ಮೇಲೆ ಹೋರ್ ಸೇರ್

ಡೀಲರ್‌ಗಳಿಗೂ ಕೂಡ ಇದೇ ರೀತಿ ಮಾಡದಿದ್ದರೆ ಅವರು ನಾಳೆ ಹೈಕೋರ್ಟಿಗೆ ಹೋಗುತ್ತಾರೆ, ಆವರಿಗೆ ಒಂದು ತತ್ವ ನಮಗೆ ಒಂದು ತತ್ವ, ಹೀಗೆ ಮಾಡಲಿಕ್ಕೆ ಆಗುವುದಿಲ್ಲ ಅಂತ ಅವರು ತಂಟೆ ಮಾಡಬಹುದು ಎಂದು ಹೇಳಿ ಬೆಂಗಳೂರು ಪಟ್ಟಣದಲ್ಲಿ ಅಕ್ಕಿ ಮತ್ತು ಗೋಧಿ ಮಾರಾಟ ಮಾಡುವುದಕ್ಕೆ ಖಾಸಗಿ ವ್ಯಕ್ತಿಗಳು 10 ಜನರು ಮತ್ತು ಕೋ-ಆಪರೇಟೀವ್ಸ್ 20 ಮೊದಲು ಯಾವ ರೀತಿ ಇತ್ತು ಅದೇ ರೀತಿ ಇಟ್ಟಿದ್ದೇವೆ.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಹೋರ್‌ಸೇರ್ ಏಜನ್ಸೀಸ್ 30 ಇವೆ ಅವನ್ನು ಸರ್ಕಾರದವರೇ ನಡೆಸುವುದರಲ್ಲಿ ಏನು ಕಷ್ಟ ಇದೆ?

ಶ್ರೀ ಬಿ. ಡಿ. ಜತ್ತಿ.—ಅದನ್ನು ಹೇಳುತ್ತೇನೆ. ನಕ್ಕರೆ ಮಾರಾಟ ಮಾಡುವಂತಹ ಹೋರ್ ಸೇರ್ ಡೀಲರ್ಸ್ ಬೆಂಗಳೂರಿನಲ್ಲಿ ಖಾಸಗಿ ವ್ಯಕ್ತಿಗಳು 7 ಜನ, ಸಹಕಾರ ಸಂಘಗಳು 5 ಇವೆ. ವೀಟ್ ಪ್ರಾಡಕ್ಟ್ಸ್, ಅಟ್ಟ, ಮೈದಾ, ಸೋಜಿ, ಇವುಗಳ ಮಾರಾಟ ಮಾಡುವುದಕ್ಕೆ ಖಾಸಗಿ ವ್ಯಕ್ತಿಗಳು 14, ಕೋಆಪರೇಟಿವ್ಸ್ 1 ಇವೆ. ಯಾರು ಸಹಕಾರ ಇರಾಖೆಯಲ್ಲಿ ಕೆಲಸ ಮಾಡುತ್ತಾ ಬಂದಿದ್ದಾರೆ ಅವರನ್ನು ಹೆಚ್ಚುಕಡಿದು ಮಾಡಬಾರದು ಅಂತ ಹೇಳಿ ಅವರನ್ನು ಹಾಗೆಯೇ ಇಟ್ಟಿದೆ. ಅವರನ್ನು ಕಡಿಮೆ ಮಾಡಬೇಕಾದರೆ ಒಂದು ಕಾರಣ ಇದೆ ಅದೇನೆಂದರೆ: ರೀಜೇಲರ್ಸ್ ಆಗಲಿ ಅಥವಾ ಹೋಲ್ ಸೇರರ್ಸ್ ಆಗಲಿ ಅವರು ಬ್ಲಾಕ್ ಮಾರ್ಕೆಟ್ ಮಾಡಿದರೆ ಮತ್ತು ರೈಸನ್ಸ್‌ನಲ್ಲಿ ನಮೂದಾಗಿರತಕ್ಕ ಶರತ್ತುಗಳನ್ನು ಏನಾದರೂ ತಪ್ಪು ಮಾಡಿದರೆ ಅವರ ಬಗ್ಗೆ ತಕರಾರುಗಳು ಬರುತ್ತವೆ. ಅಂತಹ ಸಂದರ್ಭದಲ್ಲಿ ಕಡಿಮೆ ಮಾಡಬಹುದು.

ಶ್ರೀಮಾನ್ ಗೋಪಾಲಗೌಡರು ಸರ್ಕಾರದವರೇ ನಡೆಸಲಿಕ್ಕೆ ಆಗುವುದಿಲ್ಲವೇ ಏನು ಕಷ್ಟ ಇದೆ, ಎಂದು ಕೇಳಿದರು. ಅನುಕೂಲಗಳು ಸಾಕಾದಷ್ಟು ಇರಬಹುದು, ಆದರೆ ನಾವೇ ಸ್ವಂತ ವ್ಯಾಪಾರ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಪುನಃ ಅಧಿಕಾರಿಗಳನ್ನು ನೇಮಕ ಮಾಡಬೇಕು. ಸಹಕಾರ ಸಂಘದ ಮುಖಾಂತರ ಅಥವಾ ಖಾಸಗಿ ವ್ಯಕ್ತಿಗಳ ಮುಖಾಂತರ ವ್ಯಾಪಾರ ನಡೆಸಿದಾಗ ಯಾವ ರೀತಿ ರೋಪಡೋಷಗಳು ಆಗುತ್ತವೆ ಅದೇ ರೀತಿ ನಮ್ಮಲ್ಲೂ ಆಗಬಹುದು, ಆ ಕಾಲಕ್ಕೆ ನಾವೇ ವ್ಯಾಪಾರ ನಡೆಸಿ, ನಾವೇ ಚೆಕ್ ಮಾಡಲಿಕ್ಕೆ ಆಗಲಿಕ್ಕಿಲ್ಲ. ಇನ್ನೊಬ್ಬರು ಮಾಡಿದರೆ ಅವರೇನಾದರೂ ತಪ್ಪು ಮಾಡಿದರೆ ಅವರನ್ನು ತಪ್ಪಿತಸ್ಥರನ್ನು ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬಹುದು, ಶಿಕ್ಷೆಮಾಡಬಹುದು, ಅವರು ಇಟ್ಟಿದ್ದ ಡಿಪಾಸಿಟ್‌ನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು. ನಾವೇ ಮಾಡಿದನಂತರ ಇಷ್ಟೊಂದು ಚೆಕ್ ಮಾಡುವುದಕ್ಕಾಗುವುದಿಲ್ಲ ಎಂದು ನಾವು ವಿಚಾರ ಮಾಡಿದ್ದೇವೆ. ಆದರೂಕೂಡ ಇದನ್ನು ಪ್ರಯೋಗ ಮಾಡಬೇಕೆಂದರೆ ಇದು ಸ್ವಲ್ಪ ವಿಚಾರ ಮಾಡಬೇಕಾದ ಅಂಶ, ಇದನ್ನು ವಿಚಾರ ಮಾಡುತ್ತೇನೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಾವು ಒಂದು ಲಸ್ಟ್ ಕೊಡಿ ಎಂದು ಕೇಳಿದಿರಿ ಅದನ್ನು ಕೊಟ್ಟಿದ್ದೇನೆ. ಹೋರ್‌ಸೇರ್ ಡೀಲರ್ಸ್‌ಗೆ ತಾವು ಕೊಡುತ್ತಾ ಇರತಕ್ಕ ಕಮಿಷನ್ ರೇಟ್ ಏನಿದೆ ಅದರ ಪರ್ಸೆಂಟೇಜ್ ಕಡಿಮೆ ಮಾಡುತ್ತೇನೆ ಎಂದು ಹೇಳಿದಿರಿ, ಆ ವಿಷಯ ಏನು ಮಾಡುತ್ತೀರಿ ಎಂಬುದನ್ನು ದಯವಿಟ್ಟು ಹೇಳಿ, ಸ್ಯಾಮಿ.

ಶ್ರೀ ಬಿ. ಡಿ. ಜತ್ತಿ.—ಒಂದು ಪರ್ಸೆಂಟ್‌ನಂತೆ ತೆಗೆದುಕೊಂಡು ಮಾಡುವಂತಹ ವ್ಯಕ್ತಿಗಳು ಯಾರಾದರೂ ಇದ್ದರೆ ಅವರ ಬಗ್ಗೆ ಪರೀಕ್ಷೆ ಮಾಡಿಸುತ್ತೇನೆ. ಯೋಗ್ಯವಾದುದ್ದು ಎಂದು ಹೇಳಿ ಕಂಡು ಬಂದರೆ ವಿಚಾರ ಮಾಡುತ್ತೇನೆ, ತಾವು ಯಾವ ತರಹದ ಸಂಶಯವನ್ನೂ ಪಡಬೇಕಾಗಿಲ್ಲ.

ಕಾಸ್ಟಿಂಗ್ ಸೈಡ್ ಬಗ್ಗೆ ಶ್ರೀಮಾನ್ ಜಿ.ಎ. ಗೌಡರು ಒಂದು ಪ್ರಶ್ನೆ ಕೇಳಿದರು. 4 ರೂಪಾಯಿ ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್ ಅಂತ ಹಾಕಿದ್ದೀರಿ ಬಡ್ಜೆಟ್‌ದೊಳಗೆ 50-54 ಲಕ್ಷ ರೂಪಾಯಿ ತೋರಿಸಿದ್ದೀರಿ ಇದು ಹೇಗೆ ಎಂದು ಕೇಳಿದರು. ಇದು ಹೇಗೆ ಎಂದರೆ, ಮೈಸೂರು ಡಿವಿಜನ್‌ದೊಳಗೆ ಫುಡ್ ಕಾರ್ಪೊರೇಷನ್‌ರವರು ಆಹಾರ ಧಾನ್ಯದ ಬಗ್ಗೆ ಸರ್ಕಾರದ ಪರವಾಗಿ, ಸರ್ಕಾರದವರ ಏಜೆಂಟ್ ಆಗಿ ಕೆಲಸ ಮಾಡುತ್ತಾ ಇದ್ದಾರೆ. ಒಂದು ರೂಪಾಯಿ ಎಸ್ಟಾಬ್ಲಿಷ್‌ಮೆಂಟ್ ಚಾರ್ಜ್ ಸರ್ಕಾರಕ್ಕೆ ಬರುತ್ತಾ ಇದೆ, ಒಂದು ರೂಪಾಯಿ ಕೋ-ಆಪರೇಟಿವ್ ಸೊಸೈಟಿಗೆ ಹೊಗುತ್ತಾ ಇದೆ. ಇನ್ನು ಒಂದು ರೂಪಾಯಿ 50 ಪೈಸೆ ಫುಡ್ ಕಾರ್ಪೊರೇಷನ್‌ಗೆ ಹೋಗುತ್ತಾ ಇದೆ, ಇನ್ನು ಉಳಿದ 50 ಪೈಸೆಯನ್ನು ಸರ್ಕಾರದವರೇ ಇಟ್ಟುಕೊಳ್ಳುತ್ತಾರೆ. ಮೈಸೂರು ಡಿವಿಜನ್ ಬಿಟ್ಟು ಇನ್ನು ಉಳಿದ 3 ಡಿವಿಜನ್‌ದೊಳಗೆ ಹೇಗೆ ಆಗುತ್ತಾ ಇದೆ ಎಂದರೆ ಒಂದು ರೂಪಾಯಿ ಸರ್ಕಾರಕ್ಕೆ ಬರುತ್ತಾ ಇದೆ, ಒಂದು ರೂಪಾಯಿ ಕೋಆಪರೇಟೀವ್ಸ್‌ಗೆ ಹೋಗುತ್ತಾ ಇದೆ. ಇನ್ನು ಉಳಿದ ಎರಡು ರೂಪಾಯಿನಲ್ಲಿ ಒಮ್ಮೊಮ್ಮೆ ಗನಿ ಬ್ಯಾಗ್ಸ್ ಕೊಂಡುಕೊಳ್ಳುತ್ತಾರೆ. ಕೊಂಡುಕೊಳ್ಳುವ ಕಾಲಕ್ಕೆ ಅದರ ಬೆಲೆ ಪ್ರತಿತಿಂಗಳೂ ಕೂಡ ಹೆಚ್ಚುಕಡಿಮೆ ಆಗುತ್ತದೆ, ಇದಲ್ಲದೇ ಟ್ರಾನ್ಸ್

(ಶ್ರೀ ಬಿ. ಡಿ. ಜತ್ತಿ)

ಪ್ರೋಡ್ಯೂಷನ್ ಚಾರ್ಜಸ್ ಕೂಡ ಬೀಳುತ್ತದೆ, ಇದೆಲ್ಲಾ ಹೋಗುತ್ತಾ ಉಳಿದದ್ದನ್ನು ಸ್ವೆಬಲೈಸೇಷನ್ ಫಂಡ್ ಬಿಲ್ಡಪ್ ಮಾಡಬೇಕೆಂದು ಸೂಚನೆ ಮಾಡಿದ್ದಾರೆ. ಇದನ್ನು ಸ್ಪಷ್ಟವಾಗಿ ಕೇಳಿದ್ದಾರೆ, ಸ್ಪಷ್ಟವಾಗಿ ಹೇಳಿದ್ದೇನೆ.

ಗ್ರಾಹಕರಿಗೆ ವಿತರಣೆ ಮಾಡುವಾಗ ನೀವು ತೋರಿಸಿದಂತಹ ಖರ್ಚು 20 ರೂಪಾಯಿ ಬಹಳ ಆಯಿತು ಅದನ್ನು ಕಡಿಮೆ ಮಾಡಬೇಕೆಂದು ಹೇಳಿದರು. ಉದಾಹರಣೆಗೆ ಜೋಳ ವಿಜಾಪುರದಿಂದ ತೆಗೆದುಕೊಂಡು ಬಂದು ಬೆಂಗಳೂರಿನಲ್ಲಿ ಮಾರಾಟ ಮಾಡಬೇಕಾದರೆ ಒಂದು ರೂಪಾಯಿನಂತೆ ಮಾರಾಟ ಮಾಡುತ್ತಾರೆ. ಅಲ್ಲೆ ಮಾರುವುದಾದರೆ 4 ಆಣೆಗೆ 6 ಆಣೆಗೆ ಮಾರಬಹುದು ಕಷ್ಟ ಇಲ್ಲ. ಲೆಕ್ಕ ಬರೆಯಬೇಕಾದರೆ ಏಜೆಂಟ್ ಬರೆಯಬೇಕು, ಕಮಿಷನ್ ಕೊಡಬೇಕು. ಅದನ್ನು ಚಾವಡಿಗೆ ಬಂದು ಕೊಂಡುಕೊಳ್ಳಲಿಕ್ಕೆ ಏಜೆಂಟ್ ಬೇಕು. ತಕ್ಕಡಿ, ಕಲ್ಲು, ಚೀಲ ಇವುಗಳನ್ನೆಲ್ಲಾ ಇಡುವಂತಹ ಏರ್ಪಾಡು ಮಾಡಬೇಕು. ಇದಕ್ಕೆ ಅವರಿಗೆ ಕಮಿಷನ್ ಕೊಡಬೇಕು. ಅವರು ಕೊಂಡುಕೊಂಡ ಮೇಲೆ ಒಂದು ವಾರ ಅದನ್ನು ಇಟ್ಟುಕೊಳ್ಳಬೇಕಾದ ಪ್ರಸಂಗ ಬಂದಲ್ಲಿ ಅದಕ್ಕೆ ಗೋಡೌನ್ ಮಾಡ ಬೇಕಾಗುತ್ತದೆ, ಅದಕ್ಕೆ ಬಾಡಿಗೆ ಕೊಡಬೇಕಾಗುತ್ತದೆ. 8 ತಿಂಗಳವರೆಗೆ ಆಹಾರವನ್ನು ಕಾದಿಡ ಬೇಕು. ಗೋಡೌನ್ ಚಾರ್ಜು ಕೊಡಬೇಕು, ಬಡ್ಡಿಯನ್ನು ಕೊಡಬೇಕು, ಇನ್ಶೂರೆನ್ಸ್ ಕೊಡಬೇಕು. ಫ್ಯೂಮಿಗೇಷನ್ ಮಾಡಬೇಕಾಗುತ್ತದೆ, ನಂತರ ರಿಟೈಲರ್ ವ್ಯಾಪಾರಿ ಮೂಲಕ ಆಹಾರವನ್ನು ಜನ ಗಳಿಗೆ ಹಂಚಬೇಕಾದರೆ 20 ರೂಪಾಯಿಗಳ ಖರ್ಚು ಬೀಳುತ್ತದೆ. ಇದಕ್ಕಿಂತ ಕಡಿಮೆ ಮಾಡುವುದ ಕ್ಕಾಗುವುದಿಲ್ಲ. ಆಲ್ಟರ್‌ನೇಟಿವ್ ಸ್ಕೀಮ್ ಏನಾದರೂ ಇದ್ದರೆ ನೀವು ಹೇಳಿದರೆ ಪರವಾಗಿಲ್ಲ. ಕಡಿಮೆ ಮಾಡುವುದಕ್ಕೆ ಸಾಧ್ಯವಿದೆ ಎಂದು ಹೇಳಿದರೆ ನಾವು ಒಪ್ಪುವುದಕ್ಕೆ ಸಿದ್ಧವಿದ್ದೇವೆ.

ಶ್ರೀ ಎಸ್. ಶಿವಪ್ಪ.—ಮಧ್ಯವರ್ತಿಗಳನ್ನು ತೆಗೆದುಹಾಕಬೇಕು.

ಶ್ರೀ ಬಿ. ಡಿ. ಜತ್ತಿ.—ಮಧ್ಯವರ್ತಿಗಳಿಗಿಂತ ಕಡಿಮೆ ಮಾಡುವುದಕ್ಕಾಗುವುದಿಲ್ಲ. ನೀವು ಕೊಡುವ ಸಲಹೆಗಳಲ್ಲಿ ಕೊಳ್ಳುವವರಿಗೆ ಕಡಿಮೆಯಾಗುವುದಕ್ಕೆ ಸಾಧ್ಯವಿರುವಂಥ ಸಲಹೆಗಳನ್ನು ಪುನರ್ವಿಮರ್ಶೆ ಮಾಡಿ ಕಡಿಮೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕೆಲವು ಸದಸ್ಯರುಗಳು ಆಹಾರ ಧಾನ್ಯ ವನ್ನು ಸಹಕಾರ ಸಂಘಗಳಿಗೆ ಕೊಡಬೇಕು ಎಂದು, ಕೆಲವು ಸದಸ್ಯರುಗಳು ವರ್ತಕರಿಗೆ ಕೊಡ ಬೇಕೆಂದು ಹೇಳಿದರು. ವರ್ತಕರು ಸಹ ಇರಬೇಕಾಗುತ್ತದೆ. ಆದರೆ ಅವರ ಮೇಲೆ ಸಾಕಷ್ಟು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ. ಸಹಕಾರ ಸಂಘಗಳ ಮೇಲೆ ಸಾಕಷ್ಟು ಕಂಟ್ರೋಲ್ ಇದೆ. ಅಂದರೆ 100ಕ್ಕೆ 100 ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತವೆ ಎಂದು ಹೇಳು ವುದಕ್ಕಾಗುವುದಿಲ್ಲ. ಕೆಲವು ಚೆನ್ನಾಗಿ ನಡೆಯುತ್ತವೆ, ಕೆಲವು ಚೆನ್ನಾಗಿ ನಡೆಯುವುದಿಲ್ಲ. ಯಾವ ಸಹಕಾರ ಸಂಘಗಳು ತಪ್ಪು ಮಾಡುತ್ತಿವೆ ಅಂತಹವುಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಯಾವ ಸಹಕಾರ ಸಂಘಗಳಿಗೆ ಹಣದ ಕೊರತೆ ಇದೆಯೋ ಅಂಥವುಗಳನ್ನು ನಿಲ್ಲಿಸಿ, ಸರ್ಕಾರದವರೇ ನೇರವಾಗಿ ನಡೆಸುವುದಕ್ಕೆ ಏರ್ಪಾಡು ಮಾಡುತ್ತೇವೆ. ಆದರೆ ಖಾಸಗೀ ವರ್ತಕರ ಮೇಲೆ ಈ ರೀತಿಯ ಹತೋಟಿ ಇಡುವುದಕ್ಕಾಗುವುದಿಲ್ಲ. ವರ್ತಕರಿಗೆ ಬೇಕಾದರೆ ಲೈಸೆನ್ಸ್ ಕ್ಯಾನ್ಸಲ್ ಮಾಡ ಬಹುದು, ಅಥವಾ ಕ್ರಿಮಿನಲ್ ಕೇಸ್ ಹಾಕಬಹುದು, ಇದಕ್ಕಿಂತ ಹೆಚ್ಚು ಮಾಡುವುದಕ್ಕಾಗುವುದಿಲ್ಲ. ಆದರೆ ಒಂದು ಅಂಗಡಿಯನ್ನು ಮುಚ್ಚಿಸಿದರೆ, ಅಲ್ಲಿ ಆಹಾರವನ್ನು ಕೊಂಡುಕೊಳ್ಳುವ ಜನರಿಗೆ ಅನಾನುಕೂಲವಾಗುತ್ತದೆ. ಯಾವ ಅಂಗಡಿಗಳು, ಯಾವ ಸೊಸೈಟಿಗಳು ಸರಿಯಿಲ್ಲವೆಂದು ಹೇಳಿದರೆ ಸರಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಆಹಾರದ ವಿತರಣೆ ಬಗ್ಗೆ ಇಷ್ಟು ಆಯಿತು.

ಮೈಸೂರು ರಾಜ್ಯದಲ್ಲಿ ಆಹಾರವಿಲ್ಲದೆ ಸತ್ತರು ಎಂದು ಹೇಳಿದರು. ಹುಟ್ಟಿದವರು ಸಾಯಲೇ ಬೇಕು. ಆದರೆ ಆಹಾರ ಸಿಕ್ಕದೆ ಸತ್ತಿದ್ದಾರೆ ಎಂದು ಹೇಳಿದರೆ ನಾನು ಒಪ್ಪಲಾರೆ. ಎಲ್ಲರಿಗೂ ಆಹಾರ ಸಿಕ್ಕುವ ಹಾಗೆ ಏರ್ಪಾಡು ಮಾಡಲಾಗಿದೆ. ಯಾರಿಗೂ ಸರಿಯಾಗಿ ಸಿಗುತ್ತಿಲ್ಲ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ಆಹಾರವನ್ನು ತರಿಸಿಕೊಡುವುದಕ್ಕೆ ಹಣದ ಕೊರತೆ ಬರುವುದಿಲ್ಲ ವೆಂದು ತಿಳಿದುಕೊಂಡಿದ್ದೇನೆ.

ಸ್ಕೇರ್‌ಸಿಟಿ ವಿಚಾರದ ಬಗ್ಗೆ ಶ್ರೀ ರೇವಣಸಿದ್ದಪ್ಪನವರು ಒಂದು ಮಾತನ್ನು ಹೇಳಿದರು. ಒಂದು ಗೆಡ್ಡೆಯನ್ನು ತೆಗೆದುಕೊಂಡು ಬಂದು ಚೆನ್ನಾಗಿ ಪ್ರದರ್ಶನ ಮಾಡಲಿಕ್ಕೆ ಪ್ರಯತ್ನಪಟ್ಟರು. ಮಾರ್ಕೆಟ್‌ನಲ್ಲಿ ತಂದರೋ, ಅಥವಾ ಯಾರಾದರೂ ಕೊಟ್ಟರೋ ಗೊತ್ತಿಲ್ಲ, ಅಂತೂ ಪ್ರದರ್ಶನ ಮಾಡಿದರು. ಅವರು ಈ ರೀತಿಯ ಕೆಲಸದಲ್ಲಿ ಪ್ರಾವೀಣ್ಯತೆ ಪಡೆದಿದ್ದಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಬೇಕಾದರೆ ನಮ್ಮ ಊರಿಗೆ ಬನ್ನಿ, ತೋರಿಸುತ್ತೇನೆ, ಇದು ಮಾರ್ಕೆಟ್‌ನಲ್ಲಿ ತಂದದ್ದಲ್ಲ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರಿಗೆ ಕೇಳುವ ಹಕ್ಕು ಹೇಗೆ ಇದೆಯೋ, ಅದೇ ರೀತಿ ಉತ್ತರ ಹೇಳುವುದಕ್ಕೆ ನಮಗೂ ಹಕ್ಕು ಇದೆ. ಆದರೆ ನೀವು ಹೇಳುವ ವಿಚಾರ ಯಾವ ಪೇಪರ್‌ನಲ್ಲೂ ಬಂದಿಲ್ಲ. ನಿಮ್ಮ ತಾಲ್ಲೂಕಿನ ಬಗ್ಗೆ ಹೇಳಬೇಕಾದರೆ, ತಿಪಟೂರಿನಲ್ಲಿ ಸಾವಿರ ಜನ ಕೆಲಸ ಮಾಡುವ 2 ಸ್ಕೇರ್‌ಸಿಟಿ ವರ್ಕ್ಸ್ ತೆಗೆದುಕೊಂಡಿದ್ದೇವೆ. ಅದು ಈಗಾಗಲೆ ನಡೆಯುತ್ತಿದೆ. ನಧ್ಯಕ್ಕೆ 108 ಜನ ಮಾತ್ರ ಕೆಲಸ ಮಾಡುವುದಕ್ಕೆ ಬರುತ್ತಿದ್ದಾರೆ. ಸಾಕಷ್ಟು ಜನರು ಬರುತ್ತಿಲ್ಲ. ಸಾವಿರಾರು ಜನರು ಬಂದರೂ ಕೆಲಸ ಕೊಡಲು ತಯಾರಿದ್ದೇವೆ.

ಶ್ರೀ ಎಸ್. ಶಿವಪ್ಪ.—ಜಾಸ್ತಿ ಕೆಲಸಗಳನ್ನು ಮಾಡಿಸಿದರೆ ಜನರು ಸಹ ಹೆಚ್ಚು ಬರುತ್ತಾರೆಂದು ಅವರು ಹೇಳುವುದು.

ಶ್ರೀ ಬಿ. ಡಿ. ಜತ್ತಿ.—ಈಗ ತೆಗೆದುಕೊಂಡಿರುವ ಎರಡು ಕೆಲಸಗಳಿಗೆ ಜನರು ಸಾಕಷ್ಟು ಬರುತ್ತಿಲ್ಲ. ಹೆಚ್ಚು ಜನರನ್ನು ಅವರು ಕರೆದುಕೊಂಡು ಬಂದರೆ ಕೆಲಸ ಕೊಡಲು ತಯಾರಿದ್ದೇವೆ. ಮತ್ತು ಆಹಾರವನ್ನು ಒಬ್ಬರಿಗೆ 10 ಕೆ.ಜಿ.ವರೆಗೆ ಕೊಡುವುದಕ್ಕೆ ಸಿದ್ದರಿದ್ದೇವೆ. ಅದು ಬಿಟ್ಟು ಸುಮ್ಮನೆ ಪ್ರಶ್ನೆ ಮಾಡಿದರೆ, ಟೀಕೆ ಮಾಡಿದರೆ ಜನರ ಕಲ್ಯಾಣ ಮಾಡಿದಹಾಗೆ ಆಗುವುದಿಲ್ಲ ಎಂದು ತಿಳಿದುಕೊಳ್ಳಬೇಕು.

ಇನ್ನು ಶಿರಾ ತಾಲ್ಲೂಕಿನಲ್ಲಿ 54 ಕೆಲಸಗಳು ಸ್ಯಾಂಕ್ಷ್ ಆಗಿದೆ. 24 ಕೆಲಸಗಳು ನಡೆಯುತ್ತಿವೆ. 1126 ಜನರು ಕೆಲಸಕ್ಕೆ ಬರುತ್ತಿದ್ದಾರೆ. ಇನ್ನೂ ಹೆಚ್ಚಿಗೆ ಜನ ಕೆಲಸಕ್ಕೆ ಬಂದರೆ ಕೆಲಸ ಕೊಡಲು ಮತ್ತು ಆಹಾರ ಧಾನ್ಯವನ್ನು ಒದಗಿಸುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಮಂತ್ರಿಗಳು ಹೇಳುವುದು ಸರಿಯಲ್ಲ. ನಮ್ಮ ತಾಲ್ಲೂಕಿಗೆ ಸ್ಕೇರ್‌ಸಿಟಿ ವರ್ಕ್ಸ್‌ಗೆ ಕೇವಲ 5 ಸಾವಿರ ರೂಪಾಯಿಗಳನ್ನು ನವೆಂಬರ್, ಡಿಸೆಂಬರ್ ನಲ್ಲಿ ಕೊಟ್ಟಿದ್ದರು. ಈಗ ಕೊಟ್ಟಿಲ್ಲ. ಜನರು ಕೆಲಸವಿಲ್ಲದೆ, ಆಹಾರವಿಲ್ಲದೆ 28-29 ಜನ ಸತ್ತಿದ್ದಾರೆ.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಮುಕ್ಕಣ್ಣಪ್ಪನವರು ಹೇಳುವುದು ಸರಿಯಲ್ಲ ಎಷ್ಟು ಕೆಲಸ ಬೇಕಾದರೂ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ. ಕೇಂದ್ರ ಸರ್ಕಾರದವರು ಈ ರೀತಿಯ ಕೆಲಸ ಗಳಿಗೆ ಹಣ ಕೊಡುತ್ತೇವೆಂದು ಹೇಳಿದ್ದಾರೆ. ಎಲ್ಲೆಲ್ಲಿ ಕೆಲಸ ತೆಗೆದುಕೊಳ್ಳಬೇಕು ಎಂದು ಹೇಳಿದರೆ ಅಲ್ಲಿ ತೆಗೆದುಕೊಳ್ಳಲು ತಯಾರಾಗಿದ್ದೇವೆ. ಜನರು ಬಂದು ಅದರ ಉಪಯೋಗ ತೆಗೆದು ಕೊಳ್ಳಬೇಕು.

ಶ್ರೀ ಜಿ. ವಿ. ಗೌಡ (ಪಾಳ್ಯ).—ನವೆಂಬರ್, ಡಿನೆಂಬರ್ ತಿಂಗಳುಗಳಲ್ಲಿ ಅಭಾವ ಪರಿಸ್ಥಿತಿ ಇರುವ ಕಡೆಗಳಲ್ಲಿ ಕೇವಲ 5-10 ಸಾವಿರ ರೂಪಾಯಿಗಳ ಕೆಲಸಗಳನ್ನು ತೆಗೆದುಕೊಂಡಿದ್ದೀರಿ, ಈಗ ಒಂದೊಂದು ತಾಲ್ಲೂಕಿನಲ್ಲೂ 40—50 ಸಾವಿರ ರೂಪಾಯಿಗಳ ಮಿನಿಮಮ್ ಕೆಲಸವನ್ನು ತೆಗೆದು ಕೊಂಡು ಜನರಿಗೆ ಅನುಕೂಲ ಮಾಡಿಕೊಡಬೇಕು. ಇದರ ಬಗ್ಗೆ ಒಂದು ಸರ್ಕಾರಿ ಆರ್ಡರನ್ನು ಈ ತಿಂಗಳಲ್ಲೇ ಮಾಡಬೇಕು.

ಅಧ್ಯಕ್ಷರು.—ನುಮ್ಮನೆ ಪ್ರಶ್ನೆ ಹಾಕುತ್ತೀರಿ, ಜನಗಳಿಗೆ ಕೆಲಸ ಕೊಡಿಸಬೇಕು ಎಂದು ನೀವು ಹೇಳುತ್ತೀರಿ. ಎಷ್ಟು ಜನರು ಬೇಕಾದರೂ ಬರಲಿ, ಕೆಲಸ ಕೊಡಿಸುತ್ತೇವೆ ಎಂದು ಅವರು ಹೇಳು ತ್ತಾರೆ. ಒಂದೇ ಪ್ರಶ್ನೆಯನ್ನು ಮೂರು ಮೂರು ಸಾರಿ ಹಾಕುವುದು ಸರಿಯಲ್ಲ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಮಾನ್ಯ ಮಂತ್ರಿಗಳಾದ ಜತ್ತಿಯವರು ನನ್ನ ಜೊತೆಯಲ್ಲಿ ಬರಲಿ, ಎಷ್ಟು ಜನರನ್ನು ಬೇಕಾದರೂ ಕೊಡಿಸುತ್ತೇನೆ.

ಶ್ರೀ ಬಿ. ಡಿ. ಜತ್ತಿ.—ಇವತ್ತು ಶ್ರೀ ಯಾರ್ಡಿಯವರು ಪ್ರೆಸ್‌ನಲ್ಲಿ ಕೊಟ್ಟಿರುವ ಹೇಳಿಕೆ ಪ್ರಕಾರ ಅದು ಮೈಸೂರು ಸಂಸ್ಥಾನದಲ್ಲಿರುವ 1800 ಹಳ್ಳಿಗಳಿಗೆ ಅನ್ವಯಿಸುತ್ತದೆ. ಅದರ ಪ್ರಕಾರ ಎಲ್ಲೆಲ್ಲ ಕೆಲಸಗಳನ್ನು ತೆಗೆದುಕೊಳ್ಳಬೇಕೋ ಅಲ್ಲಿ ತೆಗೆದುಕೊಳ್ಳುವುದಕ್ಕೆ ತೀರ್ಮಾನ ಮಾಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೇಂದ್ರ ಸರ್ಕಾರದವರು 1800 ಹಳ್ಳಿಗಳಲ್ಲಿ ಕೆಲಸ ತೆಗೆದು ಕೊಳ್ಳುವುದಕ್ಕೆ ಎಷ್ಟು ಹಣವನ್ನು ಮೈಸೂರು ಸರ್ಕಾರಕ್ಕೆ ಕೊಡುತ್ತಾರೆ ?

Sri B. D. JATTI.—We have received a copy of the Yardi Report The Government of India also has received the Report. We are going to take action as suggested by Mr. Yardi. There is no difficulty in starting new works. We have got sufficient money and we will get more money. The Government has got a list of the names of the works to be taken in scarcity areas. The Hon'ble Members must come to the help of the Government in suggesting any new works to be under taken. Let

(SRI B. D. JATTI)

them provide people for the works. When the Government undertakes a work and if people do not come to work there, then it may become difficult for us to make out a case with the Government of India. Therefore, that responsibility of supplying workers also depends upon the Hon'ble Member.

† SRI S. SIVAPPA.—The Hon'ble Minister was pleased to state that the Government is prepared to afford opportunities for any number of people who can come to work in the scarcity areas. But the fact is, in those areas where scarcity is prevailing, work is not available and the works suggested by the local bodies, tahsildars or taluk boards, have not been taken up for want of funds. The Deputy Commissioner says that the funds available are exhausted and that they are thinking not to take up those works unless fresh allotments are made by the Government. That is the situation prevailing at present. But the Hon'ble Minister is giving a different version. I therefore request the Government to let us know what is the actual amount you have placed at the disposal of the various Deputy Commissioners in the various districts. We want the correct details, so that we can appraise the situation to the local Deputy Commissioners and ask them to take up those works. Just generalising that you would give anything will not solve the problem.

SRI B. D. JATTI.—The position explained by the Hon'ble Member was correct some time back. We are only waiting for the report. We have received the report and it has been submitted to the Government. After considering the same, the Government of India has been kind enough to agree to give up to three crores of rupees. So there is no difficulty in respect of money. We have already drawn detailed schemes of scarcity works to be attended to. There is a special officer appointed and we are prepared to start any number of works. We have sufficient money—(*Interruption*) and we can take up from today even.

ಶ್ರೀ ಪಿ. ವೆಂಕಟಗಿರಿಯಪ್ಪ.—ನೀರಾವರಿ ಬಾವಿಗೆ ಹೆಚ್ಚು ಹಣ ಕೊಡುವುದರಿಂದ ಅತ್ಯುತ್ತಮ ರಿಲೀಫ್ ಕೆಲಸ ಮಾಡಿದ ಹಾಗೆ ಆಗುತ್ತದೆ. ಇದರಿಂದ ಪರ್ಮನೆಂಟಾಗಿ ಇಂಪ್ರೂವ್ ಆಗುತ್ತವೆ. ಕೋರಾರ ಜಿಲ್ಲೆಯಲ್ಲಿ ಬಾವಿ ಕೆಲಸ ತೆಗೆದುಕೊಳ್ಳುವುದು ಅವಶ್ಯಕವಿರುವುದರಿಂದ ಒಂದು ತಾಲ್ಲೂಕಿನಲ್ಲಿ 150 ನೀರಾವರಿ ಬಾವಿ ಮಾಡಲು ಹೆಚ್ಚು ಹಣ ಕೊಡುವುದು ಸಾಧ್ಯವಿದೆಯೇ ?

ಶ್ರೀ ಬಿ. ಡಿ. ಜತ್ತಿ.—ಇದಕ್ಕೆ ಉತ್ತರ ಕೊಟ್ಟಾಗ ಮಾನ್ಯ ಸದಸ್ಯರು ಈ ಸಭೆಯಲ್ಲಿ ಇರಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಬೆಂಗಳೂರಿನಲ್ಲಿ 10 ಜನ ಖಾಸಗಿಯವರಿಗೆ 5 ಸಹಕಾರ ಸಂಘಗಳಿಗೆ ಧಾನ್ಯ ಹಂಚುವಿಕೆ ಕೆಲಸವನ್ನು ಕೊಟ್ಟಿರುವಿರಿ. ಎಲ್ಲ ಪದಾರ್ಥಗಳ ಡೀಲರ್ ಮಾಡುವುದಕ್ಕೆ ಹೋಲ್ ಸೇಲರ್ಸರಿಗೆ ಅವಕಾಶ ಮಾಡಿ ಕೊಟ್ಟರೆ ಸರಕಾರಕ್ಕೆ ಕಷ್ಟ ಎನೂ ಆಗುವುದಿಲ್ಲ ಅಲ್ಲವೇ !

ಶ್ರೀ ಬಿ. ಡಿ. ಜತ್ತಿ.—ಇನ್ನು ಮುಂದೆ ಹೋಲ್ ಸೇಲ್ ಡೀಲ್ ಮಾಡುವುದನ್ನು ಸಹಕಾರ ಸಂಘಗಳಿಗೆ ಕೊಡಬೇಕೆಂದು ಇದೆ. ಖಾಸಗಿ ವ್ಯಕ್ತಿಗಳಿಗೆ ಕೊಡುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಮೊದಲನೆಯದಾಗಿ ರಾಜ್ಯ ಸರಕಾರ ಗೋದಿ ಅಕ್ಕಿ ವಲಯ ರದ್ದು ಪಡಿಸುವ ಬಗ್ಗೆ ಏನು ನೀತಿ ಇಟ್ಟುಕೊಳ್ಳರಾಗುವುದು ತಿಳಿಸಿಲ್ಲ, ಅದನ್ನು ತಿಳಿಸಬೇಕು. ಎರಡನೆಯದು 10 ಜನ ಖಾಸಗಿ ಹೋಲ್ ಸೇಲರ್ಸ್ ತೆಗೆದು ಹಾಕಿರುವುದರ ಬಗ್ಗೆ ಪರಿಶೀಲನೆ ಮಾಡುತ್ತಾರೆಯೇ ! ಮೂರನೆಯದಾಗಿ ಎಲ್ಲ ಜಿಲ್ಲೆಗಳಿಗೆ ಇಷ್ಟು ಟನ್ ಧಾನ್ಯ ಎಂದು ಇನ್ಯೂ ಮಾಡುತ್ತಾರೆ ಆದರೆ ಅದು ಜನಕ್ಕೆ ಮುಟ್ಟುತ್ತದೆಯೇ ಇಲ್ಲವೇ ಮಧ್ಯೆ ಎನಾಗುತ್ತದೆ ಎಂಬುದನ್ನು

ನೋಡುವುದಕ್ಕೆ ಒಂದು ವ್ಯವಸ್ಥೆ ಇದೆಯೇ? ನಾಲ್ಕನೆಯದಾಗಿ ಗ್ರಾಮಾಂತರ ಪ್ರದೇಶದಲ್ಲಿ ಅಕ್ಕಿ ಕೊಟ್ಟಿಲ್ಲ. ಸರಕಾರಕ್ಕೆ ಕಷ್ಟ ಇದೆ ಎಂದು ಹೇಳಿದ್ದಾರೆ. ಇದಕ್ಕಾಗಿ ಪಂಚಾಯತಿ ಮೂಲಕ ಅಥವಾ ಸೊಸೈಟಿಗಳ ಮೂಲಕ ಎನಾದರೂ ಒಂದು ಕ್ರಮ ತೆಗೆದುಕೊಳ್ಳಲು ಸಾಧ್ಯವೆ? ಇದಕ್ಕೆ ಭರವಸೆ ಕೊಡಬೇಕು.

ಇನ್ನು ಕೊನೆಯದಾಗಿ ಉಚಿತ ಧಾನ್ಯ ಹಂಚುವಿಕೆಯ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದನ್ನು ರೆವೆನ್ಯೂ ಇಲಾಖೆಯವರು ಮಾಡುತ್ತಾರೋ ಅಥವಾ ಪಂಚಾಯತಿ ಸಹಾಯದಿಂದ ಮಾಡುತ್ತೀರಾ? ಇಂಥ ಜನರ ಪಟ್ಟಿ ಹೇಗೆ ಮಾಡುತ್ತೀರಿ? ಧಾನ್ಯ ಕಳಿನುವುದಕ್ಕೆ ಏನು ಮಾಡಿದ್ದೀರಿ? ಖಚಿತವಾಗಿ ಯಾರು ಮೂಲಕ ಸಾವಿರ ಟನ್ನು ಧಾನ್ಯ ಹಂಚುತ್ತೀರಿ? ಒಂದು ವೇಳೆ ಇದು ಕಡಿಮೆ ಬಿದ್ದರೆ ಏನು ಮಾಡುತ್ತೀರಿ ದಯವಿಟ್ಟು ತಿಳಿಸಬೇಕು.

ಶ್ರೀ ಬಿ. ಡಿ. ಜತ್ತಿ.—ಮಾನ್ಯ ಸದಸ್ಯರ ಕೊನೆಯ ಪ್ರಶ್ನೆಗೆ ಉತ್ತರ ಹೇಳುವುದಾದರೆ ಈ ಹಂಚಿಕೆಯ ಬಗ್ಗೆ ಸರಕಾರದ ಸಂಪೂರ್ಣವಾಗಿ ಯೋಚನೆ ಮಾಡಿಲ್ಲ. ನಮ್ಮ ನಿರ್ಣಯವನ್ನು ಅಸೆಂಬ್ಲಿಯ ಮುಂದೆ ಹೇಳಬೇಕೆಂದು ಇದನ್ನು ಹೇಳಿದ್ದೇವೆ. ಚೆನ್ನಾಗಿ ಇರತಕ್ಕ ಸಲಹೆ ಕೊಟ್ಟರೆ ಅದನ್ನು ತೆಗೆದುಕೊಳ್ಳುತ್ತೇವೆ. ಡೀಟೇರ್ಡ್ ಸ್ಕೀಂ ಸರಕಾರ ತಯಾರು ಮಾಡುತ್ತದೆ. ಇನ್ನು ಗ್ರಾಮಾಂತರ ಪ್ರದೇಶಕ್ಕೆ ಅಕ್ಕಿ ಕೊಡಬೇಕೆಂದು ಸರಕಾರದ ಮನಸ್ಸಿನಲ್ಲಿ ಇದ್ದರೂ ಕೂಡ ಇಂದಿನ ಪರಿಸ್ಥಿತಿಯಲ್ಲ ಕಷ್ಟ ಇರುವುದರಿಂದ ಸಾಧ್ಯ ಎಂದು ಕಾಣುವುದಿಲ್ಲ. ನನ್ನ ಮುಂದೆ ಹೋರ್ ಸೇರ್ ಡೀಲರ್ಸ್ ಖಾನಗಿ ವ್ಯಕ್ತಿಗಳಿಗೆ ಕೊಡುವುದನ್ನು ಕಡಿಮೆ ಮಾಡಿ ಕೇವಲ ಸಹಕಾರ ಸಂಘಗಳಿಗೆ ಇದನ್ನು ಕೊಡಬೇಕೆಂದು ಮಾಡಿದೆ. ಇನ್ನು ಸದರನ್ ಜೋನಿನಲ್ಲಿ ನಾಲ್ಕೂ ಸ್ಟೇಟುಗಳಿಗೆ ಒಂದೇ ರೀತಿಯಾಗಿ ಇರಬೇಕು, ಒಂದೊಂದು ಸ್ಟೇಟಿಕ್ಕೆ ಒಂದೊಂದು ರೀತಿಯಲ್ಲಿ ಇರಬಾರದು, ನಿಜ. ಮೈನೂರು ಸರಕಾರ ಅನೇಕ ಸಲ ಸದರನ್ ಜೋನು ಒಂದೇ ಇರಬೇಕು. ಎಂದು ಪ್ರಯತ್ನ ಮಾಡಿದೆ. ಇದಕ್ಕೆ ಇದು ವರೆಗೆ ಯಶಸ್ಸು ಸಿಕ್ಕಿಲ್ಲ. ಇದರ ಬಗ್ಗೆ ಕೇಂದ್ರ ಸರಕಾರ ವಿಚಾರ ಮಾಡುತ್ತಿದ್ದಾರೆ.

ಶ್ರೀ ಎಚ್. ಆರ್. ಕೇಶವಮೂರ್ತಿ (ಗಂಡಸಿ).—ಕೇಂದ್ರ ಸರಕಾರದ ನಮಿತಿಯವರು ತುಮಕೂರು ಚಿತ್ರದುರ್ಗ ಜಿಲ್ಲೆಗಳಿಗೆ ಬೇಟಿ ಕೊಟ್ಟರು ಆದರೆ ಹಾಸನ ಜಿಲ್ಲೆ ಕೈ ಬಿಟ್ಟರು. ಬರುತ್ತೇವೆಂದು ಹೇಳಿದ್ದರು ಆದರೆ ಬರಲಿಲ್ಲ. ಹಾಗಾದರೆ ಹಾಸನ ಹೋಳೆನರಸೀಪುರ ಅರಸೀಕೆರೆ ಈ ನಗರಗಳಿಗೆ ಬೇಟಿ ಕೊಡದೆ ಅವರು ರಿಪೋರ್ಟು ಹೇಗೆ ಕೊಟ್ಟರು? ಅವರು ಫ್ಯಾಮಿನ್ ಕಂಡಿಷನ್ಸ್ ಬಗ್ಗೆ ಅಂಡರ್ ಎಸ್ಟಿಮೇಟು ಮಾಡಿದ್ದಾರೆ ಎಂದು ವರ್ತಮಾನ ಬಂದಿದೆ. ಫ್ಯಾಮಿನ್ ಕಂಡಿಷನ್ಸ್ ಬಗ್ಗೆ ಹಾಸನ ಜಿಲ್ಲೆಯಲ್ಲ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಸರಕಾರದ ಪಾಲಸಿ ಎನು ಇದೆ?

ಶ್ರೀ ಬಿ. ಡಿ. ಜತ್ತಿ.—ಯಾರ್ದಿ ಕಮಿಟಿಯವರು ಭೇಟಿ ಕೊಟ್ಟ ಸ್ಥಳಕ್ಕೆ ಅಷ್ಟೇ ರಿಲೀಫ್ ಕೊಡುತ್ತೇವೆಂದು ಹೇಳಲ್ಲಲ್ಲ. ಅವರು ಇಡೀ ಸ್ಟೇಟ್‌ದ ಪ್ರತಿಯೊಂದು ಗ್ರಾಮಕ್ಕೆ ಹೋಗಲು ಸಾಧ್ಯವಿರಲಲ್ಲ. ಕೆಲವು ಟೆಸ್ಟ್ ಕೇಸನ್ ಮಾಡಿದ್ದಾರೆ. ನಮ್ಮ ಸ್ಪೆಷಲ್ ಆಫೀನರ್ ಕೂಡ ರಿಪೋರ್ಟು ಮಾಡಿದ್ದಾರೆ. ಆದುದರಿಂದ ಸಹಾಯ ಮಾಡುತ್ತೇವೆ.

12-00 NOON

ಶ್ರೀ ಎಸ್. ನುಬ್ಬಯ್ಯನಾಯಕ್ (ಸೂಳ್ಯ).—ರೈತರು ಹೆಚ್ಚು ಬೆಳೆಯಲು ಮತ್ತು ದೇಶಕ್ಕೆ ನರಬರಾಯವಾಡಲು ಪ್ರೋತ್ಸಾಹ ಕೊಡಲು ಅವರು ಬೆಳೆದ ಧಾನ್ಯಕ್ಕೆ ಹೆಚ್ಚು ಬೆಲೆ ಕೊಟ್ಟು ಭದ್ರತೆ ಕೊಡಲು ಯೋಚನೆಮಾಡುತ್ತಿರಾ?

• ಶ್ರೀ ಬಿ. ಡಿ. ಜತ್ತಿ.—ಈ ವರ್ಷದಮಟ್ಟಿಗೆ ಇದುವರೆಗೆ ಇರುವ ನೀತಿಯನ್ನೇ ಅನುಸರಿಸಿ ಮುಂದಿನ ವರ್ಷ ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲಿಸುವುದಾಗಿ ಆಗಲೇ ಹೇಳಿದ್ದೇನೆ.

ಶ್ರೀ ವಿ. ಮುನಿಯಪ್ಪ.—ರೈಸ್ ಮಿಲ್ಲುಗಳಿಗೆ ತಾವು ಕೊಡುವ ಬತ್ತಕ್ಕೂ ಅಲ್ಲಿಂದ ಮಿಲ್ಲಿನವರು ಅಕ್ಕಿ ಕೊಡುವಾಗ ಕೊಡುವ ಇಳುವರಿಗೂ ಬಹಳ ವೆತ್ಯಾಸವಿದೆ. ಇದರಿಂದ ಮಿಲ್ಲಿನವರಿಗೆ ಬಹಳ ಅನುಕೂಲವಿದೆ, ರೈತರಿಗೆ ತೊಂದರೆಯಾಗುತ್ತದೆ ಎಂದು ಹೇಳಿದೆ. ಆ ವಿಚಾರದಲ್ಲಿ ಜವಾಬು ಹೇಳಲಿಲ್ಲ.

ಶ್ರೀ ಬಿ. ಡಿ. ಜತ್ತಿ.—ಮೊದಲು ಮಿಲ್ಲಿನವರು ಸೇಕಡ ಅರವತ್ತಾರು—ಮೂರನೆಯ ಎರಡು ಭಾಗ ಕೊಡುತ್ತಿದ್ದರು. ಈಗ ಸೇಕಡ 70 ಅಥವ 71 ರಷ್ಟು ಇಳುವರಿ ಕೂಡ ಬೇಕೆಂದು ತಿಳಿಸಲಾಗಿದೆ.

Mr. SPEAKER.—The question is:

"That the respective sums not exceeding the amounts mentioned in Demand No. 15 and 53 may be granted to Government, to defray the charges which will come in course of payment during the financial year for the period ending 31st day of March 1967.

Sri S. GOPALA GOWDA.—I demand a Poll, Sir.

Mr. SPEAKER.—I will now put the Demands Separately. The question is:

"That a sum not exceeding Rs. 1,61,85,000 be granted to the Government to defray the charges which will come in course of payment during the financial year for the period ending 31st day of March 1967, in respect of 'Miscellaneous Departments'."

Sri A. KRISHNA SHETTY (Mangalore II).—I demand a poll, Sir.

The House divided, The motion was passed 58 Members voting for and 20 against.

Mr. SPEAKER.—The question is:

"That a sum not exceeding Rs. 19,35,82,000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital outlay on Schemes of Government Trading'."

The motion was adopted.

Sri C. J. MUCKANNAPPA.—Sir, In view of the reply not coming forward from the Government regarding miscellaneous information, weights and measures and tourism as a protest against the attitude, of the Government, we stage a walk-out.

(At this stage Sri C. J. Muckannappa and a few Members of the Opposition left the House.)

DEMAND Nos. 14, 16, 24 and 44.

Sri K. MALLAPPA (Minister for Industries and Commerce).—Sir On the recommendation of the Governor of Mysore. I beg to move:

"That a sum not exceeding Rs. 1,04,97,000 be granted to the Government to defray the charges which will come in course of payment during the financial year for the period ending 31st day of March 1967, in respect of 'Supplies and Disposals'."

"That a sum not exceeding Rs. 17,84,000 be granted to the Government to defray the charges which will come in course of payment during the financial year for the period ending 31st day of March 1967, in respect of 'Education'."

"That a sum not exceeding Rs. 12,52,51,000 be granted to the Government to defray the charges which will come in course of payment during the financial year for the period ending 31st day of March 1967, in respect of Industries'."

"That a sum not exceeding Rs. 4,02,86,000 be granted to the Government to defray the charges which will come in course of payment during the financial year for the period ending 31st day March 1967 in respect of 'Capital Outlay on Industrial and Economic Development'."

MR. SPEAKER.—Motion moved :

"That a sum not exceeding Rs. 1,04,97,000 be granted to the Government to defray the charges which will come in course of payment during the financial year for the period ending 31st day of March 1967, in respect of "Supplies and Disposals'."

"That a sum not exceeding Rs. 17,84,000 be granted to the Government to defray the charges which will come in course of payment during the financial year for the period ending 31st day of March 1967, in respect of 'Scientific Departments'."

"That a sum not exceeding Rs. 12,52,51,000 be granted to the Government to defray the charges which will come in course of payment during the financial year for the period ending 31st day of March 1967, in respect of 'Industries'."

"That a sum not exceeding Rs. 4,02,86,000 be granted to the Government to defray the charges which will come in course of payment during the financial year for the period ending 31st day of March 1967, in respect of 'Capital Outlay on Industrial and Economic Development'."

ಶ್ರೀ ಹೆಚ್. ಆರ್. ಕೇಶವಮೂರ್ತಿ.—ಮಾನ್ಯ ಸಭಾಧ್ಯಕ್ಷರೇ, ಈ ದಿವಸ ನಮ್ಮ ಮುಂದಿರ ತಕ್ಕ ಸಪ್ಲೈಸ್ ಅಂಡ್ ಡಿಸ್ಪೋಸಲ್ಸ್ ಮುಂತಾದ ಡಿಮ್ಯಾಂಡುಗಳನ್ನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ಹೇಳಲು ಅಪೇಕ್ಷಿಸುತ್ತೇನೆ. ಇಂಡಸ್ಟ್ರೀಸ್ ವಿಷಯದಲ್ಲಿ ಸ್ವರಾಜ್ಯ ಬರುವುದಕ್ಕೆ ಮೊದಲು ನಮ್ಮ ಮೈಸೂರುದೇಶ ಇಡೀ ಇಂಡಿಯಾ ದೇಶಕ್ಕೆ ಒಂದು ಮಾದರಿಯ ದೇಶ ಆಗಿತ್ತು. ಅಲ್ಲಿಂದ ಈಚೆಗೂ ಕೂಡ ಕೆಲವು ಕಾಲ ಪ್ರಗತಿಯನ್ನು ಸಾಧಿಸಿತು. 1956 ನೇ ಇಸವಿಯಿಂದ ಈಚೆಗೆ, ಎಂದರೆ ರೀರ್ಆರ್ಗನೈಸೇಷನ್ ಆಫ್ ಸ್ಟೇಟ್ಸ್ ಆದಮೇಲೆ, ನಮ್ಮ ದೇಶ ಬಹಳ ಹಿಂದೆ ಬಿತ್ತು. ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಕೈಗಾರಿಯ ಅವನತಿ ಪ್ರಾರಂಭವಾಗಿದೆ. ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸುವುದು ಇರಲಿ, ಇದ್ದ ಕೈಗಾರಿಕೆಗಳನ್ನು ಕೂಡ ಒಂದು ಸುವ್ಯವಸ್ಥಿತವಾದ ಆದಾಯ ದೃಷ್ಟಿಯಿಂದ ನಡೆಸಿಕೊಂಡು ಹೋಗತಕ್ಕ ಶಕ್ತಿ ಕೂಡ ಸರ್ಕಾರಕ್ಕೆ ಇಲ್ಲವಾಗಿದೆ. ಇವೊತ್ತಿನ ದಿವಸ ಪ್ರಪಂಚದ ಮುಂದುವರೆದ ರಾಷ್ಟ್ರಗಳಲ್ಲಿ ಜನಗಳ ಜೀವನಮಟ್ಟ ಯಾವರೀತಿ ಏರುತ್ತಾ ಇದೆ, ಜನಗಳ ಜೀವನ ಯಾವರೀತಿ ಸುಖಮಯವಾಗಿದೆ, ಅವರು ಈ ಭೂಮಂಡಲದಲ್ಲಿ ಯಾವರೀತಿ ಒಂದು ಸ್ವರ್ಗವನ್ನು ಸ್ಥಾಪಿಸಿದ್ದಾರೆ ಇದಕ್ಕೆಲ್ಲಾ ಮುಖ್ಯ ಕಾರಣ, ಕೈಗಾರಿಕಾ ಪ್ರಗತಿ. ಕೈಗಾರಿಕೆಯಿಂದ ಜೀವನ ಮಟ್ಟ ಏರುವುದು ಅಲ್ಲದೆ, ಇವೊತ್ತಿನ

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ದಿವನ ಆಟೋಮೇಷನ್ ಮತ್ತು ಎಲೆಕ್ಟ್ರಾನಿಕ್ಸ್ ಸಹಾಯದಿಂದ ನಮ್ಮ ಭೂಮಂಡಲದಲ್ಲಿ ಒಂದು ಸ್ವರ್ಗವನ್ನೇ ಸ್ಥಾಪನೆ ಮಾಡುತ್ತಾ ಇದ್ದಾರೆ. ಇಂತಹ ಪ್ರಗತಿಯನ್ನು ಪರದೇಶ ದವರು ಸಾಧಿಸುತ್ತಾ ಇರುವಾಗ ನಮ್ಮ ದೇಶದವರು ಕೈಗಾರಿಕಾ ಪ್ರಗತಿಗೆ ಸ್ವಲ್ಪವೂ ಗಮನ ಕೊಡದೇ ಕಣ್ಣುಮುಚ್ಚಿಕೊಂಡು ಅಂಧಕಾರ ನೀತಿಯನ್ನು ಅನುಸರಿಸುವುದನ್ನು ನೋಡಿದರೆ, ಇದು ನಮ್ಮ ದುರಾದೃಷ್ಟ ಎಂದು ವಿಧಿ ಇಲ್ಲದೇ ಹೇಳಬೇಕಾಗಿದೆ. ನಮ್ಮ ಮಾನ್ಯ ಸಚಿವರ ವಿಷಯದಲ್ಲಿ ವೈಯಕ್ತಿಕವಾಗಿ ಏನನ್ನೂ ಹೇಳಲು ಇಷ್ಟಪಡುವುದಿಲ್ಲ. ಆದರೆ ಈ ಇಂಡಸ್ಟ್ರೀಸ್ ವಿಷಯದಲ್ಲಿ ಮುಂದಗಾಮಿ ನೀತಿಯನ್ನು ನಾವು ವಿರೋಧಿಸಬೇಕಾಗಿದೆ. ಇವರು ಬಂದಮೇಲೆ ನಾಲ್ಕು ವರ್ಷ ದಿಂದ ಯಾವ ಪ್ರಗತಿಯನ್ನು ನಮ್ಮ ದೇಶದಲ್ಲಿ ತೋರಿಸಿದ್ದಾರೆ ಎಂದು ಕೇಳುತ್ತೇನೆ. ಯಾವ ಬಾಬಿನಲ್ಲಿಯೇ ಆಗಲಿ ಅರ್ಬನ್‌ಇಂಡಸ್ಟ್ರೀಸ್‌ನಲ್ಲಿ ಆಗಲಿ, ರೂರಲ್ ಇಂಡಸ್ಟ್ರೀಸ್‌ನಲ್ಲಿ ಆಗಲಿ ಏನು ಪ್ರಗತಿ ಸಾಧಿಸಿದ್ದಾರೆ ? ಈ ರೀತಿ ಒಂದು ಮುಂದಗಾಮಿ ನೀತಿಯನ್ನು ಅನುಸರಿಸಿದರೆ ನಮ್ಮ ದೇಶ ಎಲ್ಲಿ ಇರುತ್ತದೆ ? ಅಕ್ಕಪಕ್ಕದ ರಾಷ್ಟ್ರಗಳಾದ ಆಂಧ್ರ ಮತ್ತು ಮದ್ರಾಸ್ ನೋಡಿದರೆ, ಅವರ ಪ್ರಗತಿ ಯಾವ ಮಟ್ಟದಲ್ಲಿ ಇದೆ, ನಮ್ಮ ಪ್ರಗತಿ ಯಾವ ಮಟ್ಟದಲ್ಲಿ ಇದೆ ? ಈ ಮಟ್ಟದಲ್ಲಿ ಮುಂದು ವರಿದರೆ ಮೈಸೂರು ರಾಜ್ಯದಲ್ಲಿ ಜನರ ಜೀವನ ಯಾವ ಮಟ್ಟದಲ್ಲಿ ಇರುತ್ತದೆ ! ನಮ್ಮಲ್ಲಿ ಆಹಾರದ ಕೊರತೆ ಇದೆ. ಆಹಾರದಲ್ಲಿ ಹೆಚ್ಚು ಪ್ರಗತಿಯನ್ನು ಸಾಧಿಸುವುದಕ್ಕೆ ಆಗಿಲ್ಲ. ನಮ್ಮಲ್ಲಿ ಕೈಗಾರಿಕೆ ಗಳನ್ನು ಸ್ಥಾಪಿಸುವುದು ಅನಿವಾರ್ಯವಾದುದು. ಇದನ್ನು ಅವರು ಮನಗಂಡಿಲ್ಲವೇ ? ಸರ್ಕಾರ ಈ ರೀತಿ ಕಣ್ಣುಮುಚ್ಚಿಕೊಂಡು ಕುಳಿತುಕೊಂಡರೆ ಜನರು ಏನು ಮಾಡಬೇಕು ? ಇನ್ನು ಮುಂದೆಯಾದರೂ ಈ ರೀತಿ ಮುಂದಗಾಮಿ ನೀತಿಯನ್ನು ಅನುಸರಿಸದೆ ಹೆಚ್ಚು ಹೆಚ್ಚು ಕೈಗಾರಿಕೆಗಳಿಗೆ ಹಣವನ್ನು ಒದಗಿಸಿ ಕೇಂದ್ರ ಸರ್ಕಾರದ ಸಹಾಯ ಪಡೆದು ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು ಎಂದು ನಾನು ಅವರಿಗೆ ಸಲಹೆ ಮಾಡುತ್ತೇನೆ. ಇಂಡಸ್ಟ್ರಿಯಲ್ ಪ್ಲಾನಿಂಗ್ ತಗೆದುಕೊಂಡರೆ, ಯಾರೋ ಒಬ್ಬರು ಹೇಳುತ್ತಾರೆ, ನಮ್ಮ ದೇಶದಲ್ಲಿ " much of the development is not soundly planned and economically justifiable " ಎಂದು. ಅದು ನಮ್ಮ ರಾಜ್ಯಕ್ಕೂ ಕೂಡ ಅನ್ವಯಿಸುತ್ತದೆ. ಇಂಡಸ್ಟ್ರಿಯಲ್ ಪ್ಲಾನಿಂಗ್‌ನಲ್ಲಿ ಡಿಫೆಕ್ಟ್ ಇದೆ. ಅದು ಎಕನಾಮಿಕಲ್ ಆಗಿ ವರ್ಕ್ ಔಟ್ ಆಗುವುದಿಲ್ಲ. ಸಿಲ್ಕ್ ಇಂಡಸ್ಟ್ರೀಸ್ ತೆಗೆದುಕೊಂಡರೆ, ಅದಕ್ಕೆ ಏನೋ ಖಾಯಿಲೆ ಬಂದಿದೆ. ಯಾವಾಗಲೂ ನಷ್ಟ ತೋರಿಸುತ್ತಾ ಇದೆ. ಅದಕ್ಕೆ ಪರಿಹಾರ ಮಾರ್ಗ ಕಂಡುಹಿಡಿಯು ವುದಕ್ಕಾಗುತ್ತಾ ಇಲ್ಲ. ಸ್ಟೇಂಡ್ ಪ್ಲಾನಿಂಗ್ ಇದ್ದ ಪಕ್ಷದಲ್ಲಿ ಈ ತರಹ ಆಗುವುದಿಲ್ಲ. ಏನೋ ಯೋಚನೆ ಮಾಡುತ್ತಾ ಏನೋ ಮಾಡುತ್ತೇವೆ. ಆದುದರಿಂದ ಲುಕ್ಸಾನು ಸಂಭವಿಸುತ್ತದೆ ಎಂದು ನಾನು ಹೇಳಬೇಕಾಗಿದೆ. ಇನ್ನು ಸಾಮಾನ್ಯವಾಗಿ ಇಂಡಸ್ಟ್ರೀಸ್‌ನ್ನು ಅರ್ಬನ್ ಏರಿಯಾದಲ್ಲಿ ಅದರಲ್ಲೂ ಬೇಂಗಳೂರು ನುತ್ತಮುತ್ತ ಕಾನ್‌ಸೆನ್‌ಟ್ರೇಟ್ ಮಾಡುತ್ತಾ ಇದ್ದಾರೆಯೇ ಹೊರತು ರೀಜನಲ್ ಪ್ಲಾನಿಂಗ್ ಮಾಡುತ್ತಾ ಇಲ್ಲ. ಶ್ರೀ ಎಂ. ಮುನಿಷಿಯವರು ಇಂಡಿಯನ್ ಸ್ಟ್ಯಾಟಿಸ್ ಟಿಕಲ್ ಇನ್‌ಸ್ಟಿಟ್ಯೂಟ್‌ನ ಒಂದು ರಿಪೋರ್ಟ್ ಕೊಟ್ಟಿದ್ದಾರೆ. ಅದರಲ್ಲಿ Districtwise Distribution of the number of perennial and seasonal factories (Registered) and percentages thereof (in relation to total in each year) from 1949 to 1956 ಹಳೇ ಮೈಸೂರಿಗೆ ಅನ್ವಯಿಸುವಂತೆ ಕೊಟ್ಟಿದ್ದಾರೆ. ಅದರಲ್ಲಿ ನೋಡಿದರೆ, ಬೆಂಗಳೂರಿನಲ್ಲಿ 60.79 ಇಂಡಸ್ಟ್ರೀಸ್ ಇದೆ, ಮೈಸೂರಿನಲ್ಲಿ 16.47 ಇದೆ, ಕೋಲಾರದಲ್ಲಿ 4.88 ಇದೆ, ಮಂಡ್ಯದಲ್ಲಿ 1.93 ಇದೆ, ತುಮಕೂರು 4.20 ಇದೆ, ಚಿತ್ರದುರ್ಗದಲ್ಲಿ 2.61 ಇದೆ, ಶಿವಮೊಗ್ಗಾದಲ್ಲಿ 3.40 ಇದೆ, ಹಾಸನದಲ್ಲಿ 1.36 ಇದೆ. ಚಿಕ್ಕಮಗಳೂರಿನಲ್ಲಿ 2.27 ಇದೆ ಮತ್ತು ಬಳ್ಳಾರಿಯಲ್ಲಿ 2.04 ಇದೆ. ಈ ತರಹ ರೀಜನಲ್ ಇಂಬ್ಯಾಲೆನ್ಸ್ ಇದೆ. ಇದು ಮೊದಲಿನಿಂದ ಬಂದಿದೆ. ನಮ್ಮ ಸರ್ಕಾರದವರು ಎತಕ್ಕೋಸ್ಕರ ಇದನ್ನು ಸರಿಮಾಡಬಾರದು ? ಒಂದೇ ಪ್ರದೇಶದಲ್ಲಿ ಇಂಡಸ್ಟ್ರಿ ಕಾನ್‌ಸನ್‌ಟ್ರೇಟ್ ಆಗುತ್ತಾ ಹೋದರೆ ಬೇರೆ ಜನಗಳಿಗೆ ಅದರಿಂದ ಅನುಕೂಲವಾಗುತ್ತದೆಯೇ, ಬೇರೆ ಪ್ರದೇಶಗಳೂ ಸರಿಸಮಾನವಾದ ಬೆಳೆವಣಿಗೆಯನ್ನು ಪಡೆಯಬಾರದೇ ? ಕೆಲವು ತೊಂದರೆಗಳು ಇರಬಹುದು. ಬೆಂಗಳೂರಿನ ಸುತ್ತಮುತ್ತ ಕೈಗಾರಿಕೆಗಳು ಬೆಳೆಯುವ ಮಟ್ಟದಲ್ಲಿ ಬೆಳೆಯುದಕ್ಕೆ ಸಾಧ್ಯ ಇಲ್ಲದೆ ಇದ್ದರೂ ಕೂಡ ಹಳೇ ಮೈಸೂರು ಮತ್ತು ಹೊಸ ಮೈಸೂರಿನ ಇತರ ಡಿಸ್ಟ್ರಿಕ್ಟ್‌ಗಳಲ್ಲಿಯಾದರೂ ಕೂಡ ಹೆಚ್ಚು ಹೆಚ್ಚು ಕೈಗಾರಿಕೆಗಳನ್ನು ಸ್ಥಾಪನೆ ಮಾಡಿ ಅವುಗಳನ್ನು ಸರಿಸಮಾನವಾದ ಮಟ್ಟಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಯಾವಾಗ ಮಾಡುತ್ತೀರಿ ? ಯೋಚನೆ ಬೇಡವೇ, ಪ್ಲಾನಿಂಗ್ ಬೇಡವೇ ಎಂದು ಸರ್ಕಾರವನ್ನು ಕೇಳುತ್ತೇನೆ. ಸಾಮಾನ್ಯವಾಗಿ ಕಣ್ಣುಮುಚ್ಚಿಕೊಂಡು ಕುಳಿತು ಕೊಂಡು ಮನಸ್ಸಿಗೆ ಬಂದಂತೆ ಕೆಲಸಕಾರ್ಯಗಳನ್ನು ಮಾಡಿದರೆ ಒಂದು ಹಾರ್ಮೋನಿಯಸ್

ಡೆವಲಪ್‌ಮೆಂಟ್, ಅಂದರೆ ಸರಿಸಮಾನವಾದ ಬೆಳವಣಿಗೆ ಸಾಧ್ಯವೇ ಎಂದು ಸರ್ಕಾರದವರನ್ನು ಕೇಳುತ್ತೇನೆ. ಈಗಲಾದರೂ ಕೂಡ ಇದಕ್ಕೆ ನಿಗಾ ಕೊಟ್ಟು ಎಲ್ಲಾ ಡಿಸಿಕ್ಟ್‌ಗಳ ಪ್ರಗತಿಯನ್ನು ಸಾಧಿಸುವುದಕ್ಕೆ ಒಂದು ನಮಗ್ರವಾದ ಯೋಜನೆಯನ್ನು ಹಾಕಿಕೊಂಡು ಇಂಡಸ್ಟ್ರೀಸ್ ಬೆಳವಣಿಗೆಗೆ ಸಹಕಾರಿಯಾಗುವಂಥ ಪಾಲಿಸಿಯನ್ನು ಪಾರ್ಮುಲೇಟ್ ಮಾಡಬೇಕು ಎಂದು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಇನ್ನು ಈ ಇಂಸ್ಟ್ರಿಯರ್ ಪ್ಲಾನ್‌ನಲ್ಲಿ ಹೇಳುವುದೇನೆಂದರೆ, ನಮ್ಮ ಇಂಡಿಯಾ ದೇಶದಲ್ಲಿ ಸಾಮಾನ್ಯವಾಗಿ ವ್ಯವಸಾಯಕ್ಕೂ ಕೈಗಾರಿಕೆಗಳಿಗೂ ಸಂಬಂಧವಿಲ್ಲ. ನಾನಾದರೂ ಹೇಳುವುದೇನೆಂದರೆ, ವ್ಯವಸಾಯಕ್ಕೂ ಕೈಗಾರಿಕೆಗಳಿಗೂ ಪರಸ್ಪರ ಸಂಬಂಧವಿರಬೇಕು. ಅದು ಇಲ್ಲದಿದ್ದರೆ ದೇಶದ ಸರ್ವತೋಮುಖವಾದ ಬೆಳವಣಿಗೆಯು ಕುಂಠಿತವಾಗುತ್ತದೆ. ಕುಚಿರಾಲ್ ಇಂಡಸ್ಟ್ರಿಯರ್ ಎಕನಮಿ ಆಫ್ ಇಂಡಿಯು ಈ ರೀತಿ ಹೇಳುತ್ತದೆ. ಇಲ್ಲಿ ಕೆಲವು ಅಂಶಗಳನ್ನು ತಮ್ಮ ಮುಂದೆ ಓದುತ್ತೇನೆ ;

> "Over rapid and unbalanced growth of the industrial sector unaccompanied by complementary charges in the agricultural sector may give rise to phenomena which in the long run are likely to retard economic development balance of payments difficulties, inflation excessive urbanisation. The disruption of accepted social patterns".....A sound industrialisation policy must include measures to ease the burden in transition of agrarian society, which is thus affected."

ಇದರಿಂದ ಒಂದು ಕೈಗಾರಿಕೆಗೂ ವ್ಯವಸಾಯಕ್ಕೂ ಸಂಬಂಧವಿಲ್ಲದಿದ್ದರೆ ದೇಶದ ಬೆಳವಣಿಗೆಯು ಸರ್ವತೋಮುಖವಾಗಿ ಕುಂಠಿತನಾಗುತ್ತದೆ. ಇದರಿಂದ ಒಂದು ವರ್ಗದವರ ಸಂರಕ್ಷಣೆಯಾಗುವುದೇ ಹೊರತು ಹಿಂದುಳಿದ ಜನಾಂಗದವರ ಅಭಿವೃದ್ಧಿಯು ಕುಂಠಿತವಾಗುತ್ತದೆ ಮತ್ತು ಅವರಿಗೆ ತೊಂದರೆಯಾಗುತ್ತದೆ. ಈ ತರಹ ಇಂಡಸ್ಟ್ರಿಯರ್ ಅಥವಾ ಕೈಗಾರಿಕಾ ಬೆಳವಣಿಗೆಯಿಂದ ದೇಶಕ್ಕೆ ಅನುಕೂಲವಾಗಬೇಕು. ಈಗ ಸಾಮಾನ್ಯವಾಗಿ ಪರದೇಶಗಳನ್ನು ನೋಡುವುದಾದರೆ, ರಷ್ಯಾ ಅಥವಾ ಅಮೇರಿಕಾ ದೇಶದವರು ವ್ಯವಸಾಯವನ್ನೆ ಮುಖ್ಯವಾಗಿ ಇಟ್ಟುಕೊಂಡು ಕೈಗಾರಿಕೆಗಳನ್ನು ಬೆಳೆಸಿದ್ದಾರೆ. ಅಮೇರಿಕ.ಮತ್ತು ರಷ್ಯಾ ದೇಶವನ್ನು ನೋಡುವುದಾದರೆ ಅವರು ಅವರಿಗೆ ಬೇಕಾದ ಟ್ರಾಕ್ಟರ್ಸ್ ಮತ್ತು ಟ್ರಕ್ಸ್‌ಗಳನ್ನು ಬೇಕಾದಷ್ಟು ತಯಾರು ಮಾಡಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ಈ ತರದ ಎಷ್ಟು ಕೈಗಾರಿಕೆಗಳು ಇವೆ ಎಂದು ನಾನಾದರೂ ಕೇಳುತ್ತೇನೆ. ಅದಲ್ಲದೆ ಅಲ್ಲಿ ತಯಾರಾದ ರಾರಿಗಳಲ್ಲಿ ಮೂರನೇ ಒಂದು ಭಾಗವು ಅಗ್ರಿಕಲ್ಚರಲ್ ಪರ್‌ಪಸಿಗೋಸ್ಕರ ಮೀಸಲಾಗಿಟ್ಟಿದ್ದಾರೆ. ಆ ತರಹ ಒಂದಾದರೂ ನಮ್ಮ ದೇಶದಲ್ಲಿದೆಯೇ ! ಇವತ್ತು ಇದನ್ನು ನನ್ನ ಅನುಭವದಿಂದ, ಹೇಳುತ್ತಿದ್ದೇನೆ. ಇವತ್ತು ನಮ್ಮ ದೇಶದಲ್ಲಿ ಎಲ್ಲೆ ನೋಡಿದರೂ ರಸ್ತೆಗಳಲ್ಲಿ ಸಾವಿರಾರು ರಾರಿಗಳ ಓಡಾಟ. ಆದರೆ ನಮ್ಮ ರೈತರಿಗೆ, ಅವನ ವ್ಯವಸಾಯ ಅಭಿವೃದ್ಧಿಗೋಸ್ಕರ ಕೊಂಡುಕೊಳ್ಳಲು ಶಕ್ತಿ ಇದೆಯೇ ? ಇದಕ್ಕೆ ಸರ್ಕಾರದವರು ಏನಾದರೂ ಸೌಲಭ್ಯ ಒದಗಿಸುತ್ತಿದ್ದಾರೆಯೇ ! ಇವತ್ತು ರೈತನು ಕೇವಲ ಕೆಳಮಟ್ಟದಲ್ಲಿದ್ದಾನೆ. ಅವನಿಗೆ ಇಂತಹ ಧುರ್ಭಿಕ್ಷ ಸಮಯದಲ್ಲಿ ಕೇವಲ ಬಾಡಿಗೆಗೆ ಸ್ವಲ್ಪ ಕಡಿಮೆಯಲ್ಲಿ ಕೊಡುವ ಏನಾದರೂ ಏರ್ಪಾಡು ಮಾಡಿದ್ದಾರೆಯೇ ಎಂದು ನಾನು ಇಲ್ಲಿ ತಮ್ಮನ್ನು ಕೇಳುತ್ತಿದ್ದೇನೆ. ಅಥವಾ ಅವನಿಗೆ ಧನ ಸಹಾಯ ಇತ್ಯಾದಿಗಳನ್ನು ಒದಗಿಸಿದ್ದರೆ ಎಷ್ಟು ಪ್ರಗತಿಯಾಗುತ್ತದೆ ಎಂಬುದನ್ನು ನಾವು ಯೋಚನೆ ಮಾಡಬೇಕು. ಪರದೇಶದಿಂದ ಸಾವಿರಾರು ಟನ್ಸ್ ಗೊಬ್ಬರ ಫರ್ಟಿಲೈಸರ್ಸ್ ತರುವುದನ್ನು, ಇಲ್ಲಿಯೇ ಮಾಡಿದರೆ ನಿಲ್ಲಿಸಬಹುದಲ್ಲವೇ. ಇದರಿಂದ ಫಾರಿನ್ ಎಕ್ಸ್‌ಚೇಂಜ್ ಉಳಿಯುತ್ತದೆ. ಇದನ್ನೆಲ್ಲಾ ಸ್ವಲ್ಪ ಧೀರ್ಘವಾಗಿ ಆಲೋಚನೆ ಮಾಡಿ ಕೈಗಾರಿಕಾ ಅಭಿವೃದ್ಧಿಯಲ್ಲಾ ಈ ವ್ಯವಸಾಯಕ್ಕೆ ಮಾನ್ಯತೆ ಕೊಡಬೇಕೆಂದು ಸಲಹೆ ಮಾಡುತ್ತೇನೆ.

ನಮ್ಮ ಈ ಮೈಸೂರು ದೇಶದಲ್ಲಿ ಒಂದು ಟ್ರಾಕ್ಟರ್ ಪ್ಲಾಂಟ್ ಕೂಡ ಇಲ್ಲ. ಅನೇಕ ವೇಳೆ ಇದನ್ನು ಕೇಳುತ್ತಿದ್ದೇವೆ. ಇಲ್ಲಿ ಒಂದು ಟ್ರಾಕ್ಟರ್ ಪ್ಲಾಂಟ್ ಬಹಳ ಅತ್ಯಗತ್ಯವೆಂದು ನಾನಾದರೂ ಹೇಳುತ್ತೇನೆ. ನಮ್ಮ ರಾಜ್ಯದಲ್ಲಿ ತಾವು ಒಂದು ಟ್ರಾಕ್ಟರ್ ಪ್ಲಾಂಟ್ ಪ್ರಾರಂಭ ಮಾಡಿ ಉಳಿದವರಿಗೆಲ್ಲಾ ಒಂದು ಆದರ್ಶವಾಗಬೇಕೆಂದು ಕೇಳಿಕೊಳ್ಳುತ್ತೇನೆ. ಈ ತರಹ ಮಾಡಿ ರೈತರಿಗೆಲ್ಲಾ ಒದಗಿಸಿಕೊಟ್ಟರೆ, ನಮಗೂ ಸಂತೋಷ, ರಾಜ್ಯಕ್ಕೂ ಒಂದು ಒಳ್ಳೆಯ ಹೆಸರು ಬರುತ್ತದೆ. ಆದೇ ರೀತಿ ರಾರಿಗಳನ್ನೂ ಕೂಡ ಒದಗಿಸುವ ಏರ್ಪಾಡು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಇನ್ನು ನಮ್ಮ ರಾಜ್ಯದಲ್ಲಿ ಸಣ್ಣ ಕಾರು ತಯಾರು ಮಾಡುವ ಯೋಚನೆಯಿಲ್ಲದ್ದಾರೆ. ಇದರಿಂದ ಭೋಗಿಗಳಿಗೆ ಅನುಕೂಲವೇ ಹೊರತು ಸಾಮಾನ್ಯ ಜನರಿಗೆ ಅನುಕೂಲವಾಗುವುದಿಲ್ಲ; ರೈತರಿಗೂ ಅನುಕೂಲವಾಗುವುದಿಲ್ಲ. ಆದ್ದರಿಂದ ಮುಖ್ಯವಾಗಿ ರೈತರಿಗೆ ಬೇಕಾದ ಲಾರಿ, ಡಂಪರುಗಳನ್ನು ಟ್ರ್ಯಾಕ್ಟರುಗಳನ್ನು ಒದಗಿಸಬೇಕು. ಹೀಗೆ ಒದಗಿಸಿದರೆ, ಕೋಟ್ಯಾಂತರ ರೂಪಾಯಿ ಖರ್ಚಾಗತಕ್ಕ ಸನ್ನಿವೇಶ ಉಳಿಯುತ್ತದೆ. ಇಂತಹ ರೈತರಿಗೆ ಬೇಕಾದ ಸಾಮಗ್ರಿಗಳನ್ನು ನಮ್ಮ ರಾಜ್ಯದಲ್ಲೆ ತಯಾರುಮಾಡುವುದಕ್ಕೆ ಪ್ರಾರಂಭ ಮಾಡಬೇಕು. ಹೀಗೆ ಮಾಡಿದ ಪಕ್ಷದಲ್ಲಿ ನಮ್ಮ ವ್ಯವಸಾಯ ಮುಂದುವರಿಯುತ್ತದೆ. ಇದಕ್ಕೆರ್ಾ ಅವಕಾಶ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಇಂಡಸ್ಟ್ರಿ ವಿಚಾರದಲ್ಲಿ ರೂರರ್ ಇಂಡಸ್ಟ್ರಿಯನ್ನು ತಾವು ಮರೆತು ಬಿಟ್ಟಿದ್ದೀರಿ. ಸರ್. ವಿಶ್ವೇಶ್ವರಯ್ಯನವರ ಕಾಲದಲ್ಲಿ ರೂರರ್ ಇಂಡಸ್ಟ್ರೀಸ್ ಅಭಿವೃದ್ಧಿ ಮಾಡಬೇಕು, ಗ್ರಾಮಾಂತರ ಪ್ರದೇಶಗಳ ಜನರ ಜೀವನ ಮಾಟ್ಟವನ್ನು ಉತ್ತಮ ಪಡಿಸಿಕೊಳ್ಳುವುದಕ್ಕೆ ರೂರಲ್ ಏರಿಯಾಗಳು ಇಂಡಸ್ಟ್ರಿಯಲೈಸ್ ಆದರೆ ಮಾತ್ರ ಅದು ಸ್ವಾಧ್ಯ ಎಂದು ಹೇಳಿರುತ್ತಾರೆ. ಆದರೆ ಇದು ಬರೀ ಸ್ಲೋಗಾನ್ ತರ ಆಗಿ ಉಳಿದಿದೆಯಲ್ಲದೆ ಕಾರ್ಯರೂಪಕ್ಕೆ ಬರಲಿಲ್ಲ. List of small scale industrial establishments classified under 13 major heads mining plantation-food except beverages gur, leather products, paper, wood etc. ಎಂದು ಇದೆ. ಈ ಸ್ಮಾರ್ ಸ್ಕೇರ್ ಇಂಡಸ್ಟ್ರಿಯಲ್ಲಿ ಜತ್ತಿ ಸಾಹೇಬರೂ ಕೂಡ ಒಬ್ಬ ಮೆಂಬರಾಗಿದ್ದಾರೆ. ಇದರಲ್ಲಿ ಹೇಳಿದ್ದೆರ್ಾ ಬರೀ ಪುಸ್ತಕದ ಬದನೆಕಾಯಿಯಾಗಿ ಉಳಿದಿದೆಯೇ ಹೊರತು ಯಾವುದನ್ನು ಕಾರ್ಯಗತ ಮಾಡತಕ್ಕಂತಹದು ಇಲ್ಲ ಎಂದು ಹೇಳುವುದಕ್ಕೆ ಬಹಳ ವಿಷಾದಕರ ವಾಗುತ್ತದೆ. ಹೀಗೆ ತಾವು ಗ್ರಾಮಾಂತರ ಪ್ರದೇಶಗಳನ್ನು ಅಲಕ್ಷ್ಯ ಮಾಡಿದರೆ ಸರ್ಕಾರದ ಘನತೆಯು ಕುಂಠಿತವಾಗುವುದು ಮತ್ತು ಜನರಿಗೆ ಸರ್ಕಾರದಲ್ಲಿ ನಂಬಿಕೆಯು ಉಳಿಯಲಾರದು ಎಂದು ನಾನು ಹೇಳುತ್ತೇನೆ. ಇನ್ನಾದರೂ ಕೂಡ ತಾವು ಗಮನ ಕೊಟ್ಟು ಗ್ರಾಮಾಂತರ ಪ್ರದೇಶಗಳಲ್ಲಿ ರೂರರ್ ಇಂಡಸ್ಟ್ರೀಸ್ ಮತ್ತು ಸ್ಮಾರ್ ಸ್ಕೇರ್ ಇಂಡಸ್ಟ್ರಿಗಳನ್ನು ಸ್ಥಾಪನೆ ಮಾಡುವುದಕ್ಕೆ ತೀವ್ರ ಗಮನ ಕೊಡಬೇಕೆಂದು ಹೇಳಬಯಸುತ್ತೇನೆ. ಸ್ಮಾಲ್ ಸ್ಕೇರ್ ಇಂಡಸ್ಟ್ರಿಗಳನ್ನು ಹಳ್ಳಿಗಳಲ್ಲಿ ಸ್ಥಾಪನೆ ಮಾಡುವುದಕ್ಕೆ ತುಂಬಾ ತೊಂದರೆ ಇದೆ ಎಂದು ಹೇಳುತ್ತಾರೆ. A report of Japanese Delegation on small scale industries says : Small scale industries in Japan generally have a long history of about 20 to 30 years. They have come from various places and towns and succeeded in laying solid foundations, both technical and otherwise. Many of the present big industries were once small enterprises with a flimsy economic background.

12-30 P.M.

ಅಷ್ಟು ಕಷ್ಟಪಟ್ಟು ಜಪಾನಿನವರು ಸ್ಥಾಪನೆ ಮಾಡಿದ್ದಾರೆ. ಆದರೆ ನಮ್ಮ ದೇಶದಲ್ಲಿ ಅಷ್ಟು ಪ್ರಯತ್ನ ನಡೆಯಲಿಲ್ಲ ಎಂದು ಘಂಟಾಘೋಷವಾಗಿ ಹೇಳಬೇಕಾಗಿದೆ. ಪ್ರಯತ್ನ ಪಟ್ಟರೆ ಎಲ್ಲವನ್ನೂ ಸಾಧನೆ ಮಾಡಬಹುದು. ಇದರಿಂದ ನೀವೆರ್ಾ ಇದನ್ನು ನೋಡಿಯೂ ನುಮ್ಮನೆ ಕುಳಿತಿದ್ದೀರಿ ಎಂದು ನಾವು ಭಾವಿಸಬೇಕಾಗಿದೆ.

ಆಮೇಲೆ ಫುಡ್ ಇಂಡಸ್ಟ್ರೀಸ್ ವಿಷಯದಲ್ಲಿ ಅನೇಕ ಸಲ ಮಾತನಾಡುತ್ತಿದ್ದಾರೆ. ಮೊದಲಿಂದಲೂ ಕೂಡ ನಮ್ಮ ದೇಶದಲ್ಲಿ ಆಹಾರ ಕೊರತೆ ವಿಪರೀತವಾಗಿದೆ. ಇಷ್ಟಾದರೂ ಕೂಡ ನಮ್ಮ ದೇಶದಲ್ಲಿ ಫುಡ್ ಪ್ರೊಸೆಸಿಂಗ್ ಮಾಡುವುದಕ್ಕೆ ಪ್ರಾರಂಭ ಮಾಡಲಿಲ್ಲ; ಇದಕ್ಕೆ ಏನು ಕಾರಣವೆಂದು ನಾನಾದರೂ ಕೇಳುತ್ತೇನೆ. ನಮ್ಮ ಮೈನೂರಿನಲ್ಲಿ ಈಗ ಒಂದು ಫುಡ್ ಟೆಕ್ನಾಲೋಜಿಕರ್ ಸಂಸ್ಥೆ ಇದೆ. ಬೇಕಾದಷ್ಟು ಅವಕಾಶ ಇದ್ದರೂ ಕೂಡ ಅಂತಹ ಕೈಗಾರಿಕೆಗಳನ್ನು ಏಕೆ ನಮ್ಮ ದೇಶದಲ್ಲಿ ಹೆಚ್ಚಾಗಿ ಸ್ಥಾಪನೆ ಮಾಡಿದಾರದು ? ತಾವು ಸಾಧ್ಯವಾದ ಮಟ್ಟಿಗೆ ಈ ನಾಲ್ಕನೆ ಪಂಚವಾರ್ಷಿಕ ಯೋಜನೆಯಲಾರ್ಾದರೂ ಕೂಡ ಈ ಕೈಗಾರಿಕೆಗಳನ್ನು ಎಲ್ಲೆಲ್ಲಿ ಸ್ಥಾಪನೆ ಮಾಡಬೇಕೆಂದು ಒಂದು ವಿವರಣೆಯನ್ನು ತೆಗೆದುಕೊಂಡು ಬಹಳ ಶೀಘ್ರದಲ್ಲೇ ಈ ಆಹಾರದ ಕೊರತೆಯನ್ನು ನೀಗಿಸುವುದಕ್ಕೆ ತೀವ್ರ ಗಮನ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ತಾವು ಗೋಧಿಯನ್ನು ತರಿಸಿ ಜನಗಳಿಗೆ ಹಂಚುವುದಕ್ಕೆ ಕೊಟ್ಟರೆ ಆ ಗೋಧಿಯನ್ನು ಹಾಗೆಯೇ ಇಟ್ಟು ಬ್ಲಾಕ್ ಮಾರ್ಕೆಟ್ ಮಾಡುವುದಕ್ಕೆ ಅವಕಾಶವಾಗುತ್ತದೆ. ಅದರೆ ತರಿಸುವ ಗೋಧಿಯನ್ನೆಲ್ಲ ಬ್ರೆಡ್‌ಗೆ ಪರಿವರ್ತನೆ ಮಾಡಿದರೆ ಅದನ್ನು ಬಚ್ಚಿಡುವುದಕ್ಕೆ ಸಾಧ್ಯವೇ ? ಬ್ಲಾಕ್ ಮಾರ್ಕೆಟ್ ಮಾಡುವುದಕ್ಕೆ ಸಾಧ್ಯವೇ ? ಅದು ಸದ್ವಿನಿಯೋಗವಾಗುತ್ತದೆಯೇ, ಇಲ್ಲವೇ, ತಕ್ಷಣ ಅದನ್ನು ಉಪಯೋಗಿಸುವುದಕ್ಕೆ ಆಗುತ್ತದೆಯೇ ಇಲ್ಲವೇ ಎಂದು ತಮಗೇ ಗೊತ್ತಾಗುತ್ತದೆ. ಅದನ್ನು ಹಾಗೆಯೇ ಇಡುವುದಕ್ಕೆ ಸಾಧ್ಯವೇ ಇಲ್ಲ. ಅದನ್ನು ಹಂಚುವಾಗ ಹೆಚ್ಚು ರಾಭ ಸಂಪಾದನೆ ಮಾಡುವುದಕ್ಕಾಗಲೀ, ದುರ್ವ್ಯವಹಾರ ಮಾಡುವುದಕ್ಕಾಗಲೀ ಅವಕಾಶವಿರುವುದಿಲ್ಲ.

ಸರ್ಕಾರದವರು ಹೆಚ್ಚು ಗಮನಕೊಟ್ಟು ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಸಹಾಯಕಾರಿಯಾಗುವಂತೆ ಪ್ರಯತ್ನ ಮಾಡಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಸೋಷಿಯಲೈಜೇಷನ್ ಆಫ್ ಇಂಡಸ್ಟ್ರೀಸ್. ನಮ್ಮ ಇಂಡಿಯನ್ ರಿಪಬ್ಲಿಕ್‌ನಲ್ಲಿ ನಾನು ಸೋಷಿಯಲಿಸ್ಟಿಕ್ ಪ್ಯಾಟರನ್ Socialistic pattern of Society ಆಫ್ ಸೊಸೈಟಿ ಸ್ಥಾಪನೆ ಮಾಡುತ್ತೇವೆಂದು ಪದೇ ಪದೇ ಹೇಳುತ್ತಿದ್ದಾರೆ. ಹಾಗೆ ಹೇಳುತ್ತಿದ್ದರೂ ಕೂಡ ಸೋಷಿಯಲೈಜೇಷನ್ ಆಫ್ ಇಂಡಸ್ಟ್ರೀಸ್ ಕಡೆ ಸರ್ಕಾರದ ಗಮನ ಹರಿದಿಲ್ಲ, ಅದಕ್ಕೆ ಆದ್ಯತೆಯನ್ನು ಕೊಟ್ಟಿಲ್ಲ. ಖಾನಗಿ ಬಂಡವಾಳವನ್ನು ಕೈಗಾರಿಕೆಗಳಿಗೆ ಆಹ್ವಾನಿಸುತ್ತಾರೆ, ಯಾರು ಬೇಕಾದರೂ ಹಣವನ್ನು ತೊಡಗಿಸಬಹುದು ಎಂದು ಹೇಳಿಕೆಗಳನ್ನು ಸಹ ಕೊಡುತ್ತಿದ್ದಾರೆ. ಅದರೆ ಸೋಷಿಯಲಿಸ್ಟಿಕ್ ಪ್ಯಾಟರ್ನ್ ಆಫ್ ಸೊಸೈಟಿ ತರಬೇಕಾದರೆ ಕೈಗಾರಿಕೆಗಳನ್ನು ಸಮಾಜೀಕರಣ ಮಾಡದೆ ಇದ್ದರೆ ಸಾಧ್ಯವೇ ಎಂದು ಕೇಳುತ್ತಿದ್ದೇನೆ.

Mr. SPEAKER.—Shall we stop at this today or shall we go on for another one hour ? The scheduled time is 8-30 A.M. to 12-30 P.M. I suppose the Member has finished his speech.

Sri H. R. KESHAVA MURTHY.—No, Sir. I want another 15 minutes.

Mr. SPEAKER.—The entire demands have been allotted four hours. I have no objection, but a little co-ordination will be necessary. What shall we do now ?

HON'BLE MEMBERS.—We can adjourn.

Mr. SPEAKER.—The House will now rise to meet on the 24th March at 1 P.M.

The House adjourned at Thirty-Five Minutes past Twelve of the Clock to meet again at One of the Clock on Thursday, the 24th March 1966.

WD 6671—GPB—500—23-6-66

MYSORE LEGISLATIVE ASSEMBLY

Thursday, 24th March 1966.

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

CONDOLENCE REFERENCE

[*re:* **Demise of Sri L. H. Hiregoudar, M.L.C.**]

MR. SPEAKER.— I regret to inform the House with deep sorrow the sudden demise yesterday morning in the Legislators' Home of the Hon'ble Member Sri L. H. Hiregoudar, a sitting Member of the Legislative Council representing the Dharwar Local Authorities' constituency. Sri Hiregoudar was mainly an agriculturist and was also a businessman. He was a staunch Congressman from the very beginning and was member of a number of Social and Political organisations like the District Congress Committee, Pradesh Congress Committee, and President of the Taluk Congress Committee. He was also a member of the Public Accounts Committee of our Legislature. He was doing a lot for the welfare of the people of the State in general and of the people of his Constituency in particular. He was loved by one and all alike and he helped anybody that came to him for help. He leaves behind him his wife and three sons.

I desire, on behalf of the House, to express deep sentiments of the great loss we have sustained and our sympathies to the relatives of the Hon'ble Member. I request the House to stand for a minute in silence to express our sorrow.

(*The Members stood in silence for one Minute*)

I have assessed the feelings of the Members who are deeply moved by this tragic event and the sudden calamity. It is felt we might adjourn for the day as we did on a prior occasion and try to make it up by sitting in the morning tomorrow. I believe that is also the opinion of everybody with whom I have not been able to get in touch. That is

(MR. SPEAKER)

my opinion also. I suppose we now can adjourn to re-assemble tomorrow morning at 8-30; the work that is allotted for today will be taken up tomorrow from 8-30 A.M.

The House now stands adjourned to meet tomorrow at 8-30 A.M.

The House adjourned at Ten Minutes past One of the Clock to re-assemble again at Thirty Minutes past Eight of the Clock on Friday, the 25th March 1966.

KSA LIBRARY, B'lore
B004836
328.32402 548 LAD,1966
JJ35

WD 6678—GPB—500—20-6-66